# ಡೆಬಿಟ್ ಕಾರ್ಡ್‌ಗಳಿಗೆ ನಿಬಂಧನೆಗಳು &ಶರತ್ತುಗಳು

ಈ ನಿಬಂಧನೆಗಳು ಮತ್ತು ಶರತ್ತುಗಳು ಆರ್‌ಬಿಎಲ್ ಬ್ಯಾಂಕ್ ನೀಡುವ ಡೆಬಿಟ್ ಕಾರ್ಡ್‌ಗಳ ವಿತರಣೆ ಮತ್ತು ಬಳಕೆಗೆ ಅನ್ವಯಿಸುತ್ತದೆ ಮತ್ತು ಖಾತೆದಾರರಿಗೆ ಮತ್ತು/ಅಥವಾ ಖಾತೆದಾರರಿಂದ ನಿರ್ದಿಷ್ಟಪಡಿಸಬಹಾದ ಯಾವುದೇ ವ್ಯಕ್ತಿಗೆ ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಪ್ರಕಟಿಸಲ್ಪಡುವುದರಿಂದ ನಿಯಮಗಳು ಮತ್ತು ನಿಬಂಧನೆಗಳು ಕಾಲಕಾಲಕ್ಕೆ ಜಾರಿಯಲ್ಲಿರುತ್ತದೆ.

ಈ ನಿಬಂಧನೆಗಳು ಮತ್ತು ಶರತ್ತುಗಳು("ನಿಬಂಧನೆಗಳು)"ಕಾಲಕಾಲಕ್ಕೆ ಆರ್‌ಬಿಎಲ್ ಬ್ಯಾಂಕ್ ನಿಗದಿಪಡಿಸಿದ ಇತರ ಯಾವುದೇ ನಿಯಮಗಳಿಗೆ ಹೆಚ್ಚುವರಿಯಾಗಿರುತ್ತದೆ. ನಿಯಮಗಳಿಗೆ ಎಲ್ಲಾ ಅನುಬಂಧವು ನಿಬಂಧನೆಗಳ ಸಮಗ್ರ ಭಾಗವನ್ನಾಗಿ ಮಾಡುತ್ತದೆ.

## ನಿರೂಪಣೆಗಳು:

ಈ ನಿಬಂಧನೆಗಳು ಮತ್ತು ಶರತ್ತುಗಳಲ್ಲಿ, ವಿಷಯ ಅಥವಾ ಸಂದರ್ಭಕ್ಕೆ ಯಾವುದಾದರೂ ಅಂಗೀಕಾರ್ಹವಾಗದೇ ಇದ್ದಲ್ಲಿ, ಈ ಕೆಳಗಿನ ಪದಗಳು/ಅಭಿವ್ಯಕ್ತಗಳು ಇಲ್ಲಿ ನೀಡಿದ ಅರ್ಥವನ್ನು ಹೊಂದಿರಬೇಕು:

"ಖಾತೆ" ಎಂದರೆ ಆರ್‌ಬಿಎಲ್ ಬ್ಯಾಂಕ್ ಕಾರ್ಡ್ ಬಳಕೆಯ ಮೂಲಕ ನಿರ್ವಹಣೆಗಳಿಗೆ ಅರ್ಹ ಖಾತೆಗಳಿಗೆ ಗೊತ್ತುಪಡಿಸಿದ ಉಳಿತಾಯ ಮತ್ತು/ಅಥವಾ ಚಾಲ್ತಿ ಖಾತೆಯಾಗಿದೆ.

"ಲೆಕ್ಕ ವಿವರಣೆ" ಎಂದರೆ ಖಾತೆಯಲ್ಲಿ ಆ ದಿನಾಂಕದಂದ ನಡೆಸಿದ ವಹಿವಾಟುಗಳು ಮತ್ತು ಖಾತೆಯಲ್ಲಿನ ಬಾಕಿ, ಮತ್ತು ಆರ್‌ಬಿಎಲ್ ಬ್ಯಾಂಕ್ ಸೇರಿಸಲು ಸೂಕ್ತವೆಂದು ಪರಿಗಣಿಸಬಹುದಾದ ಇತರ ಯಾವುದೇ ಮಾಹಿತಿಯನ್ನು ಹೊಂದಿಸುವ ಮೂಲಕ,ಕಾಲಕಾಲಕ್ಕೆ ಆರ್‌ಬಿಎಲ್ ಬ್ಯಾಂಕ್ ಕಾರ್ಡ್‌ದಾರರಿಗೆ ಕಾಲಕಾಲಕ್ಕೆ ಕಳುಹಿಸಲಾದ ಆವರ್ತಕ ವಿವರಣೆಯಾಗಿದೆ.

"ಖಾತೆದಾರ" ಎಂದರೆ ಆರ್‌ಬಿಎಲ್ ಬ್ಯಾಂಕ್‌ನಲ್ಲಿ ಖಾತೆ ಹೊಂದಿರುವ ವ್ಯಕ್ತಿಗಳು, ಮಾಲೀಕತ್ವಗಳು, ಟಿಎಎಸ್‌ಸಿ(ಟ್ರಸ್ಟ್, ಅಸೇಸಿಯೇಶನ್, ಸೊಸೈಟಿಗಳು, ಕ್ಲಬ್‌ಗಳು)ಪಾಲುದಾರಿಕೆ ಸಂಸ್ಥೆ, ಸಾರ್ವಜನಿಕ ನಿಯಮಿತ ಕಂಪನಿಗಳು, ಖಾಸಗಿ ಕಂಪನಿಗಳು ಮತ್ತು ಎಲ್‌ಎಲ್‌ಪಿ ಸಂಸ್ಥೆ ಸಂಬಂಧಿತಗಳು ಅಥವಾ ಕಂಪನಿಗಳು. ಅದಾಗ್ಯೂ, ಉಳಿತಾಯ ಖಾತೆಯ ಸಂದರ್ಭದಲ್ಲಿ, "ಖಾತೆದಾರ" ಪದವು ಬ್ಯಾಂಕ್‌ನಲ್ಲಿ ಅಂತಹ ಖಾತೆ ಹೊಂದಿರುವ ವ್ಯಕ್ತಿಗಳನ್ನು ಮಾತ್ರ ಸೂಚಿಸುತ್ತದೆ.

"ಅಂಗಸಂಸ್ಥೆ" ಎಂದರೆ ಮತ್ತು ಇದು ಒಳಗೊಂಡಿರುತ್ತದೆ:ಆರ್‌ಬಿಎಲ್ ಬ್ಯಾಂಕ್‌ನ ಷೇರು ಅಥವಾ ಸಹಾಯಕ ಕಂಪನಿ, ಅಥವಾ ಆರ್‌ಬಿಎಲ್ ಬ್ಯಾಂಕ್‌ನ ನಿಯಂತ್ರಣದಲ್ಲಿ ಇರುವ ಅಥವಾ ಸಾಮಾನ್ಯ ನಿಯಂತ್ರಣದಲ್ಲಿರುವ ವ್ಯಕ್ತಿ, ಅಥವಾ ಆರ್‌ಬಿಎಲ್ ಬ್ಯಾಂಕ್ ನೇರ ಅಥವಾ ಲಾಭದಾಯಕ ಹಿತಾಸಕ್ತಿ ಹೊಂದಿರುವ ಅಥವಾ ಮತದಾನ ಭದ್ರತೆಗಳ 26% ಹೆಚ್ಚು ನಿಯಂತ್ರಣ ಹೊಂದಿರುವ ಯಾವುದೇ ವ್ಯಕ್ತಿ. ಈ ಶರತ್ತಿನ ಉದ್ದೇಶಕ್ಕಾಗಿ, ಯಾವುದೇ ವ್ಯಕ್ತಿಗೆ ಸಂಬಂಧಿಸಿದಂತೆ ಬಳಸಿದಾಗ, ವ್ಯಾಕರಣದ ವ್ಯತ್ಯಾಸಗಳೊಂದಿಗೆ "ನಿಯಂತ್ರಣ" ಎಂದರೆ, ಒಪ್ಪಂದ ಅಥವಾ ಬೇರೆ ರೀತಿಯ ಮೂಲಕ, ಮತ

ಹೊಂದಿರುವ ಭದ್ರತೆಗಳ ಮಾಲೀಕತ್ವದ ಮೂಲಕ ನೇರವಾಗಿ ಅಥವಾ ಪರೋಕ್ಷವಾಗಿ  ಅಥವಾ ನೇರವಾಗಿ ಅಂತಹ ವ್ಯಕ್ತಿಯ ನಿರ್ವಹಣೆ ಮತ್ತು ನೀತಿಗಳನ್ನು ನಿರ್ದೇಶಿಸುವ ಅಧಿಕಾರ: ಮತ್ತು "ವ್ಯಕ್ತಿ" ಎಂದರೆ ಕಂಪನಿ, ನಿಗಮ, ಪಾಲುದಾರಿಕೆ, ಟ್ರಸ್ಟ್ ಅಥವಾ ಇತರ ಯಾವುದೇ ಘಟಕ ಅಥವಾ ಇತರ ಸಂಸ್ಥೆ."ಎಟಿಎಂ" ಅಂದರೆ ಆಟೋಮೇಟೆಡ್ ಟೆಲ್ಲರ್ ಮೆಶಿನ್ ಆಗಿದ್ದು, ಭಾರತದಲ್ಲಿ ಅಥವಾ ವಿದೇಶದಲ್ಲಿ, ಆರ್‌ಬಿಎಲ್ ಬ್ಯಾಂಕ್ ಅಥವಾ ನಿರ್ದಿಷ್ಟಪಡಿಸಿದ ಜಂಟಿ ನೆಟ್ವರ್ಕ್ ಆಗಿರಲಿ, ಇತರ ವಿಷಯಗಳ ಜೊತೆಗೆ, ಕಾರ್ಡ್‌ದಾರರು ಆರ್‌ಬಿಎಲ್ ಬ್ಯಾಂಕ್‌ನೊಂದಿಗೆ ಹೊಂದಿರುವ ತನ್ನ ಖಾತೆಯಲ್ಲಿ ತನ್ನ ಹಣವನ್ನು ಪಡೆಯಲು ತನ್ನ ಕಾರ್ಡ್ ಅನ್ನು ಬಳಸಬಹುದು.

"ಕಾರ್ಡ್" ಎಂದರೆ ಭಾರತದಲ್ಲಿ ಖಾತೆದಾರರಿಗೆ ಮತ್ತು/ಅಥವಾ ಆರ್‌ಬಿಎಲ್ ಖಾತೆದಾರರು ನಿರ್ದಿಷ್ಟಪಡಿಸಿದ ಯಾವುದೇ ಇತರ ವ್ಯಕ್ತಿಗೆ ನೀಡುವ ಆರ್‌ಬಿಎಲ್ ಬ್ಯಾಂಕ್ ಡೆಬಿಟ್ ಕಾರ್ಡ್.

"ಕಾರ್ಡ್‌ದಾರರು" ಅಥವಾ "ಗ್ರಾಹಕರು" ಎಂದರೆ ಆರ್‌ಬಿಎಲ್ ಬ್ಯಾಂಕ್ ಖಾತೆದಾರ ಅಥವಾ ಕಾರ್ಡ್ ನೀಡಲ್ಪಟ್ಟ ಮತ್ತು ಕಾರ್ಡ್ ಅನ್ನು ಇರಿಸಿಕೊಳ್ಳಲು/ಬಳಸಲು ಅಧಿಕಾರ ಹೊಂದಿರುವ ಆ ಖಾತೆದಾರರಿಂದ ಅನುಮೋದಿಸಲ್ಪಟ್ಟ ಅಂತಹ ಯಾವುದೇ ವ್ಯಕ್ತಿ

"ದೇಶೀಯ ವಹಿವಾಟುಗಳು" ಎಂದರೆ ಭಾರತದ ಒಳಗೆ ತನ್ನ ದೇಶೀಯ ಮಾನ್ಯ ಡೆಬಿಟ್ ಕಾರ್ಡ್‌ನಲ್ಲಿ ಕಾರ್ಡ್‌ದಾರರು ಮಾಡಿದ ವಹಿವಾಟುಗಳು

"ಕರೆ ಮಾಡಬೇಡಿ" ನಿಮಗೆ ಜಾಹೀರಾತು ಕರೆಗಳು/ಎಸ್‌ಎಂಎಸ್‌ಗಳನ್ನು ಪಡೆಯಬೇಕೆ ಅಥವಾ ಬೇಡವೇ ಎಂಬ ಆಯ್ಕೆಯನ್ನು ನೀಡುತ್ತದೆ.

"ಅಂತಾರಾಷ್ಟ್ರೀಯ ವಹಿವಾಟುಗಳು" ಎಂದರೆ ಭಾರತ, ನೇಪಾಳ ಮತ್ತು ಭೂತಾನ್ ಹೊರಗೆ ತನ್ನ ಅಂತಾರಾಷ್ಟ್ರೀಯವಾಗಿ ಮಾನ್ಯ ಪಡೆದ ಡೆಬಿಟ್ ಕಾರ್ಡ್‌ನಲ್ಲಿ ಕಾರ್ಡ್‌ದಾರರು ಮಾಡಿದ ವಹಿವಾಟುಗಳು.

"ಆಂತರಿಕ ವೆಬ್‌ಸೈಟ್" ಎಂದರೆ ಈ ವೆಬ್‌ಸೈಟ್‌ಗಳ ಮೂಲಕ ಅಥವಾ ಬೇರೆ ರೀತಿಯಲ್ಲಿ ಖರೀದಿಸಲಾದ ಸರಕು ಮತ್ತು ಸೇವೆಗಳಿಗೆ ಕಾರ್ಡ್‌ದಾರರಿಂದ ಮಾಡಲಾದ ಕಾರ್ಡ್ ಪಾವತಿಗಳನ್ನು ಮಾನ್ಯ ಮಾಡುವಂತಹ ಯಾವುದೇ ಸ್ಥಳದಲ್ಲಿ ಇರುವ ವ್ಯಾಪಾರಿ ಸಂಸ್ಥೆಗಳ ವೆಬ್‌ಸೈಟ್ ಮತ್ತು ಇದು ಇತರವುಗಳೊಂದಿಗೆ, ಕಾರ್ಡ್ ಅನ್ನು ಮಾನ್ಯ ಮಾಡುವುದಾಗಿ ಜಾಹೀರಾತು ನೀಡಿರುವಂತಹ ಮಳಿಗೆಗಳು, ಅಂಗಡಿಗಳು, ರೆಸ್ಟೋರೆಂಟ್‌ಗಳು, ಹೋಟೆಲ್‌ಗಳು, ಯುಟಿಲಿಟಿ ಕಂಪನಿಗಳು, ರೈಲ್ವೇಗಳು ಮತ್ತು ಏರ್‌ಲೈನ್ ಸಂಸ್ಥೆಗಳ ವೆಬ್‌ಸೈಟ್ ಅನ್ನು ಒಳಗೊಂಡಿರುತ್ತದೆ.

"ವ್ಯಾಪಾರಿ ಸ್ಥಾಪನೆ" ಎಂದರೆ ಎಲ್ಲೆಲ್ಲಿ ಇದೆಯೇ ಅಲ್ಲಿಯ ಭೌತಿಕ ಮತ್ತು/ಅಥವಾ ವರ್ಚುವಲ್ ಸಂಸ್ಥೆಗಳಾಗಿದ್ದು ಇವುಗಳು ಕಾರ್ಡ್ ಅನ್ನು ಮಾನ್ಯ ಮಾಡುತ್ತದೆ(ವೀಸಾ/ಮಾಸ್ಟರ್‌ಕಾರ್ಡ್/ರೂಪೇ ಅಥವಾ ಯಾವುದೇ ಅಂತಹ ಕಾರ್ಡ್ ನೆಟ್ವರ್ಕ್) ಮತ್ತು ಇತರವುಗಳಲ್ಲಿ ಎಟಿಎಂಗಳು ಮತ್ತು ಮೇಲ್ ಆದೇಶ ಜಾಹೀರಾತುಗಳು(ರಖಂದಾರರು, ವಿತರಕರು ಅಥವಾ ನಿರ್ಮಾಪಕರು) ಸೇರಿದಂತೆ ಮಳಿಗೆಗಳು, ಅಂಗಡಿಗಳು, ರೆಸ್ಟೋರೆಂಟ್‌ಗಳು, ಹೋಟೆಲ್‌ಗಳು ಮತ್ತು ಏರ್‌ಲೈನ್ ನಗದು ಮುಂಗಡ ಅಂಶಗಳನ್ನು ಒಳಗೊಂಡಿರುತ್ತದೆ.

"ವ್ಯಾಪಾರಿ" ಎಂದರೆ ವ್ಯಾಪಾರಿ ಸಂಸ್ಥೆಯನ್ನು ಹೊಂದಿರುವ ಅಥವಾ ನಿಭಾಯಿಸುವ ಅಥವಾ ನಿರ್ವಹಿಸುವ ಯಾವುದೇ ವ್ಯಕ್ತಿ.

"ವನ್-ಟೈಮ್ ಪಾಸ್‌ವರ್ಡ್(ಒಟಿಪಿ)" ಸ್ವಯಂಚಾಲಿತವಾಗಿ ರಚಿಸಲಾದ ಸಂಖ್ಯಾ ಅಥವಾ ಅಲ್ಫಾನ್ಯೂಮರಿಕ್ ಸ್ಟ್ರಿಂಗ್ ಅಕ್ಷರಗಳಾಗಿದ್ದು ಅದು ಒಂದು ವಹಿವಾಟು ಅಥವಾ ಅವಧಿಗೆ ಬಳಕೆದಾರರನ್ನು ದೃಢೀಕರಿಸುತ್ತದೆ.

"ಪಿನ್" ಎಂದರೆ ಆರ್‌ಬಿಎಲ್ ಬ್ಯಾಂಕ್‌ನಿಂದ ಕಾರ್ಡ್‌ದಾರರಿಗೆ ಹಂಚಲಾದ ಅಥವಾ ಕಾರ್ಡ್‌ಗೆ ಸಂಬಂಧಿಸಿ ಕಾರ್ಡ್‌ದಾರರಿಂದ ಆರಿಸಲ್ಪಟ್ಟ ಗೋಪ್ಯ ವೈಯಕ್ತಿಕ ಗುರುತು ಸಂಖ್ಯೆಯಾಗಿದೆ.

"ಪಿಒಎಸ್ ಟರ್ಮಿನಲ್" ಎಂದರೆ ಭಾರತದಲ್ಲಿ ಅಥವಾ ವಿದೇಶದಲ್ಲಿ ವ್ಯಾಪಾರಿ ಸಂಸ್ಥೆಗಳಲ್ಲಿ ಮಾರಾಟ ಸ್ಥಾನದ(ಪಿಒಎಸ್) ಎಲೆಕ್ಟ್ರಾನಿಕ್ ಟರ್ಮಿನಲ್ ಆಗಿದ್ದು, ಕಾರ್ಡ್ ವಹಿವಾಟುಗಳನ್ನು ಪ್ರಕ್ರಿಯೆಗೊಳಿಸಲು ಸಮರ್ಥವಾಗಿದೆ ಮತ್ತು ಇತರ ವಿಷಯಗಳೊಂದಿಗೆ, ಖರೀದಿಗಳನ್ನು ಮಾಡಲು ಕಾರ್ಡ್‌ನೊಂದಿಗೆ ಲಿಂಕ್ ಆಗಿರುವ ಖಾತೆಯಿಂದ ಹಣವನ್ನು ಪಡೆಯಲು ಕಾರ್ಡ್‌ದಾರರು ತಮ್ಮ ಕಾಡ್ ಅನ್ನು ಬಳಸಬಹುದು.

"ಪ್ರಾಥಮಿಕ ಖಾತೆ" ಎಂದರೆ ಕಾರ್ಡ್‌ಗೆ ಲಿಂಕ್ ಆಗಿರುವ ಪ್ರಾಥಮಿಕ ಖಾತೆ.

"ಆರ್‌ಬಿಎಲ್ ಬ್ಯಾಂಕ್" ಅಥವಾ "ಬ್ಯಾಂಕ್" ಎಂದರೆ ಭಾರತೀಯ ಕಂಪನಿಗಳ ಕಾಯಿದೆ 1913 ಇದರ ಅಡಿಯಲ್ಲಿ ಸಂಯೋಜಿತವಾದ ಕಂಪನಿ ಆಗಿದ್ದು ಶಾಹುಪುರಿ, ಕೊಲ್ಹಾಪುರ-416001 ಇಲ್ಲಿ ತನ್ನ ನೋಂದಾಯಿತ ಕಚೇರಿಯನ್ನು ಮತ್ತು ವನ್ ಇಂಡಿಯಬುಲ್ಸ್ ಸೆಂಟರ್, ಟವರ್ 2, 6ನೇ ಮಹಜಿ, 841 ಸೇನಾಪತಿ ಬಾಪತ್ ಮಾರ್ಗ್, ಲೋವರ್ ಪರೇಲ್, ಮುಂಬೈ 400013 ಇಲ್ಲಿ ಕಾರ್ಪೋರೇಟ್ ಕಚೇರಿಯನ್ನು ಮತ್ತು 9ನೇ ಮಹಡಿ, ಟೆಕ್ನಿಪ್ಲೆಕ್ಸ್-I, ಆಫ್ ವೀರ್ ಸಾವರ್ಕರ್ ಫ್ಲೈಯೋವರ್, ಗರ್ಗಾವ್(ವೆಸ್ಟ್), ಮುಂಬೈ-400062 ಇಲ್ಲಿ ಒಂದು ಕಚೇರಿಯನ್ನು ಹೊಂದಿದೆ ಮತ್ತು ಅದರ ಶಾಖೆಗಳ ಮೂಲಕ(ಈ ಅಭಿವ್ಯಕ್ತಿಯು ಅದರ ವಿಷಯ ಅಥವಾ ಸಂದರ್ಭಕ್ಕೆ ಅಂಗೀಕಾರ್ಹವಲ್ಲದಿದ್ದರೆ, ಅದರ ಉತ್ತರಾಧಿಕಾರಿಗಳು, ಪ್ರತಿನಿಧಿಗಳು ಮತ್ತು ನಿಯೋಜನೆಗಳನ್ನು ಒಳಗೊಂಡಿರುತ್ತದೆ) ಕಾರ್ಡ್‌ನ ಮಾಲೀಕರು/ಓನರ್‌ಗಳ ಮೂಲಕ ಕಾರ್ಯನಿರ್ವಹಿಸುತ್ತದೆ.

"ಆರ್‌ಬಿಎಲ್ ಬ್ಯಾಂಕ್ ಗ್ರಾಹಕ ಕಾಳಜಿ ಕೇಂದ್ರ" ಆರ್‌ಬಿಎಲ್ ಬ್ಯಾಂಕ್‌ನಿಂದ ನೀಡಲ್ಪಡುವ ಆರ್‌ಬಿಎಲ್ ಬ್ಯಾಂಕ್ -ಫೋನ್ ಬ್ಯಾಂಕಿಂಗ್ ಸೇವೆಯನ್ನು ಉಲ್ಲೇಖಿಸುತ್ತದೆ, ಇದು ಎಲ್ಲಾ ಕಾರ್ಡ್‌ದಾರರಿಗೆ ಲಭ್ಯವಿರುತ್ತದೆ. ಆರ್‌ಬಿಎಲ್ ಬ್ಯಾಂಕ್ ಗ್ರಾಹಕ ಕಾಳಜಿ ಕೇಂದ್ರ ಸೇವೆಯನ್ನು ಪಡೆದುಕೊಳ್ಳುವ ಎಲ್ಲಾ ಕಾರ್ಡ್‌ದಾರರು, ಇದಕ್ಕೆ ಸಂಬಂಧಿಸಿ ಆರ್‌ಬಿಎಲ್ ಬ್ಯಾಂಕ್ ನಿಗದಿಪಡಿಸಿ ಎಲ್ಲಾ ನಿಬಂಧನೆಗಳು ಮತ್ತು ಶರತ್ತುಗಳಿಗೆ ಬದ್ಧರಾಗಿರಬೇಕು. ಕಾಲ್ ಸೆಂಟರ್ ಅನ್ನು 18001238084 ಈ ಸಂಖ್ಯೆಯಲ್ಲಿ ಸಂಪರ್ಕಿಸಬಹುದು.

"ಆರ್‌ಬಿಎಲ್ ಬ್ಯಾಂಕ್‌ನ ವೆಬ್‌ಸೈಟ್" ಎಂದರೆ www.rblbank.com ಆರ್‌ಬಿಎಲ್ ಬ್ಯಾಂಕ್‌ನ ವೆಬ್‌ಸೈಟ್ ಆಗಿರುತ್ತದೆ.

“ಹಂಚಿದ ನೆಟ್ವರ್ಕ್” ಎಂದರೆ ರೂಪೇ/ವೀಸಾ/ಮಾಸ್ಟರ್‌ಕಾರ್ಡ್ ಅಥವಾ ಕಾರ್ಡ್‌ಗಳನ್ನು ಮಾನ್ಯ ಮಾಡುವ ಇತರ ಯಾವುದೇ ನೆಟ್ವರ್ಕ್‌ಗಳು.

“ಸುಂಕದ ಅನುಬಂಧ” ಅಂದರೆ ಕಾರ್ಡ್‌ನಲ್ಲಿ ನೀಡಲಾಗುವ ಸೇವೆಗಳಿಗೆ ಅನ್ವಯವಾಗುವ ಶುಲ್ಕಗಳನ್ನು ವಿವರಿಸುವ ಅನುಬಂಧ.ಈ ಶುಲ್ಕಗಳು ಆರ್‌ಬಿಎಲ್ ಬ್ಯಾಂಕ್‌ನ ಸ್ವಂತ ವಿವೇಚನೆಯಿಂದ ಬದಲಾವಣೆಗಳಿಗೆ ಒಳಪಡುತ್ತವೆ. ಸಾಮಾನ್ಯವಾಗಿ, ಶುಲ್ಕಗಳಲ್ಲಿನ ಅಂತಹ ಬದಲಾವಣೆಗಳನ್ನು ಕಾರ್ಡ್‌ದಾರರಿಗೆ 1 ತಿಂಗಳ ಪೂರ್ವ ಸೂಚನೆಯನ್ನು ನೀಡುವ ಮೂಲಕ ನಿರೀಕ್ಷಿತ ಪರಿಣಾಮದೊಂದಿಗೆ ಮಾತ್ರ ಮಾಡಬಹುದು.

“ವಹಿವಾಟುಗಳು” ಎಂದರೆ ಕಾರ್ಡ್‌ದಾರರು ನೇರವಾಗಿ ಅಥವಾ ಪರೋಕ್ಷವಾಗಿ ಆರ್‌ಬಿಎಲ್ ಬ್ಯಾಂಕ್‌ಗೆ ವಹಿವಾಟು ಕಾರ್ಯಗತಗೊಳಿಸಲು ನೀಡಿದ ಯಾವುದೇ ಸೂಚನೆಯಾಗಿದೆ.

“ಆರ್‌ಬಿಎಲ್ ಅಲ್ಲದ ಬ್ಯಾಂಕ್ ಎಟಿಎಂ ವಹಿವಾಟು”: ಕಾರ್ಡ್‌ದಾರರು/ಗ್ರಾಹಕರಿಂದ ಆರ್‌ಬಿಎಲ್ ಅಲ್ಲದ ಬ್ಯಾಂಕ್ ಎಟಿಎಂನಲ್ಲಿ ನಡೆಸಲಾದ ಯಾವುದೇ ವಹಿವಾಟುಗಳು.

‘‘ಟೋಕನ್’’ ಎಂದರೆ ಕಾರ್ಡ್‌ಗೆ ಹೊಂದಾಣಿಕೆ ಮಾಡಲಾದ ಬದಲಿ ಸಂಖ್ಯೆ. ಟೋಕನ್ ಅನ್ನು ಪಾವತಿ ಮಾಡಲು ಪರ್ಯಾಯ ವಿಧ ಅಂಶವನ್ನು ಸಕ್ರಿಯಗೊಳಿಸಲು ಬಳಸಲಾಗುತ್ತದೆ.

‘‘ಟೋಕನ್ ಸೇವೆ’’ ಅಂದರೆ ಪಾವತಿ ಖಾತೆಯ ರುಜುವಾತುಗಳ ಟೋಕನೈಸೇಶನ್ ಅನ್ನು, ಪಾವತಿಗಳನ್ನು ಮಾಡಲು ಟೋಕನೈಸ್ ಆದ ಪಾವತಿ ಖಾತೆ ರುಜುವಾತುಗಳನ್ನು ಬಳಸುವಿಕೆಯನ್ನು ಸಕ್ರಿಯಗೊಳಿಸುವ ಉದ್ದೇಶಕ್ಕಾಗಿ ಹಂಚಿಕೆಯ ನೆಟ್ವರ್ಕ್‌ನಿಂದ(ರೂಪೇ/ವೀಸಾ/ಮಾಸ್ಟರ್‌ಕಾರ್ಡ್) ಲಭ್ಯವಾಗುವ ಸೇವೆಗಳು, ಮತ್ತು ಅಂತಹ ಸೇವೆಗಳಾಗಿ ಟೋಕನ್ ಜೀವನ-ಚಕ್ರ ನಿರ್ವಹಣೆಯನ್ನು ಒದಗಿಸಲಾಗುತ್ತದೆ ಮತ್ತು ಕಾಲಕಾಲಕ್ಕೆ ನೆಟ್ವರ್ಕ್‌ನಿಂದ(ರೂಪೇ/ವೀಸಾ/ಮಾಸ್ಟರ್‌ಕಾರ್ಡ್ ನವೀಕರಿಸಲಾಗುತ್ತದೆ.

## ವ್ಯಾಖ್ಯಾನಗಳು:

a) ಏಕವಚನದ ಎಲ್ಲಾ ಉಲ್ಲೇಖಗಳು ಬಹುವಚನ ಮತ್ತು ಪ್ರತಿಕ್ರಮವನ್ನು ಹೊಂದಿದೆ ಮತ್ತು “ಒಳಗೊಂಡಿದೆ” ಪದವನ್ನು “ಮಿತಿಯಿಲ್ಲದೆ” ಎಂದು ಅರ್ಥೈಸಬೇಕು.
b) ಯಾವುದೇ ಲಿಂಗವನ್ನು ಸೂಚಿಸುವ ಪದಗಳು ಇತರ ಲಿಂಗವನ್ನು ಒಳಗೊಂಡಿರುತ್ತದೆ.
c) ಕಾಯಿದೆ, ಆಧ್ಯಾದೇಶ ಅಥವಾ ಇತರ ಕಾನೂನು ಇತರ ನಿಬಂಧನೆಗಳು ಮತ್ತು ಲಿಖಿತಪತ್ರಗಳನ್ನು ಒಳಗೊಂಡಿರುತ್ತದೆ ಮತ್ತು ಎಲ್ಲಾ ಕ್ರೋಢೀಕರಣಗಳು, ತಿದ್ದುಪಡಿಗಳು , ಮರು-ಕಾನೂನುಗಳು ಅಥವಾ ಬದಲಿಗಳು ಪ್ರಸ್ತುತ ಜಾರಿಯಲ್ಲಿರುತ್ತವೆ.
d) ಎಲ್ಲಾ ಶೀರ್ಷಿಕೆಗಳು, ದಪ್ಪ ಟೈಪಿಂಗ್ ಮತ್ತು ಇಟ್ಯಾಲಿಕ್‌ಗಳನ್ನು(ಯಾವುದೇ ಇದ್ದಲ್ಲಿ) ಉಲ್ಲೇಖದ ಅನುಕೂಲಕ್ಕಾಗಿ ಮಾತ್ರವೇ ಸೇರಿಸಲಾಗುತ್ತದೆ ಮತ್ತು ಮಿತಿಯನ್ನು ವ್ಯಾಖ್ಯಾನಿಸುವುದಿಲ್ಲ ಅಥವಾ ನಿಯಮಗಳ ಅರ್ಥ ಅಥವಾ ವಿವರಣೆಯ ಮೇಲೆ ಪರಿಣಾಮ ಬೀರುವುದಿಲ್ಲ.

e) ವೀಸಾ/ಮಾಸ್ಟರ್‌ಕಾರ್ಡ್/ರೂಪೇ/ಎನ್‌ಪಿಸಿಐ ನಿಬಂಧನೆಳ ಉಲ್ಲೇಖಗಳು, ವೀಸಾ/ಮಾಸ್ಟರ್ ಕಾರ್ಡ್/ರೂಪೇ ತನ್ನ ನೆಟ್ವರ್ಕ್‌ನ ಎಲ್ಲಾ ಸದಸ್ಯ ಬ್ಯಾಂಕ್‌ಗಳಿಗೆ ನೀಡಿದ ಮಾರ್ಗಸೂಚಿಗಳಿಗೆ ಸಂಬಂಧಿಸಿದೆ.

f) ಸಾಮಾನ್ಯ ನಿಯಮಗಳ ಕಾಯಿದೆಯಲ್ಲಿ ನಿಗದಿಪಡಿಸಿದಂತೆ ವ್ಯಾಖ್ಯಾನಗಳ ನಿಯಮಗಳು ವಿಷಯ ಅಥವಾ ಸಂದರ್ಭಕ್ಕೆ ಅಂಗೀಕಾರಾರ್ಹವಲ್ಲದ ಹೊರತಾಗಿ , ಇಲ್ಲಿ ಸೇರಿಸಿದಂತೆ ನಿಯಮಗಳಿಗೆ ಅನ್ವಯಿಸುತ್ತದೆ

## ನಿಬಂಧನೆಗಳ ಅನ್ವಯ:

## ನಿಬಂಧನೆಗಳು:

ಈ ನಿಬಂಧನೆಗಳು ಮತ್ತು ಶರತ್ತುಗಳು ಕಾರ್ಡ್‌ದಾರರು ಮತ್ತು ಆರ್‌ಬಿಎಲ್ ಬ್ಯಾಂಕ್ ನಡುವೆ ಒಪ್ಪಂದವನ್ನು ರೂಪಿಸುತ್ತದೆ. ಕಾರ್ಡ್‌ದಾರರು ಕಾರ್ಡ್ ಅರ್ಜಿ ನಮೂನೆಗೆ ಸಹಿ ಹಾಕುವ ಮೂಲಕ ಅಥವಾ ಕಾರ್ಡ್‌ನ ಸ್ವೀಕೃತಿಯನ್ನು ಲಿಖಿತವಾಗಿ ಅಂಗೀಕರಿಸುವ ಮೂಲಕ ಅಥವಾ ಕಾರ್ಡ್‌ನ ಹಿಮ್ಮುಖದಲ್ಲಿ ಸಹಿ ಹಾಕುವ ಮೂಲಕ ಅಥವಾ ಕಾರ್ಡ್ ಬಳಸಿ ವಹಿವಾಟು ನಡೆಸುವ ಮೂಲಕ ಅಥವಾ ಕಾರ್ಡ್‌ನ ಪಿಒಎಸ್ ಸಕ್ರಿಯಗೊಳಿಸುವಿಕೆಗೆ ಮನವಿ ಮಾಡುವ ಮೂಲಕ ಅಥವಾ ಎಟಿಎಂ ಮೂಲಕ ಸಕ್ರಿಯೆಗೊಳಿಸುವಿಕೆಯ ಮೂಲಕ ಅಥವಾ ಕಾರ್ಡ್ ಅನ್ನು ಅವರ ವಿಳಾಸಕ್ಕೆ ರವಾನಿಸಿದ 10 ದಿನಗಳ ನಂತರ ಈ ನಿಬಂಧನೆಗಳು ಮತ್ತು ಶರತ್ತುಗಳನ್ನು ಕಾರ್ಡ್‌ದಾರರು ಬೇಷರತ್ತಾಗಿ ಒಪ್ಪಿದ್ದಾರೆ ಮತ್ತು ಅಂಗೀಕರಿಸಿದ್ದಾರೆ ಎಂದು ಭಾವಿಸಲಾಗುತ್ತದೆ.

ಈ ನಿಬಂಧನೆಗಳು ಮತ್ತು ಶರತ್ತುಗಳು ಕಾರ್ಡ್‌ದಾರರ ಖಾತೆಗೆ ಸಂಬಂಧಿಸಿದ ನಿಬಂಧನೆಗಳು ಮತ್ತು ಶರತ್ತುಗಳಿಗೆ ಹೆಚ್ಚುವರಿಯಾಗಿ ಇರುತ್ತದೆ ಮತ್ತು ಅವಹೇಳನಕಾರಿಯಾಗಿ ಇರುವುದಿಲ್ಲ. ಯಾವುದೇ ಸೇವೆಗಳು/ಸೌಲಭ್ಯಗಳು/ಕೊಡುಗೆಗಳನ್ನು ಪಡೆಯುವ ಕಾರ್ಡ್‌ದಾರರು ಎಲ್ಲಾ ಸಮಯದಲ್ಲೂ ಅಂತಹ ಸೇವೆಗಳು/ಸೌಲಭ್ಯಗಳು/ಕೊಡುಗೆಗಳಿಗಾಗಿ ಆರ್‌ಬಿಎಲ್ ಬ್ಯಾಂಕ್ ಕಾಲಕಾಲಕ್ಕೆ ನಿಗದಿಪಡಿಸಿದ ನಿಬಂಧನೆಗಳು ಮತ್ತು ಶರತ್ತುಗಳಿಗೆ ಬದ್ಧರಾಗಿರುವುದನ್ನು ಮುಂದುವರಿಸುತ್ತಾರೆ. ಗ್ರಾಹಕರು ಬ್ಯಾಂಕ್‌ನೊಂದಿಗೆ ಬಂದಿರುವಂತಹ ಯಾವುದೇ ಒಪ್ಪಂದ ಅಥವಾ ಬದ್ಧತೆಗಳು/ಗ್ರಾಹಕರ ಸಾವು/ದಿವಾಳಿಗೆ ಒಳಪಟ್ಟ/ದಿವಾಳಿತನ/ಗ್ರಾಹಕರ ವಿರುದ್ಧ ಒಪ್ಪಿಕೊಂಡ ಇತರ ಸಮಾನ ಪ್ರಕ್ರಿಯೆಗಳ ಅಡಿಯಲ್ಲಿ ನಿಬಂಧನೆಗಳು ಮತ್ತು ಶರತ್ತುಗಳು/ಡೀಫಾಲ್ಟ್‌ಗಳನ್ನು ಅನುಸರಿಸಲು ವಿಫಲವಾದಲ್ಲಿ, ಬ್ಯಾಂಕ್ ಕಾರ್ಡ್ ಅನ್ನು ರದ್ದುಗೊಳಿಸುತ್ತದೆ.

ಕಾರ್ಡ್‌ನ ವಿತರಣೆ:

ಕಾರ್ಡ್ ಅನ್ನು ಖಾತೆದಾರರಿಂದ ವಿನಂತಿಯನ್ನು ಸ್ವೀಕರಿಸುವ ಆಧಾರದ ಮೇಲೆ ಆರ್‌ಬಿಎಲ್ ಬ್ಯಾಂಕ್‌ನಿಂದ ಖಾತೆದಾರರಿಗೆ ವಿತರಿಸಲಾಗುತ್ತದೆ. ಈ ವಿನಂತಿಯನ್ನು ಖಾತೆ ತೆರೆಯುವ ಸಮಯದಲ್ಲಿ(ಖಾತೆ ತೆರೆಯುವಿಕೆ ಅರ್ಜಿ ಮೂಲಕ), ಖಾತೆ ತೆರೆದ ನಂತರದ ಹಂತದಲ್ಲಿ ಶಾಖೆಗೆ ಪತ್ರ ನೀಡುವ ಮೂಲಕ ಪಡೆದಿರಬಹುದು. ಗ್ರಾಹಕರು ಹೆಚ್ಚುವರಿಯಾಗಿ ಎಸ್‌ಎಂಎಸ್/ಇಮೇಲ್/ಇಂಟರ್ನೆಟ್/ಮೊಬೈಲ್ ಬ್ಯಾಂಕಿಂಗ್ ಮೂಲಕ & ಸಂಪರ್ಕ ಕೇಂದ್ರ ಅಥವಾ ಮನವಿ ಅಂಗೀಕಾರದ ಅಧಿಕೃತ ವಿಧಾನವೆಂದು ಬ್ಯಾಂಕ್ ಗ್ರಾಹಕರಿಗೆ ಸೂಚಿಸಬಹುದಾದ ಯಾವುದೇ ಮಾಧ್ಯಮದ ಮೂಲಕ ಕಾರ್ಡ್‌ಗೆ ಮನವಿ ಮಾಡಬಹುದು.

ಗ್ರಾಹಕರು ತನ್ನ ಖಾತೆಯಲ್ಲಿ ಹೊಂದಲು ಬಯಸುವ ಕಾರ್ಡ್‌ನ ವಿಧವನ್ನು ಆರಿಸಬೇಕಾಗುತ್ತದೆ ಮತ್ತು ಕಾರ್ಡ್‌ಗೆ ಸಂಬಂಧಿಸಿದ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಕಾರ್ಯನಿರ್ವಹಣಾ ವಿಧವನ್ನು ಜಂಟಿಯಾಗಿ ನಡೆಸದೇ ಇದ್ದಾಗ ಮಾತ್ರ ವೈಯಕ್ತಿಕ ಮತ್ತು ವೈಯಕ್ತಿಕವಲ್ಲದ ಗ್ರಾಹಕರಿಗೆ ಕಾರ್ಡ್ ನೀಡಲಾಗುತ್ತದೆ. ಎನ್‌ಆರ್‌ಐ ಖಾತೆಗೆ ಆದೇಶ ಹೊಂದಿರುವವರ ಕೋರಿಕೆಯ ಮೇರೆಗೆ ಬ್ಯಾಂಕ್ ತನ್ನ ವಿವೇಚನೆಯಿಂದ ಅವರಿಗೆ ಡೆಬಿಟ್ ಕಾರ್ಡ್ ನೀಡಬಹುದು. ಈ ಕಾರ್ಡ್ ದೇಶೀಯ ಬಳಕೆಗೆ ಮತ್ತು ಬ್ಯಾಂಕ್‌ನ ಶುಲ್ಕಗಳ ಯೋಜನೆಯ ಆಧಾರದಲ್ಲಿ  ಶುಲ್ಕ ವಿಧಿಸಲಾಗುತ್ತದೆ. ಅಗತ್ಯ ನಮೂನೆಗಳ ಜೊತೆಗೆ ಅಪೇಕ್ಷಿತ ದಸ್ತಾವೇಜಿಕರಣವು ಕಾಲಕಾಲಕ್ಕೆ ಬದಲಾಗಬಹುದು,ಅದನ್ನೇ ಆರ್‌ಬಿಎಲ್ ಬ್ಯಾಂಕ್ ಶಾಖೆಗಳಿಂದ ಪಡೆದುಕೊಳ್ಳಬೇಕು/ಅರ್ಥೈಸಿಕೊಳ್ಳಬೇಕು.

ಆರ್‌ಬಿಎಲ್ ತನ್ನ ಗ್ರಾಹಕರಿಗೆ ಡೆಬಿಟ್ ಕಾರ್ಡ್ ಅನ್ನು ಬೇರೆ ರೂಪಾಂತರಕ್ಕೆ ಉನ್ನತೀಕರಿಸುವ ಆಯ್ಕೆಯನ್ನು ಕೂಡಾ ನೀಡುತ್ತದೆ. ಅಂತಹ ಸಂದರ್ಭದಲ್ಲಿ, ಹೊಸ ಕಾರ್ಡ್ ಉಪಯೋಗಿಸಿದ ಬಳಿಕ ಅಥವಾ ಹೊಸ ಕಾರ್ಡ್ ವಿತರಿಸಿದ 60 ದಿನಗಳೊಳಗೆ ಗ್ರಾಹಕರ ಈಗಿರುವ ಕಾರ್ಡ್ ನಿರ್ಬಂಧಿಸಲ್ಪಡುತ್ತದೆ. ಈ ಉನ್ನತೀಕರಿಸಿದ ಕಾರ್ಡ್‌ನ ಶುಲ್ಕವು ಕಾಲಕಾಲಕ್ಕೆ ಮತ್ತು ಸಂದರ್ಭದಿಂದ ಸಂದರ್ಭಕ್ಕೆ ಬದಲಾಗಬಹುದು. ಅಂತಹ ವಿನಂತಿಯನ್ನು ಸ್ವೀಕರಿಸುವ ಮೊದಲು, ಗ್ರಾಹಕರಿಗೆ ಸಂಬಂಧಿತ ಬೆಲೆಯನ್ನು ಮೊದಲೇ ತಿಳಿಸಲಾಗುತ್ತದೆ.

## ಕಾರ್ಡ್ ಸಕ್ರಿಯಗೊಳಿಸುವಿಕೆ:

ಡೆಬಿಟ್ ಕಾರ್ಡ್‌ನ್ನು ಗ್ರಾಹಕರಿಗೆ ನಿಷ್ಕ್ರಿಯ ಸ್ಥಿತಿಯಲ್ಲಿ ರವಾನಿಸಲಾಗುತ್ತದೆ. ಗ್ರಾಹಕರು ಆತನ/ಆಕೆಯ ಡೆಬಿಟ್ ಕಾರ್ಡ್ ಅನ್ನು ಸಕ್ರಿಯಗೊಳಿಸಲು ಲಭ್ಯವಿರುವ ಯಾವುದೇ ಚಾನೆಲ್‌ಗಳ ಮೂಲಕ ಅಂದರೆ ಮೊಬ್ಯಾಂಕ್, ಇಂಟರ್ನೆಟ್ ಬ್ಯಾಂಕಿಂಗ್, ಎಸ್‌ಎಂಎಸ್ ಇತ್ಯಾದಿಗಳ ಮೂಲಕ ಪಿನ್ ಅನ್ನು ರಚಿಸಬೇಕಾಗುತ್ತದೆ.
ವಿತರಿಸುವ/ಮರುವಿತರಿಸುವ ಸಂದರ್ಭದಲ್ಲಿ ಕಾರ್ಡ್ ಅನ್ನು ಕೇವಲ ದೇಶೀಯ ಎಟಿಎಂ ಮತ್ತು ಪಿಓಎಸ್‌ಗಳಿಗೆ ಮಾತ್ರ ಸಕ್ರಿಯೆಗೊಳಿಸಲಾಗುತ್ತದೆ. ಅಂತಾರಾಷ್ಟ್ರೀ, ಆನ್‌ಲೈನ್ ಮತ್ತು ಸಂಪರ್ಕರಹಿತ ಮುಂತಾದ ಇತರ ಎಲ್ಲಾ ರೀತಿಯ ವಹಿವಾಟುಗಳನ್ನು ಗ್ರಾಹಕರು ಮೊಬೈಲ್ ಬ್ಯಾಂಕಿಂಗ್, ಇಂಟರ್ನೆಟ್ ಬ್ಯಾಂಕಿಂಗ್, ಶಾಖೆ, ಐವಿಆರ್ ಇತ್ಯಾದಿ ಚಾನೆಲ್‌ಗಳನ್ನು ಬಳಸಿ ಸಕ್ರಿಯಗೊಳಿಸಬಹುದು. ಗ್ರಾಹಕರು ಈ ವಹಿವಾಟು ವಿಧವನ್ನು ಆನ್/ಆಫ್ ಮಾಡಬಹುದು ಅಥವಾ ಪ್ರತಿಯೊಂದು ವಹಿವಾಟಿಗೆ ಯಾವುದೇ ನಿರ್ದಿಷ್ಟ ಸಮಯದಲ್ಲಿ ವಹಿವಾಟು ಮಿತಿಯನ್ನು ನಿಗದಿಪಡಿಸಬಹುದು.

## ಕಾರ್ಡ್‌ನ ಪ್ರಯೋಜನಗಳು:

ಕಾರ್ಡ್‌ದಾರರು ಯಾವುದೇ ಎಟಿಎಂ/ ಆರ್‌ಬಿಎಲ್ ಬ್ಯಾಂಕ್ ಶಾಖೆಯಲ್ಲಿ ನಗದನ್ನು ತೆಗೆಯಬಹುದು/ಪಡೆಯಬಹುದು, ವ್ಯಾಪಾರಿ ಸಂಸ್ಥೆಗಳಲ್ಲಿ ಪಾವತಿಗಳನ್ನು ಮಾಡಬಹುದು(ಆನ್‌ಲೈನ್ ಅಥವಾ ಆಫ್‌ಲೈನ್), ತನ್ನ ಖಾತೆಯ ಬ್ಯಾಲೆನ್ಸ್, ಎಟಿಎಂ ಮೂಲಕ ಮಾಡಲಾದ ವಹಿವಾಟುಗಳ ಸೀಮಿತ ಸಂಖ್ಯೆಯೊಂದಿಗಿನ ಕಿರು ಲೆಕ್ಕ ವಿವರಣೆ/ಆರ್‌ಬಿಎಲ್ ಬ್ಯಾಂಕ್ ಗ್ರಾಹಕ ಕಾಳಜಿ ಅಥವಾ ಆರ್‌ಬಿಎಲ್ ಬ್ಯಾಂಕ್ ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದ ಯಾವುದೇ ಸೇವೆಗಳ ಕುರಿತ ಮಾಹಿತಿಯನ್ನು ಪಡೆಯಬಹುದು.ಕಾರ್ಡ್‌ನ ಬಳಕೆಯ ಮೂಲಕ ಅಂತಹ ಸೇವೆಗಳನ್ನು ಪಡೆಯುವ ಕಾರ್ಡ್‌ದಾರರು

ಆರ್‌ಬಿಎಲ್ ಬ್ಯಾಂಕ್ ನಿರ್ದಿಷ್ಟಪಡಿಸಿದ ನಿಬಂಧನೆಗಳು ಮತ್ತು ಶರತ್ತುಗಳಿಗೆ ಮತ್ತು ಅಂತಹ ಸೇವೆಗಳಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ತಿದ್ದುಪಡಿಗಳಿಗೆ ಬದ್ಧರಾಗಿರುತ್ತಾರೆ. ಸಂಬಂಧಪಟ್ಟ ಕಾರ್ಡ್ ಎಟಿಎಂಗಳಲ್ಲಿ ಮತ್ತು ದೇಶೀಯ ಮತ್ತು ಅಂತಾರಾಷ್ಟ್ರೀಯ ವಹಿವಾಟುಗಳಿಗೆ ವ್ಯಾಪಾರಿ ಸಂಸ್ಥೆಗಳಲ್ಲಿ ಬಳಸಲು ಮಾನ್ಯವಾಗಿದೆ. ಆದರೂ, ಕಾರ್ಡ್ ಭಾರತ, ನೇಪಾಳ ಮತ್ತು ಭೂತಾನ್‌ಗಳಲ್ಲಿನ ವ್ಯಾಪಾರಿ ಸಂಸ್ಥೆಗಳಲ್ಲಿ ಯಾವುದೇ ದೇಶಿಯಾ ವಹಿವಾಟಿಗೆ ವಿದೇಶಿನ ವಿನಿಮಯದಲ್ಲಿ ಪಾವತಿ ಮಾಡಲು ಮಾನ್ಯವಾಗಿಲ್ಲ. ಕಾರ್ಡ್‌ನಲ್ಲಿ ಸೂಚಿಸಲಾದ ತಿಂಗಳ ಕೊನೆಯ ದಿನದವರೆಗೆ ಕಾರ್ಡ್ ಮಾನ್ಯವಾಗಿರುತ್ತದೆ. ನಡೆಸಲಾದ ವಹಿವಾಟಿನ ಮೇಲೆ, ಕಾರ್ಡ್‌ನೊಂದಿಗೆ ಲಿಂಕ್ ಮಾಡಲಾದ ಪ್ರಾಥಮಿಕ ಖಾತೆಯು ಆರ್‌ಬಿಎಲ್ ಬ್ಯಾಂಕ್‌ನಿಂದ ತಕ್ಷಣವೇ ಡೆಬಿಟ್ ಆಗುತ್ತದೆ.

ವೈಯಕ್ತಿಕ ಗುರುತು ಸಂಖ್ಯೆ

ಕಾರ್ಡ್‌ದಾರರು ಕಾರ್ಡ್ ಬಳಸುವಿಕೆಗೆ ಅದನ್ನು ಸಕ್ರಿಯಗೊಳಿಸಲು, ಲಭ್ಯವಿರುವ ಯಾವುದೇ ಚಾನೆಲ್ ಮೂಲಕ ಗ್ರಾಹಕರು ಡೆಬಿಟ್ ಕಾರ್ಡ್ ಪಿನ್ ಅನ್ನು ಸ್ವಯಂ-ರಚಿಸಬಹುದು. ಪಿನ್ ಅನ್ನು ನೀಡುವಾಗ ಆರ್‌ಬಿಎಲ್ ಬ್ಯಾಂಕ್ ಸಾಧ್ಯವಿದ್ದಷ್ಟು ಗರಿಷ್ಟ ಪ್ರಮಾಣದಲ್ಲಿ ಅತ್ಯಂತ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸುತ್ತದೆ, ಕಾರ್ಡ್ ಹೊಂದಿರುವವರನ್ನು ಹೊರತುಪಡಿಸಿ ಅದನ್ನು ಬೇರೆ ಯಾರಿಗೂ ಬಹಿರಂಗಪಡಿಸುವುದಿಲ್ಲ. ಪಿನ್ ಸೆಟ್ ಮಾಡುವ ಕಾರ್ಯವಿಧಾನವನ್ನು ಮೊಬ್ಯಾಂಕ್, ನೆಟ್ ಬ್ಯಾಂಕಿಂಗ್, ಐವಿಆರ್ ಮತ್ತು  ಗ್ರಾಹಕರ ನೋಂದಾಯಿತ ಮೊಬೈಲ್ ಸಂಖ್ಯೆಯಿಂದ ಎಸ್‌ಎಂಎಸ್ ಮುಖಾಂತರ ಪ್ರಾರಂಭಿಸುವ ಮೂಲಕ ಮಾಡಲಾಗುತ್ತದೆ. ಪಿನ್ ಅನ್ನು ನಂತರ ಗ್ರಾಹಕರು ತನ್ನ ಸ್ವಂತ ಅಪಾಯದಲ್ಲಿ ಯಾವುದೇ ಆರ್‌ಬಿಎಲ್ ಬ್ಯಾಂಕ್ ಎಟಿಎಂನಲ್ಲಿ, ಮೊಬ್ಯಾಂಕ್ , ಇಂಟರ್ನೆಟ್ ಬ್ಯಾಂಕಿಂಗ್, ಐವಿಆರ್ ಮೂಲಕ ಅಥವಾ ತನ್ನ ನೋಂದಾಯಿತ ಮೊಬೈಲ್ ಸಂಖ್ಯೆಯಿಂದ ರೀಪಿನ್ ಸಂದೇಶ ಕಳುಹಿಸುವ ಮೂಲಕ ಬದಲಾಯಿಸಬಹುದು.ಪಿನ್ ಬಳಕೆಯಿಂದ ಕಾರ್ಡ್ ಕಾರ್ಯನಿರ್ವಹಿಸುತ್ತದೆ ಮತ್ತು ಇದು ಖಾತೆ ಬಳಸಲು ಅನುವು ಮಾಡುತ್ತದೆ ಎಂಬುದನ್ನು ಕಾರ್ಡ್‌ದಾರರು ಒಪ್ಪುತ್ತಾರೆ, ಪ್ರತಿನಿಧಿಸುತ್ತಾರೆ ಮತ್ತು ಖಾತರಿಪಡಿಸುತ್ತಾರೆ. ಕಾರ್ಡ್‌ದಾರರು ಪಿನ್‌ನ ಬಳಕೆ, ಗೋಪ್ಯತೆ , ಪಿನ್‌ನ ರಕ್ಷಣೆ, ಜೊತೆಗೆ ಅಂತಹ ಪಿನ್ ಬಳಕೆಯಿಂದ ಖಾತೆಗೆ ನಮೂದಿಸಲಾದ ಎಲ್ಲಾ ಆದೇಶಗಳು ಮತ್ತು ಮಾಹಿತಿಗಳಿಗೆ ಸಂಪೂರ್ಣ ಜವಾಬ್ದಾರಿಯನ್ನು ಒಪ್ಪುತ್ತಾರೆ. ಮೂರನೇ ವ್ಯಕ್ತಿಯ ಗಮನಕ್ಕೆ ಬರಲು ಅನುಕೂಲಕವಾಗುವಂತೆ ಯಾವುದೇ ರೂಪದಲ್ಲಿ ಪಿನ್ ಅನ್ನು ಕಾರ್ಡ್‌ದಾರರು ದಾಖಲಿಸಬಾರದು. ಪಿನ್ ಮೂಲಕ ದೃಢೀಕರಿಸಿದ ವಹಿವಾಟುಗಳು ಮತ್ತು ಸೂಚನೆಗಳನ್ನು ನಡೆಸಲು ಆರ್‌ಬಿಎಲ್ ಬ್ಯಾಂಕ್‌ಗೆ ಕಾರ್ಡ್‌ದಾರರು ಅಧಿಕಾರವನ್ನು ನೀಡುತ್ತಾರೆ ಮತ್ತು ಅದನ್ನು ಹಿಂಪಡೆಯುವುದಿಲ್ಲ. ಕಾರ್ಡ್‌ದಾರರ ಪಿನ್‌ನ ಪರಿಶೀಲನೆಯ ಮೂಲಕ ಹೊರತುಪಡಿಸಿ ಕಾರ್ಡ್‌ದಾರರಿಂದ ಕಳುಹಿಸಲಾದ ಅಥವಾ ಕಳುಹಿಸಲಾಗಿದೆ ಎಂದು ಹೇಳಲಾದ ವಹಿವಾಟು ಸೂಚನೆಯ ದಢೀಕರಣವನ್ನು ಪರಿಶೀಲಿಸಲು ಆರ್‌ಬಿಎಲ್ ಬ್ಯಾಂಕ್ ಯಾವುದೇ ಬಾಧ್ಯತೆಯನ್ನು ಹೊಂದಿಲ್ಲ. ಕಾರ್ಡ್‌ದಾರರು ಪಿನ್‌ನ ಭದ್ರತೆಯನ್ನು ಕಾಪಾಡಲು ಎಲ್ಲಾ ಸಮಯದಲ್ಲೂ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ. ಇಲ್ಲಿ ಹೇಳಲಾದ ನಿಬಂಧನೆಗಳಿಗೆ ಒಳಪಟ್ಟು ಮತ್ತು ಆರ್‌ಬಿಎಲ್ ಬ್ಯಾಂಕ್‌ನಿಂದ ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದಂತೆ, ಕಾರ್ಡ್ ಮತ್ತು/ಅಥವಾ ಪಿನ್‌ನ ಯಾವುದೇ ಅಸಮರ್ಪಕ/ವಂಚನೆಯ/ಅನಧಿಕೃತ/ನಕಲಿ/ತಪ್ಪಾದ ಬಳಕೆಯ ಸಂದರ್ಭದಲ್ಲಿ ಕಾರ್ಡ್‌ದಾರರು ಆರ್‌ಬಿಎಲ್ ಬ್ಯಾಂಕ್‌ನ್ನು ಹೊಣೆಗಾರನನ್ನಾಗಿ ಮಾಡುವುದಿಲ್ಲ. ಅಲ್ಲದೆ, ಯಾವುದೇ ಮೂರನೇ ವ್ಯಕ್ತಿಯ ಕೈಗೆ ಕಾರ್ಡ್ ಸಿಗುವುದರಿಂದ ಅಥವಾ ಯಾವುದೇ ಮೂರನೇ ವ್ಯಕ್ತಿಗೆ ಪಿನ್ ಗೊತ್ತಾಗುವುದರಿಂದ, ಯಾವುದೇ ಮೂರನೇ ವ್ಯಕ್ತಿಯಿಂದ ಕಾರ್ಡ್‌ನ ಬಳಕ/ದುರ್ಬಳಕೆಯೊಂದಿಗೆ ಸಂಬಂಧಿಸಿದ ಯಾವುದೇ ಪರಿಣಾಮಗಳಿಗೆ ಆರ್‌ಬಿಎಲ್ ಬ್ಯಾಂಕ್ ಹೊಣೆಯಾಗುವುದಿಲ್ಲ. ಖಾತೆ

ಸೇರಿದಂತೆ ಯಾವುದೇ ಮೂರನೇ ವ್ಯಕ್ತಿಗೆ ಈ ಸೇವೆಯು ಲಭ್ಯವಾದಲ್ಲಿ, ಕಾರ್ಡ್‌ದಾರರು ಜವಾಬ್ದಾರರಾಗಿರುತ್ತಾರೆ ಮತ್ತು ಅಂತಹ ಲಭ್ಯತೆ ಮತ್ತು ಬಳಕೆಗೆ ಸಂಬಂಧಿಸಿದ ಅಥವಾ ಆಧರಿಸಿ ಮೂರನೇ ವ್ಯಕ್ತಿಯಿಂದ ಬಳಕೆ/ದುರ್ಬಳಕೆಯನ್ನು ಆಧರಿಸಿ ಉಂಟಾದ ಯಾವುದೇ ಹೊಣೆಗಾರಿಕೆ, ವೆಚ್ಚಗಳು ಅಥವಾ ಹಾನಿಗಳಿಗೆ ಕಾರ್ಡ್‌ದಾರರು ಹೊಣೆಯಾಗಿರುತ್ತಾರೆ ಮತ್ತು ಅದರ ವಿರುದ್ಧ ಆರ್‌ಬಿಎಲ್‌ಗೆ ನಷ್ಟತುಂಬಿಕೊಡುತ್ತಾರೆ.

ಕಾರ್ಡ್‌ನ ಮಾನ್ಯತೆ

ಕಾರ್ಡ್ ಕಾರ್ಡ್‌ನ ಮೇಲ್ಭಾಗದಲ್ಲಿ ಸೂಚಿಸಲಾದ ತಿಂಗಳು/ವರ್ಷದ ಕೊನೆಯ ದಿನಾಂಕದವರೆಗೆ ಮಾನ್ಯವಾಗಿರುತ್ತದೆ. ಕಾರ್ಡ್‌ದಾರರು ಅದರ ವಾಯಿದೆ ಮುಗಿದಾಗ ಕಾರ್ಡ್ ಅನ್ನು ಹಲವು ತುಂಡುಗಳನ್ನಾಗಿ ಮಾಡುವ ಮೂಲಕ ನಾಶಪಡಿಸುತ್ತಾರೆ. ಕಾರ್ಡ್ ವಾಯಿದೆ ಮುಗಿದಾಗ ಅದನ್ನು ನವೀಕರಿಸುವ ಸಂಪೂರ್ಣ ಹಕ್ಕನ್ನು ಆರ್‌ಬಿಎಲ್ ಬ್ಯಾಂಕ್ ಕಾಯ್ದಿರಿಸುತ್ತದೆ.

## ಕಳೆದುಹೋದ ಅಥವಾ ಕಳವಾದ ಕಾರ್ಡ್‌ಗಳು:

ಕಾರ್ಡ್ ಕಳೆದುಹೋದರೆ ಅಥವಾ ಕಳುವಾದರೆ, ಕಾರ್ಡ್‌ದಾರರು ಸ್ಥಳೀಯ ಪೊಲೀಸರಿಗೆ ವರದಿ ಸಲ್ಲಿಸಬೇಕು ಮತ್ತು ಅದರ ಪ್ರತಿಯನ್ನು ಆರ್‌ಬಿಎಲ್ ಬ್ಯಾಂಕ್‌ಗೆ ಕಳುಹಿಸಬೇಕು. ಕಾರ್ಡ್‌ದಾರರು ಕಾರ್ಡ್ ನಷ್ಟದ ಕುರಿತು ಆರ್‌ಬಿಎಲ್ ಬ್ಯಾಂಕ್‌ನ ಗ್ರಾಹಕ ಕಾಳಜಿ ಕೇಂದ್ರಕ್ಕೆ ಕರೆ ಮಾಡುವ ಮೂಲಕ ಅಥವಾ ಆರ್‌ಬಿಎಲ್ ಬ್ಯಾಂಕ್‌ನ ತನ್ನ ಶಾಖೆಗೆ ಲಿಖಿತ ಸಂವಹನದ ರೀತಿಯಲ್ಲಿ ಅಥವಾ ಆರ್‌ಬಿಎಲ್‌ನಿಂದ ಸ್ವೀಕಾರಾರ್ಹವಾದ ಇತರ ವಿಧಾನದ ಮೂಲಕ ವರದಿ ಮಾಡಬಹುದು. ಇನ್ನಷ್ಟು ತಿಳಿದುಕೊಳ್ಳಲು ಈ ಯು ಆರ್‌ಎಲ್‌ಗೆ ಕ್ಲಿಕ್ ಮಾಡಿ: http://bitly.ws/suwH . ಗ್ರಾಹಕ ಕಾಳಜಿಯ ಸಂಪರ್ಕ ವಿವರಗಳನ್ನು ಆರ್‌ಬಿಎಲ್ ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ನೀಡಲಾಗಿದೆ. ಆರ್‌ಬಿಎಲ್ ಬ್ಯಾಂಕ್ ಸಾಕಷ್ಟು ಪರಿಶೀಲನೆಯ ನಂತರ ಆರ್‌ಬಿಎಲ್ ಬ್ಯಾಂಕ್‌ನ ಕಾರ್ಯನಿರ್ವಹಣ ಅವಧಿಯಲ್ಲಿ ಕಾರ್ಡ್ ಅನ್ನು ಹಾಟ್‌ಲಿಸ್ಟ್ ಮಾಡುತ್ತದೆ/ನಿರ್ಬಂಧಿಸುತ್ತದೆ. ಒಂದು ವೇಳೆ ಕಾರ್ಡ್‌ದಾರರು ವಿದೇಶದಲ್ಲಿ ಕಾರ್ಡ್ ಕಳೆದುಕೊಂಡರೆ, ಅವರು ಮೇಲಿನ ಪ್ರಕ್ರಿಯೆಯನ್ನು ಅನುಸರಿಸಬೇಕು ಅಥವಾ ವೀಸಾ/ಮಾಸ್ಟರ್‌ಕಾರ್ಡ್ ಜಾಗತಿಕ ತುರ್ತು ಸಹಕಾರ ಸಹಾಯ ವಾಣಿಯ ಮೂಲಕ ನಷ್ಟವನ್ನು ವರದಿ ಮಾಡಬೇಕು;ಅಂತಹ ಸೇವೆಗಳ ಶುಲ್ಕವನ್ನು ಕಾರ್ಡ್‌ದಾರರೇ ಭರಿಸಬೇಕು. ಕಾರ್ಡ್‌ನ ಭದ್ರತೆಗೆ ಕಾರ್ಡ್‌ದಾರರು ಜವಾಬ್ಧಾರರಾಗಿರುತ್ತಾರೆ ಮತ್ತು ಅದರ ಸುರಕ್ಷತೆಯನ್ನು ಖಚಿತಪಡಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತಾರೆ. ಕಾರ್ಡ್ ಹಾಟ್‌ಲಿಸ್ಟ್ ಆಗುವುವರೆಗೆ/ರದ್ದಾಗುವವರೆಗೆ ಕಾರ್ಡ್ ಮೇಲೆ ಉಂಟಾಗುವ ಎಲ್ಲಾ ವೆಚ್ಚಗಳಿಗೆ ಕಾರ್ಡ್‌ದಾರರು ಹೊಣೆಯಾಗಿರುತ್ತಾರೆ. ಇದಲ್ಲದೆ, ಮೇಲೆ ಹೇಳಿದ ಹಂತಗಳನ್ನು ಅನುಸರಿಸಿಲ್ಲ ಎಂದು ಆರ್‌ಬಿಎಲ್ ಬ್ಯಾಂಕ್ ನಿರ್ಧರಿಸಿದಲ್ಲಿ, ಕಳೆದು ಹೋದ ಅಥವಾ ಕಳುವಾದ ಕಾರ್ಡ್‌ನ ಆರ್ಥಿಕ ಹೊಣೆಯು ಕಾರ್ಡ್‌ದಾರರ ಮೇಲಿರುತ್ತದೆ. ಒಮ್ಮೆ ಕಾರ್ಡ್ ಕಳೆದುಹೋಗಿದೆ, ಕಳುವಾಗಿದೆ ಅಥವಾ ಹಾನಿಯಾಗಿದೆ ಎಂದು ವರದಿ ಮಾಡಿದ ನಂತರ ನಂತರದಲ್ಲೇ ಅದು ಸಿಕ್ಕಿದಲ್ಲಿ, ಅದನ್ನು ಅರ್ಧದಲ್ಲೇ ಮೊಟಕುಗೊಳಿಸಿ ತಕ್ಷಣವೇ ಸೂಚಿಸಬೇಕು ಮತ್ತು ಆರ್‌ಬಿಎಲ್ ಬ್ಯಾಂಕ್‌ಗೆ ಹಿಂತಿರುಗಿಸಬೇಕು ಮತ್ತು ಅದರ ದುರ್ಬಳಕೆಯನ್ನು ತಪ್ಪಿಸಲು ಸಾಕಷ್ಟು ಕ್ರಮ ಕೈಗೊಳ್ಳಲಾಗುತ್ತದೆ ಎಂಬ ಅಂಶವನ್ನು ಕಾರ್ಡ್‌ದಾರರು ತಿಳಿದುಕೊಳ್ಳಬೇಕು.

## ಕಾರ್ಡ್ ಒಪ್ಪಿಸುವಿಕೆ/ಬದಲಿಸುವಿಕೆ

ಕಾರ್ಡ್‌ದಾರರಿಗೆ ನೀಡಲಾದ ಕಾರ್ಡ್ ಆರ್‌ಬಿಎಲ್ ಬ್ಯಾಂಕ್‌ನ ಆಸ್ತಿಯಾಗಿರುತ್ತದೆ ಮತ್ತು ಮನವಿಯ ಮೇರೆಗೆ, ಆರ್‌ಬಿಎಲ್ ಬ್ಯಾಂಕ್‌ಗೆ ಒಪ್ಪಿಸಲಾಗುತ್ತದೆ.ಒಂದು ವೇಳೆ ಕಾರ್ಡ್‌ದಾರರಿಗೆ ಇನ್ನು ಮುಂದೆ ಸೇವೆಗಳ ಅಗತ್ಯವಿಲ್ಲದೇ ಇದ್ದಲ್ಲಿ, ಅಥವಾ ಯಾವುದೇ ಕಾರಣಕ್ಕಾಗಿ ಆರ್‌ಬಿಎಲ್ ಬ್ಯಾಂಕ್ ಸೇವೆಯನ್ನು ಹಿಂದಕ್ಕೆ ಪಡೆದುಕೊಂಡಲ್ಲಿ, ಕಾರ್ಡ್‌ದಾರರು ರದ್ದತಿಗಾಗಿ ಕಾರ್ಡ್ ಅನ್ನು ಆರ್‌ಬಿಎಲ್ ಬ್ಯಾಂಕ್‌ಗೆ ಹಿಂತಿರುಗಿಸುತ್ತಾರೆ.ಆರ್‌ಬಿಎಲ್ ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ ಯಾವುದೇ ನಷ್ಟವಾದ/ಕಳುವಾದ ಕಾರ್ಡ್ ಸೇರಿದಂತೆ ಕಾರ್ಡ್‌ದಾರರಿಗೆ ಹೊಸ ಪಿನ್ ಜೊತೆಗೆ ಬದಲಿ ಕಾರ್ಡ್ ಅನ್ನು ನೀಡಬಹುದು.

ಮುಕ್ತಾಯಗೊಳಿಸುವಿಕೆ:

ಕಾರ್ಡ್‌ದಾರರು ಓರೆಯಾಗಿ ಎರಡು ತುಂಡುಗಳಾಗಿ ಕತ್ತರಿಸಿದ ಕಾರ್ಡ್‌ನ ವಾಪಾಸಾತಿಯೊಂದಿಗೆ ಆರ್‌ಬಿಎಲ್ ಬ್ಯಾಂಕ್‌ಗೆ ಲಿಖಿತ ಸೂಚನೆಯ ಮೂಲಕ ಯಾವುದೇ ಸಮಯದಲ್ಲಾದರೂ ಕಾರ್ಡ್‌ನ್ನು ನಿಲ್ಲಿಸಿಬಿಡಬಹುದು/ಮುಕ್ತಾಯಗೊಳಿಸಬಹುದು. ಆರ್‌ಬಿಎಲ್‌ನಿಂದ ಸೂಕ್ತ ಅಂಗೀಕಾರವುಳ್ಳ ಲಿಖಿತ ಸೂಚನೆಯ ಸ್ವೀಕೃತಿಯವರೆಗೆ, ಉಂಟಾಗುವ ಎಲ್ಲಾ ವೆಚ್ಚಗಳಿಗೆ ಕಾರ್ಡ್‌ದಾರರು ಹೊಣೆಯಾಗಿರುತ್ತಾರೆ. ಆರ್‌ಬಿಎಲ್ ಬ್ಯಾಂಕ್ ಯಾವುದೇ ಸಮಯದಲ್ಲಿ, ಸೂಚನೆಯೊಂದಿಗೆ ಅಥವಾ ಸೂಚನೆ ನೀಡದೆ, ಆರ್‌ಬಿಎಲ್ ಬ್ಯಾಂಕ್‌ನ ಸಂಪೂರ್ಣ ವಿವೇಚನೆಗೆ ಅಗತ್ಯವಿರುವ ಸಂದರ್ಭಗಳಲ್ಲಿ, ಕಾರ್ಡ್‌ನ್ನು ಮುಕ್ತಾಯಗೊಳಿಸಬಹುದು.

## ಬಳಕೆ ಮಾರ್ಗಸೂಚಿಗಳು:

1. ಕಾರ್ಡ್‌ದಾರರು ಎಲ್ಲಾ ಸಮಯದಲ್ಲೂ ಕಾರ್ಡ್ ಅನ್ನು ಸುರಕ್ಷಿತ ಸ್ಥಳದಲ್ಲಿ ಇರಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ಯಾವುದೇ ಸಂದರ್ಭದಲ್ಲೂ ಕಾರ್ಡ್ ಅನ್ನು ಇತರ ಯಾವುದೇ ವ್ಯಕ್ತಿಗೆ ಬಳಸಲು ಅನುಮತಿಸಬಾರದು. ಕಾರ್ಡ್‌ದಾರರು ಸ್ವೀಕೃತಿಯಾದ ತಕ್ಷಣದಲ್ಲೇ ಕಾರ್ಡ್‌ಗೆ ಸಹಿ ಮಾಡುತ್ತಾರೆ. ಕಾರ್ಡ್‌ನ ಸುರಕ್ಷಿತ ಬಳಕೆಗೆ ಸುರಕ್ಷತಾ ಕ್ರಮಕ್ಕಾಗಿ ಕಾರ್ಡ್‌ದಾರರು ಮೊದಲ ಬಳಕೆಯ ನಂತರ ಪಿನ್ ಅನ್ನು ಬದಲಾಯಿಸಬೇಕು(ಆರ್‌ಬಿಎಲ್ ಬ್ಯಾಂಕ್ ನಿಯೋಜಿಸಿದ್ದರೆ) ಮತ್ತು ಇನ್ನೊಂದು ಪಿನ್ ಅನ್ನು ಆರಿಸಬೇಕು. ಆರ್‌ಬಿಎಲ್ ನೀಡುವ ಎಲ್ಲಾ ಸೌಲಭ್ಯಗಳಿಗೆ ಮತ್ತು ಸಂಬಂಧಿತ ಶುಲ್ಕಗಳಿಗೆ ಕಾರ್ಡ್‌ದಾರರು ಹೊಣೆಯಾಗಿರುತ್ತಾರೆ ಮತ್ತು ಕಾರ್ಡ್ ಮತ್ತು ಆರ್‌ಬಿಎಲ್ ಬ್ಯಾಂಕ್‌ನೊಂದಿಗಿನ ಎಲ್ಲಾ ವ್ಯವಹಾರಗಳಿಗೆ ಸಂಬಂಧಿಸಿ ಉತ್ತಮ ನಂಬಿಕೆಯೊಂದಿಗೆ ಕಾರ್ಯನಿರ್ವಹಿಸುತ್ತಾರೆ. ಕಾರ್ಡ್‌ದಾರರಿಗೆ ನೀಡಲಾಗುವ ಸೂಚನೆಗೆ ಒಳಪಟ್ಟು ಕಾರ್ಡ್‌ನಿಂದ ಬೆಂಬಲಿತವಾದ ವಹಿವಾಟು ವಿಧಗಳನ್ನು ಬದಲಾಯಿಸುವ ಹಕ್ಕನ್ನು ಆರ್‌ಬಿಎಲ್ ಬ್ಯಾಂಕ್ ಕಾಯ್ದಿರಿಸುತ್ತದೆ. ಯಾವುದೇ ಆರ್‌ಬಿಎಲ್ ಬ್ಯಾಂಕ್‌ನ ಗ್ರಾಹಕ ಸೇವಾ ಕೇಂದ್ರಗಳಿಂದ ಖಾತೆ/ಕಾರ್ಡ್ ನಿರ್ವಹಿಸುವಲ್ಲಿ ಯಾವುದೇ ದೋಷ ಅಥವಾ ಅಕ್ರಮವಿದ್ದಲ್ಲಿ ಕಾರ್ಡ್‌ದಾರರು ತಕ್ಷಣವೇ ಆರ್‌ಬಿಎಲ್ ಬ್ಯಾಂಕ್‌ಗೆ ಸೂಚಿಸಬೇಕು.
2. ಕರೆ ಮಾಡಬೇಡಿ ಸೇವೆಯನ್ನು ಸಕ್ರಿಯೊಳಿಸುವ ಮೂಲಕ ಕಾರ್ಡ್‌ದಾರರು ಪ್ರಚಾರದ ಕೊಡುಗೆ ಸಂದೇಶಗಳನ್ನು ಹಂಚಿಕೊಳ್ಳುವುದೇ ಇರುವ ಆಯ್ಕೆಯಿಂದ ಹೊರಗುಳಿಯಲು ಬಯಸಬಹುದು.
3. ಡೆಬಿಟ್ ಕಾರ್ಡ್ ಅನ್ನು ಕಾಲಕಾಲಕ್ಕೆ ನವೀಕರಿಸಿದಂತೆ ಸಂಬಂಧಪಟ್ಟ ನಿಯಂತ್ರಣ ಪ್ರಾಧಿಕಾರಗಳು ನಿಗದಿಪಡಿಸಿದಂತೆ ವಿದೇಶಿ ಆನ್‌ಲೈನ್ ಫಾರೆಕ್ಸ್ ವ್ಯಾಪಾರ ಸೇರಿದಂತೆ ಯಾವುದೇ ಅಥವಾ ಎಲ್ಲಾ ನಿರ್ಬಂಧಿತ ವಹಿವಾಟುಗಳಿಗೆ ಬಳಸಬಾರದು. ಈ ಪರಿಣಾಮಕ್ಕೆ ಅಸ್ತಿತ್ವದಲ್ಲಿರುವ ಮಾರ್ಗಸೂಚಿಗಳನ್ನು ಅನುಸರಿಸುವ ಜವಾಬ್ದಾರಿಯು ಡೆಬಿಟ್ ಕಾರ್ಡ್‌ದಾರರ ಮೇಲಿರುತ್ತದೆ.

## ಅನಿಧಿಕೃತ ವಹಿವಾಟುಗಳ ಸಂದರ್ಭದಲ್ಲಿ ಹೊಣೆಗಾರಿಕೆ

ಒಂದು ವೇಳೆ ಕಾರ್ಡ್ ಕಳೆದುಹೋದರೆ ಅಥವಾ ಕಳುವಾದರೆ ಅಥವಾ ಕಾರ್ಡ್ ಮೂಲಕ ಯಾವುದೇ ಅನಧಿಕೃತ ವಹಿವಾಟು ಉಂಟಾದ ಸಂದರ್ಭದಲ್ಲಿ, ಕಾರ್ಡ್ ಸದಸ್ಯರು ಕೂಡಲೇ ಆರ್‌ಬಿಎಲ್ ಬ್ಯಾಂಕ್‌ಗೆ ಕಳೆದುಹೋದ/ಕಳವಾದ ಕುರಿತು ವರದಿ ಮಾಡಬೇಕು. ಆರ್‌ಬಿಎಲ್ ಬ್ಯಾಂಕ್‌ನ 24 ಗಂಟೆಗಳ ಗ್ರಾಹಕ ಸೇವಾ ಕೇಂದ್ರಕ್ಕೆ ಕರೆ ಮಾಡುವ ಮೂಲಕ ಅಥವಾ ಆರ್‌ಬಿಎಲ್ ಬ್ಯಾಂಕ್‌ನ ತನ್ನ ಶಾಖೆಗೆ ಲಿಖಿತ ಸಂವಹನದ ಮೂಲಕ ಅಥವಾ ಆರ್‌ಬಿಎಲ್ ಬ್ಯಾಂಕ್ ಯಾವುದೇ ಸ್ವೀಕಾರಾರ್ಹ ವಿಧ ಮೂಲಕ ಕಾರ್ಡ್‌ದಾರರು ಕಾರ್ಡ್ ನಷ್ಟ/ಕಳವಿನ ಕುರಿತು ತಕ್ಷಣವೇ ತಿಳಿಸಬೇಕು.

ಕಾರ್ಡ್‌ದಾರರು ಈ ವಿಭಾಗದಲ್ಲಿನ ನಿಬಂಧನೆಗಳ ಮಟ್ಟಿಗೆ ಮತ್ತು ಅನುಸಾರವಾಗಿ, ಅನಧಿಕೃತ ವಹಿವಾಟಿಗೆ (ಎಟಿಎಂ ನಗದು ಹಿಂಪಡೆತ ಮತ್ತು ಆನ್‌ಲೈನ್ ಡೆಬಿಟ್ ಕಾರ್ಡ್ ಬಳಕೆ ಹೊರತಾಗಿ) ಆತನು/ಆಕೆಯು ಅಂತಹ ಅನಧಿಕೃತ ವಹಿವಾಟಿನ ಕುರಿತು ತಕ್ಷಣವೇ ಆರ್‌ಬಿಎಲ್ ಬ್ಯಾಂಕ್‌ಗೆ ಲಿಖಿತವಾಗಿ ವರದಿ ಮಾಡಿದಲ್ಲಿ ಕಾರ್ಡ್‌ದಾರರು ಯಾವುದೇ ಹಣಕಾಸಿನ ಹೊಣೆಗಾರಿಕೆಯನ್ನು ಹೊಂದುವುದಿಲ್ಲ ಮತ್ತು ಕಾರ್ಡ್‌ದಾರರು ಆರ್‌ಬಿಎಲ್ ಬ್ಯಾಂಕ್‌ನ ಅಭಿಪ್ರಾಯದಲ್ಲಿ, ನಿರ್ಲಕ್ಷ್ಯದ ವಂಚನೆ ಅಥವಾ ಒಪ್ಪಂದದ ತಪ್ಪಿತಸ್ಥ, ಆಗಿರುವುದಿಲ್ಲ. ಕಾರ್ಡ್‌ದಾರರಿಗೆ ಮೇಲೆ ಸೂಚಿಸಲಾದ ಪ್ರಯೋಜನವು ನಿಬಂಧನೆಗಳಿಗೆ ಒಳಪಟ್ಟು ಮತ್ತು ಈ ಕೆಳಗಿನ ನಿಬಂಧನೆಗಳನ್ನು ಪೂರೈಸಿದ ಸಂದರ್ಭದಲ್ಲಿ ಮಾತ್ರವೇ ಲಭ್ಯವಿರುತ್ತದೆ:

1. ಆರ್‌ಬಿಎಲ್ ನಿಗದಿಪಡಿಸಿದ ಪ್ರಕ್ರಿಯೆಯ ಪ್ರಕಾರ ಕಾರ್ಡ್‌ದಾರರಿಂದ ಕಾರ್ಡ್ ಕಳೆದುಹೋಗಿದೆ/ಕಳುವಾಗಿದೆ ಎಂದು ಸರಿಯಾಗಿ ವರದಿಯಾಗಿದ್ದಲ್ಲಿ ಮತ್ತು ಕಾರ್ಡ್‌ದಾರರು ಆರ್‌ಬಿಎಲ್ ಬ್ಯಾಂಕ್‌ಗೆ ಅಂತಹ ನಷ್ಟ/ಕಳವಿನ ಎಫ್‌ಐಆರ್ ವರರದಿಯ ಪ್ರತಿಯನ್ನು ಸಲ್ಲಿಸಿದಲ್ಲಿ;ಒಂದು ವೇಳೆ ಸೂಚಿಸಿದ ಅನಧಿಕೃತ ವಹಿವಾಟು/ಗಳು ಆರ್‌ಬಿಎಲ್ ಬ್ಯಾಂಕ್‌ಗೆ ಕಾರ್ಡ್ ಕಳೆದುಹೋದ/ಕಳವಾದ ಅಂತಹ ವರದಿ ಸಲ್ಲಿಸಿದ ದಿನಾಂಕದ 15 ದಿನಗಳ ಅವಧಿಯೊಳಗೆ ನಡೆದಿದ್ದಲ್ಲಿ;
2. ಕಾರ್ಡ್‌ದಾರರು ಕಾರ್ಡ್‌ನ ನಷ್ಟ/ಕಳವಿನ ವರದಿ ಮಾಡುವ ದಿನಾಂಕಕ್ಕಿಂತ 3 ತಿಂಗಳೊಳಗೆ ಕಾರ್ಡ್ ಬಳಸಿ ಕನಿಷ್ಟ ಒಂದು ಖರೀದಿ ವಹಿವಾಟು ನಡೆಸಿದ್ದಲ್ಲಿ; ಮತ್ತು
3. ಒಂದು ವೇಳೆ ಕಾರ್ಡ್‌ದಾರರು ಮೊಬೈಲ್ ಬ್ಯಾಂಕಿಂಗ್ & ವಹಿವಾಟು ಎಸ್‌ಎಂಎಸ್ ಸೌಲಭ್ಯಕ್ಕಾಗಿ ಆರ್‌ಬಿಎಲ್ ಬ್ಯಾಂಕ್‌ನಲ್ಲಿ ತನ್ನ ಮೊಬೈಲ್ ಸಂಖ್ಯೆಯನ್ನು ನೋಂದಾಯಿಸಿದ್ದಲ್ಲಿ.

ಆದರೂ, ಆರ್‌ಬಿಎಲ್ ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ ಕಾರ್ಡ್‌ದಾರರಿಗೆ ಸಂಪೂರ್ಣವಾಗಿ ವಿಮಾ ರಕ್ಷಣೆಯ ಪ್ರಯೋಜನವನ್ನು ನಿರಾಕರಿಸಬಹುದು ಅಥವಾ ಅಂತಹ ತನಿಖೆ/ವಿಚಾರಣೆಯ ಮೇಲೆ ಉಂಟಾದ ವೆಚ್ಚಗಳನ್ನು ವಿಧಿಸಬಹುದು:

1. ಆರ್‌ಬಿಎಲ್ ಬ್ಯಾಂಕ್ ತನ್ನ ಏಕಮಾತ್ರ ಅಭಿಪ್ರಾಯದಲ್ಲಿ . ಲಭ್ಯವಿರುವ ಸಾಕ್ಷಿಯ ಆಧಾರದ ಮೇಲೆ(ಕಾರ್ಡ್‌ದಾರರು ಒದಗಿಸಿದ ಮತ್ತು/ಅಥವಾ ಪಡೆದ) ಕಾರ್ಡ್‌ದಾರರು ಕಾರ್ಡ್‌ದಾರರು ಖಾತೆ ಅಥವಾ ಕಾರ್ಡ್‌ನ್ನು ನಿಭಾಯಿಸುವುದರಲ್ಲಿ ತೀವ್ರ ನಿರ್ಲ್ಯಕ್ಷ ಹೊಂದಿದ್ದಾರೆ ಅಥವಾ ಮೋಸಗಾರನಾಗಿದ್ದಾರೆ(ಕಾರ್ಡ್, ಅಥವಾ ಖಾತೆ ಅಥವಾ ಪಿನ್ ರಕ್ಷಿಸುವಿಕೆ, ಮತ್ತು ನಷ್ಟ ಅಥವಾ ಅನಧಿಕೃತ ವಹಿವಾಟುಗಳ ವರದಿ)ಎಂದು ನಿರ್ಧರಿಸಿದಲ್ಲಿ ಮತ್ತು/ಅಥವಾ
2. ಆರ್‌ಬಿಎಲ್ ಬ್ಯಾಂಕ್ ತನ್ನ ಏಕಮಾತ್ರ ಅಭಿಪ್ರಾಯದಲ್ಲಿ,ಅನಧಿಕೃತ ವಹಿವಾಟುಗಳು ಮತ್ತು/ಅಥವಾ ವ್ಯಾಪಾರಿ ವಿಧಗಳನ್ನು ಒಳಗೊಂಡಂತೆ ಹೆಚ್ಚಿನ ತನಿಖೆಗಳ ಅಗತ್ಯವಿದೆ ಎಂದು ನಿರ್ಧರಿಸಿದಲ್ಲಿ;ಮತ್ತು/ಅಥವಾ
3. ಕಾರ್ಡ್‌ದಾರರ ಈ ಹಿಂದಿನ ಖಾತೆಯ ಇತಿಹಾಸವು ತೃಪ್ತಿಕರವಾಗಿರದೇ ಇದ್ದಲ್ಲಿ.

ಕಾರ್ಡ್‌ಗಳ ಮೇಲಿನ ವಿಮಾ ರಕ್ಷಣೆಯು ಯಾವುದೇ ದುರ್ಬಳಕೆ/ಅನಧಿಕೃತ ವಹಿವಾಟಿಗೆ ಮಾತ್ರವೇ ನೀಡಲ್ಪಡುತ್ತದೆ. ವಂಚನೆಯ ವಹಿವಾಟಿನ ಸಂದರ್ಭದಲ್ಲಿ ರಕ್ಷಣೆಯ ವ್ಯಾಪ್ತಿಯು ಕಾರ್ಡ್ ವಿಧದಲ್ಲಿ ಸಕ್ರಿಯಗೊಳಿಸಲಾದ ವಿಮಾ ಮಿತಿಯ ವ್ಯಾಪ್ತಿಗೆ ಇರುತ್ತದೆ ಮತ್ತು ಅದನ್ನು ಸೂಚಿಸಲ್ಪಟ್ಟ ಮೂರನೇ ವ್ಯಕ್ತಿಯಿಂದ ಪಾವತಿಸಲ್ಪಡುತ್ತದೆ.

## ಗ್ರಾಹಕರ ಸೀಮಿತ ಹೊಣೆಗಾರಿಕೆ:

(a) ಗ್ರಾಹಕರ ಶೂನ್ಯ ಹೊಣೆಗಾರಿಕೆ

1. ಈ ಕೆಳಗಿನ ಸಂದರ್ಭಗಳಲ್ಲಿ ಅನಧಿಕೃತ ವಹಿವಾಟು ಉಂಟಾದಾಗ ಶೂನ್ಯ ಹೊಣೆಗಾರಿಕೆಗೆ ಗ್ರಾಹಕರ ಅರ್ಹತೆಯು ಉಂಟಾಗುತ್ತದೆ:

    i. ಬ್ಯಾಂಕ್‌ನ ಭಾಗದಿಂದ ವಂಚನೆ/ನಿರ್ಲಕ್ಷ್ಯ/ಕೊರತೆಯ ಕೊಡುಗೆ(ಗ್ರಾಹಕರಿಂದ ವಹಿವಾಟು ವರದಿಯಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಲೆಕ್ಕಿಸದೆ)

    ii. ಮೂರನೇ ವ್ಯಕ್ತಿಯ ಉಲ್ಲಂಘನೆ ಅಂದರೆ ಕೊರತೆಯು ಬ್ಯಾಂಕ್‌ನೊಂದಿಗೆ ಅಥವಾ ಗ್ರಾಹಕರೊಂದಿಗೆ ಇರುವುದಿಲ್ಲ ಆದರೆ ವ್ಯವಸ್ಥೆಯಲ್ಲಿ ಬೇರೆಲ್ಲೋ ಇರುತ್ತದೆ, ಮತ್ತು ಅನಧಿಕೃತ ವಹಿವಾಟಿಗೆ ಸಂಬಂಧಿಸಿದಂತೆ ಗ್ರಾಹಕರು ಬ್ಯಾಂಕ್‌ನಿಂದ ಸಂವಹನವನ್ನು ಸ್ವೀಕರಿಸಿದ ಮೂರು ಕಾರ್ಯನಿರ್ವಹಣ ದಿನಗಳೊಳಗೆ ಸೂಚಿಸುತ್ತಾರೆ.

(b) ಗ್ರಾಹಕರ ಸೀಮಿತ ಹೊಣೆಗಾರಿಕೆ

2. ಈ ಕೆಳಗಿನ ಸಂದರ್ಭಗಳಲ್ಲಿ ಉಂಟಾಗುವ ಅನಧಿಕೃತ ವಹಿವಾಟುಗಳಿಂದ ಉಂಟಾಗುವ ನಷ್ಟಕ್ಕೆ ಗ್ರಾಹಕರೇ ಹೊಣೆಯಾಗಿರುತ್ತಾರೆ.:

    i. ಒಂದು ವೇಳೆ ಗ್ರಾಹಕರ ನಿರ್ಲಕ್ಷ್ಯದಿಂದ ನಷ್ಟ ಉಂಟಾದ ಸಂದರ್ಭದಲ್ಲಿ, ಅವರು ಪಾವತಿ ರುಜುವಾತುಗಳನ್ನು ಹಂಚಿಕೊಂಡಿದ್ದಾಗ, ಅನಧಿಕೃತ ವಹಿವಾಟನ್ನು ಬ್ಯಾಂಕ್‌ಗೆ ವರದಿ ಮಾಡುವವರೆಗೆ ಸಂಪೂರ್ಣ ನಷ್ಟವನ್ನು ಗ್ರಾಹಕರ ಭರಿಸುತ್ತಾರೆ. ಅನಧಿಕೃತ ವಹಿವಾಟಿನ ವರದಿಯ ಬಳಿಕ ಯಾವುದೇ ನಷ್ಟ ಉಂಟಾದಲ್ಲಿ ಅದನ್ನು ಬ್ಯಾಂಕ್ ಭರಿಸುತ್ತದೆ.

    ii. ಒಂದು ವೇಳೆ ಅನಧಿಕೃತ ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ವಹಿವಾಟಿನ ಜವಾಬ್ದಾರಿಯು ಬ್ಯಾಂಕ್ ಅಥವಾ ಗ್ರಾಹಕರಿಗೆ ಇಲ್ಲದೇ ಇರುವ ಸಂದರ್ಭದಲ್ಲಿ, ಆದರೆ ವ್ಯವಸ್ಥೆಯಲ್ಲಿ ಬೇರೆ ಕಡೆ ಇದ್ದಾಗ ಮತ್ತು ಅಂತಹ ವಹಿವಾಟನ್ನು ಗ್ರಾಹಕರು ಬ್ಯಾಂಕ್‌ಗೆ ತಿಳಿಸುವ ಭಾಗದಲ್ಲಿ ವಿಳಂಬವಾದಾಗ(ಬ್ಯಾಂಕ್‌ನಿಂದ ಸಂವಹನ ಪಡೆದ ಬಳಿಕ ನಾಲ್ಕರಿಂದ ಏಳುವ ಕಾರ್ಯನಿರ್ವಹಣ ದಿನಗಳು), ಗ್ರಾಹಕರ ಪ್ರತಿ ವಹಿವಾಟಿನ ಹೊಣೆಗಾರಿಕೆಯು ಕೋಷ್ಟಕ 1ರಲ್ಲಿ ಸೂಚಿಸಲ್ಪಟ್ಟಂತೆ ವಹಿವಾಟು ಮೌಲ್ಯ ಅಥವಾ ಮೊತ್ತಕ್ಕೆ ಸೀಮಿತವಾಗಿರುತ್ತದೆ, ಯಾವುದು ಕಡಿಮೆ ಅದು.

| ಕೋಷ್ಟಕ 1 | |
|---|---|
| ಪ್ಯಾರಾಗ್ರಾಫ್ 7(ii) ಅಡಿಯಲ್ಲಿ ಗ್ರಾಹಕರ ಗರಿಷ್ಠ ಹೊಣೆಗಾರಿಕೆ | |
| ಖಾತೆಯ ವಿಧ | ಗರಿಷ್ಠ ಹೊಣೆಗಾರಿಕೆ (₹) |
| • ಬಿಎಸ್‌ಬಿಡಿ ಖಾತೆಗಳು | 5,000 |
| • ಇತರ ಎಲ್ಲಾ ಎಸ್‌ಬಿ ಖಾತೆಗಳು<br>ಪ್ರೀಪೇಯ್ಡ್ ಪಾವತಿ ಉಪಕರಣಗಳು ಮತ್ತು ಗಿಫ್ಟ್‌ಕಾರ್ಡ್‌ಗಳು<br>• ಎಂಎಸ್‌ಎಂಇಗಳ ಚಾಲ್ತಿ/ನಗದು ಕ್ರೆಡಿಟ್/ಓವರ್‌ಡ್ರಾಫ್ಟ್ ಖಾತೆಗಳು<br>• ರೂ.25 ಲಕ್ಷವರೆಗಿನ ವಾರ್ಷಿಕ ಸರಾಸರಿ ಬಾಕಿ/ಮಿತಿ ಇರುವ ವ್ಯಕ್ತಿಗಳ ಚಾಲ್ತಿ ಖಾತೆ/ನಗದು ಕ್ರೆಡಿಟ್/ಓವರ್‌ಡ್ರಾಫ್ಟ್ ಖಾತೆ(ವಂಚನೆಯ ಘಟನೆಯ ಹಿಂದಿನ 365 ದಿನಗಳಲ್ಲಿ)<br>• ರೂ.5 ಲಕ್ಷ ಮಿತಿಯೊಂದಿಗಿನ ಕ್ರೆಡಿಟ್ ಕಾರ್ಡ್‌ಗಳು | 10,000 |
| • ಇತರ ಎಲ್ಲಾ ಚಾಲ್ತಿ/ನಗದು ಕ್ರೆಡಿಟ್/ಓವರ್‌ಡ್ರಾಫ್ಟ್ ಖಾತೆಗಳು<br>• ರೂ.5 ಲಕ್ಷ ಮಿತಿಯೊಂದಿಗಿನ ಕ್ರೆಡಿಟ್ ಕಾರ್ಡ್‌ಗಳು | 25,000 |

ಇದಲ್ಲದೆ, ವರದಿ ಮಾಡುವ ವಿಳಂಬವು ಏಳು ಕಾರ್ಯನಿರ್ವಹಣ ದಿನಗಳನ್ನು ಮೀರಿದ್ದರೆ, ಗ್ರಾಹಕರ ಹೊಣೆಗಾರಿಕೆಯನ್ನು ಬ್ಯಾಂಕ್‌ನ ಮಂಡಳಿಯ ಅನುಮೋದಿತ ನೀತಿಯ ಅನುಸಾರ ನಿರ್ಧರಿಸಲಾಗುತ್ತದೆ.

8. ಮೂರನೇ ವ್ಯಕ್ತಿ ಉಲ್ಲಂಘನೆಯಲ್ಲಿ ಗ್ರಾಹಕರ ಒಟ್ಟಾರೆ ಹೊಣೆಗಾರಿಕೆಯನ್ನು ಮೇಲಿನ ಪ್ಯಾರಾಗ್ರಾಫ್ 6(ii) ಮತ್ತು ಪ್ಯಾರಾಗ್ರಾಫ್7(ii) ರಲ್ಲಿ ವಿವರಿಸಲಾಗಿದ್ದು, ಕೊರತೆಯು ಬ್ಯಾಂಕ್ ಅಥವಾ ಗ್ರಾಹಕರಲ್ಲಿ ಇರುವುದಿಲ್ಲ ಆದರೆ ವ್ಯವಸ್ಥೆಯಲ್ಲಿ ಬೇರೆಲ್ಲೋ ಇರುತ್ತದೆ, ಇದನ್ನು ಕೋಷ್ಟಕ 2ರಲ್ಲಿ ಸಾರಾಂಶಗೊಳಿಸಲಾಗಿದೆ.

| ಕೋಷ್ಟಕ2 | |
|---|---|
| ಗ್ರಾಹಕರ ಹೊಣೆಗಾರಿಕೆಯ ಸಾರಾಂಶ | |
| ಸಂವಹನ ಸ್ವೀಕರಿಸಿದ ದಿನಾಂಕದಿಂದ ವಂಚನೆಯನ್ನು ವರದಿ ಮಾಡಲು ತೆಗೆದುಕೊಂಡ ಸಮಯ | ಗ್ರಾಹಕರ ಹೊಣೆಗಾರಿಕೆ (₹) |
| 3 ಕಾರ್ಯನಿರ್ವಹಣ ದಿನದೊಳಗೆ | ಶೂನ್ಯ ಹೊಣೆಗಾರಿಕೆ |
| 4 ರಿಂದ 7 ಕಾರ್ಯನಿರ್ವಹಣ ದಿನದೊಳಗೆ | ವಹಿವಾಟು ಮೌಲ್ಯ ಅಥವಾ ಕೋಷ್ಟಕ 1ರಲ್ಲಿ ಸೂಚಿಸಿದ ಮೊತ್ತ, ಯಾವುದು ಕಡಿಮೆ ಇದೆ ಇದು |
| 7 ಕಾರ್ಯನಿರ್ವಹಣ ದಿನಗಳ ನಂತರ | ಬ್ಯಾಂಕ್ ಮಂಡಳಿಯ ಅನುಮೋದಿತ ನೀತಿಯ ಅನುಸಾರ |

ಸಂವಹನವನ್ನು ಸ್ವೀಕರಿಸುವ ದಿನಾಂಕವನ್ನು ಹೊರತುಪಡಿಸಿ ಕೋಷ್ಟಕ 2ರಲ್ಲಿ ಸೂಚಿಸಲಾದ ಕಾರ್ಯನಿರ್ವಹಣ ದಿನವನ್ನು ಗ್ರಾಹಕರ ಹೋಮ್ ಶಾಖೆಯ ಕೆಲಸದ ವೇಳಾಪಟ್ಟಿಯ ಅನುಸಾರ ಎಣಿಕೆ ಮಾಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ಯುಆರ್‌ಎಲ್ ಕ್ಲಿಕ್ ಮಾಡಿ: http://bitly.ws/svVU

## ಪ್ರಚಾರದ ಕೊಡುಗೆಗಳು:

ಆರ್‌ಬಿಎಲ್ ಬ್ಯಾಂಕ್ ಆರ್‌ಬಿಎಲ್ ಬ್ಯಾಂಕ್ ಗ್ರಾಹಕರಿಗೆ ಮೂರನೇ ವ್ಯಕ್ತಿಗಳಿಂದ ವಿಸ್ತರಿಸಲ್ಪಟ್ಟ ಕೊಡುಗೆಗಳು/ಉತ್ಪನ್ನಗಳು/ಸೇವೆಗಳನ್ನು ಆರ್‌ಬಿಎಲ್ ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸುತ್ತದೆ ಮತ್ತು ಆರ್‌ಬಿಎಲ್ ಬ್ಯಾಂಕ್ ಈ ಯಾವುದೇ ಕೊಡುಗೆಗಳು/ಉತ್ಪನ್ನಗಳು/ಸೇವೆಗಳನ್ನು ನೀಡುವುದಿಲ್ಲ. ಆರ್‌ಬಿಎಲ್ ಬ್ಯಾಂಕ್ ಗ್ರಾಹಕರಿಗೆ ಸಂಬಂಧಿಸಿದಂತೆ ಸೂಚಿಸಲ್ಪಟ್ಟ ಮೂರನೇ ವ್ಯಕ್ತಿಯ ನೇರ ಅಥವಾ ಸೂಚಿತ ಏಜೆಂಟ್ ಆಗಿ ಕಾರ್ಯನಿರ್ವಹಿಸುವುದಿಲ್ಲ. ಆರ್‌ಬಿಎಲ್ ಬ್ಯಾಂಕ್ ಮೂರನೇ ವ್ಯಕ್ತಿಗಳು ನೀಡಿದ ಕೊಡುಗೆಗಳು/ಉತ್ಪನ್ನಗಳು/ಸೇವೆಗಳಿಗೆ ಸಂಬಂಧಿಸಿ ಯಾವುದೇ ಪ್ರಾತಿನಿಧ್ಯವನ್ನು ಖಾತರಿಪಡಿಸುವುದಿಲ್ಲ ಅಥವಾ ನೀಡುವುದಿಲ್ಲ. ಯಾವುದೇ ಕಂಪನಿ/ಮೂರನೇ ವ್ಯಕ್ತಿ ಅದರ ಏಜೆಂಟ್ ಅಥವಾ ಪ್ರತಿನಿಧಿಗಳು ಸೂಚಿಸಲ್ಪಟ್ಟ ಕೊಡುಗೆಳು/ಉತ್ಪನ್ನಗಳು/ಸೇವೆಗಳಿಗೆ ಸಲ್ಲಿಸಲ್ಪಟ್ಟ ಸೇವೆಗಳು/ಮಾರಾಟ/ಗುಣಮಟ್ಟ/ಲಕ್ಷಣಗಳಲ್ಲಿನ ಯಾವುದೇ ಕೊರತೆ ಅಥವಾ ಅಸಮರ್ಪಕತೆಗೆ ಆರ್‌ಬಿಎಲ್ ಬ್ಯಾಂಕ್ ಯಾವುದೇ ರೀತಿಯಲ್ಲಿ ಜವಾಬ್ದಾರ ಅಥವಾ ಹೊಣೆಯಾಗಿರುವುದಿಲ್ಲ. ಕೊಡುಗೆಯ ಖಾತೆಯಲ್ಲಿ ಆತನು/ಆಕೆಯು ಅನುಭವಿಸಬಹುದಾದ ಯಾವುದೇ ಕ್ರಮಗಳು, ಹಕ್ಕುಕೋರಿಕೆಗಳು, ಬೇಡಿಕೆಗಳು, ನಷ್ಟಗಳು, ಹಾನಿಗಳು, ವೆಚ್ಚಗಳು, ಶುಲ್ಕಗಳು ಮತ್ತು ಖರ್ಚುಗಳಿಗೆ ಆರ್‌ಬಿಎಲ್ ಬ್ಯಾಂಕ್ ಅನ್ನು ಜವಾಬ್ದಾರ ಅಥವಾ ಹೊಣೆಗಾರನನ್ನಾಗಿ ಮಾಡದಿರಲು ಗ್ರಾಹಕರು ಈ ಮೂಲಕ ಒಪ್ಪುತ್ತಾರೆ. ಮೂರನೇ ವ್ಯಕ್ತಿಯ ವೆಬ್‌ಸೈಟ್‌ನ ವೈಫಲ್ಯ ಅಥವಾ ಅಡಚಣೆಯ ಸಂದರ್ಭದಲ್ಲಿ, ಅಥವಾ ನಿಮ್ಮ ಬಳಕೆಗೆ, ಬಳಕೆಯ ಅಶಕ್ತತೆಗೆ ಅಥವಾ ಮೂರನೇ ವ್ಯಕ್ತಿಯ ವೆಬ್‌ಸೈಟ್ ಬಳಕೆಗೆ ಸಂಬಂಧಿಸಿದ ಯಾವುದೇ ಕಾರಣದಿಂದ ನೀವು ಅನುಭವಿಸಬೇಕಾದ ಯಾವುದೇ ನಷ್ಟ, ಹಾನಿ, ವೆಚ್ಚ ಇತ್ಯಾದಿಗಳಿಗೆ ಆರ್‌ಬಿಎಲ್ ಬ್ಯಾಂಕ್ ಹೊಣೆಯಾಗಿರುವುದಿಲ್ಲ. ಯಾವುದೇ ಪ್ರಶ್ನೆಗಳು, ದೂರುಗಳು, ಸಮಸ್ಯೆಗಳು ಮತ್ತು/ಅಥವಾ ಪ್ರತಿಕ್ರಿಯೆಗಳ ಕುರಿತಂತೆ ನೇರವಾಗಿ ಮೂರನೇ ವ್ಯಕ್ತಿಗಳೊಂದಿಗೆ ಮಾತ್ರ ವ್ಯವಹರಿಸಲಾಗುತ್ತದೆ. ಕೊಡುಗೆಗಳು/ಉತ್ಪನ್ನಗಳು/ಸೇವೆಗಳು ಇತರ ಪ್ಲಾಟ್‌ಫಾರ್ಮ್‌ನಲ್ಲಿಯೂ ಲಭ್ಯವಿರಬಹುದು.ಅಂತಹ ಕೊಡುಗೆಗಳು/ಉತ್ಪನ್ನಗಳು/ಸೇವೆಗಳಲ್ಲಿ ಗ್ರಾಹಕರ ಭಾಗವಹಿಸುವಿಕೆಯು ಸಂಪೂರ್ಣವಾಗಿ ಸ್ವಯಂಪ್ರೇರಿತವಾಗಿರುತ್ತದೆ.

## ಬಹು ಖಾತೆಗಳು

ಕಾರ್ಡ್‌ದಾರರು ಆರ್‌ಬಿಎಲ್ ಬ್ಯಾಂಕ್‌ನಲ್ಲಿ ಬಹು ಖಾತೆಗಳನ್ನು ಹೊಂದಿದ್ದಲ್ಲಿ, ಆರ್‌ಬಿಎಲ್ ಬ್ಯಾಂಕ್ ಖಾತೆಗಳ ಸಂಖ್ಯೆಯನ್ನು ನಿರ್ಧರಿಸುತ್ತದೆ, ಅವುಗಳ ಮೇಲೆ ಕಾರ್ಡ್ ಸೌಲಭ್ಯವಿರುತ್ತದೆ ಎಂಬುದನ್ನು ಕಾರ್ಡ್‌ದಾರರು ಒಪ್ಪುತ್ತಾರೆ. ಒಂದು ವೇಳೆ ಕಾರ್ಡ್ ಬಹು ಖಾತೆಗೆ ಲಿಂಕ್ ಆಗಿದ್ದಲ್ಲಿ, ಹಂಚಿದ ನೆಟ್ವರ್ಕ್ ಎಟಿಎಂಗಳಲ್ಲಿ ಮಾಡಿದ ಎಲ್ಲಾ ವಹಿವಾಟುಗಳು ಮತ್ತು ಕಾರ್ಡ್‌ನೊಂದಿಗೆ ಮಾಡಲಾದ ಪಿಒಎಸ್ ಟರ್ಮಿನಲ್ ವಹಿವಾಟುಗಳು ಕೇವಲ ಪ್ರಾಥಮಿಕ ಖಾತೆಯ ಮೇಲೆ ಮಾತ್ರ ಪರಿಣಾಮ ಬೀರುತ್ತದೆ. ಒಂದು ವೇಳೆ ಆರ್‌ಬಿಎಲ್ ಬ್ಯಾಂಕ್‌ನ ಎಟಿಎಂ ಆಗಿದ್ದಲ್ಲಿ, ಗ್ರಾಹಕರಿಗೆ ಹಣವನ್ನು ಡೆಬಿಟ್

ಮಾಡಬೇಕಾದ ಖಾತೆಯನ್ನು ಆಯ್ಕೆ ಮಾಡುವ ಅವಕಾಶವಿರುತ್ತದೆ. ಆರ್‌ಬಿಎಲ್ ಬ್ಯಾಂಕ್ ಎಲ್ಲಾ ಸರಕುಗಳು ಅಥವಾ ಸೇವೆಗಳ ಎಲ್ಲಾ ಖರೀದಿಗಳ, ನಗದು, ಶುಲ್ಕಗಳು, ವೆಚ್ಚಗಳು ಮತ್ತು ಕಾರ್ಡ್ ಬಳಕೆಯಿಂದ ಪಾವತಿಸಬೇಕಾದ ಪಾವತಿಗಳ ಮೌಲ್ಯಕ್ಕೆ ಕಾರ್ಡ್‌ಗೆ ಲಿಂಕ್ ಮಾಡಲಾದ ಖಾತೆಗಳನ್ನು ಡೆಬಿಟ್ ಮಾಡುತ್ತದೆ. ಎಲ್ಲಾ ವಹಿವಾಟುಗಳು ಕಾರ್ಡ್‌ಗೆ ಲಿಂಕ್ ಆದ ಖಾತೆಯ(ಗಳ) ಲೆಕ್ಕ ವಿವರಣೆಯಲ್ಲಿ ಕಾಣಿಸುತ್ತವೆ.

## ವಿವರಣೆಗಳು ಮತ್ತು ದಾಖಲೆಗಳು:

ಕಾರ್ಡ್‌ದಾರರು ಆರ್‌ಬಿಎಲ್ ಬ್ಯಾಂಕ್‌ನ ಗ್ರಾಹಕ ಕಾಳಜಿ ಕೇಂದ್ರಕ್ಕೆ ಕರೆ ಮಾಡುವ ಮೂಲಕ ತನ್ನ ವಹಿವಾಟುಗಳ ಮೌಖಿಕ ಅಥವಾ ಲಿಖಿತ ಇತಿಹಾಸವನ್ನು ಪಡೆಯಬಹುದು.ಕಾರ್ಡ್‌ದಾರರು ಆರ್‌ಬಿಎಲ್ ಬ್ಯಾಂಕ್‌ನ ಇಂಟರ್ನೆಟ್ ಬ್ಯಾಂಕಿಂಗ್‌ನಲ್ಲಿ ಆನ್‌ಲೈನ್‌ನಲ್ಲಿ ಲಭ್ಯವಿರುವ ಖಾತೆ ವಿವರಣೆಯಿಂದ ಮತ್ತು ಆರ್‌ಬಿಎಲ್ ಬ್ಯಾಂಕ್ ಎಟಿಎಂನ ಕೊನೆಯ ಹತ್ತು ವಹಿವಾಟುಗಳ ಮೂಲಕ ವಹಿವಾಟು ದಾಖಲೆಗಳನ್ನು ಪರಿಶೀಲಿಸಬಹುದು. ಕಾರ್ಡ್‌ದಾರರಿಗೆ ಲಭ್ಯವಾಗುವಂತೆ ಮಾಡಿದ ಯಾವುದೇ ಲೆಕ್ಕ ವಿವರಣೆಯ ಖಾತೆಯ ವಹಿವಾಟುಗಳಲ್ಲಿ/ವಿವರಗಳಲ್ಲಿ ಯಾವುದೇ ಅಕ್ರಮಗಳು ಅಥವಾ ವ್ಯತ್ಯಾಸಗಳು ಇದ್ದಲ್ಲಿ, ಕಾರ್ಡ್‌ದಾರರು ಆರ್‌ಬಿಎಲ್ ಬ್ಯಾಂಕ್‌ಗೆ 15 ದಿನಗಳೊಳಗೆ ಲಿಖಿತ ರೂಪದಲ್ಲಿ ತಿಳಿಸುತ್ತಾರೆ.ಒಂದು ವೇಳೆ ಆರ್‌ಬಿಎಲ್ ಬ್ಯಾಂಕ್ 15 ದಿನಗಳೊಳಗೆ ವ್ಯತಿರಿಕ್ತವಾಗಿ ಯಾವುದೇ ಮಾಹಿತಿಯನ್ನು ಪಡೆಯದೇ ಇದ್ದಲ್ಲಿ, ಖಾತೆ ವಿವರಣೆ ಮತ್ತು ವಹಿವಾಟುಗಳು ಸರಿಯಿದೆ ಎಂದು ಭಾವಿಸಬಹುದು. ಕಾರ್ಡ್‌ದಾರರ ಹಿತಾಸಕ್ತಿಯನ್ನು ಖಚಿತಪಡಿಸಲು, ಎಟಿಎಂ ವಹಿವಾಟುಗಳಿಗೆ, ತನ್ನ ಎಟಿಎಂನಲ್ಲಿ ಕಾರ್ಡ್ ಸೌಲಭ್ಯಗಳನ್ನು ಬಳಕೆಯನ್ನು ಪಡೆಯುವಾಗ ಯಾವುದೇ ವ್ಯಕ್ತಿಯ ಪ್ರವೇಶ ಮತ್ತು ಉಪಸ್ಥಿತಿಯನ್ನು ಆರ್‌ಬಿಎಲ್ ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ ಕ್ಯಾಮರಾ ಅಥವಾ ವೀಡಿಯೋ ಟೇಪ್‌ನಲ್ಲಿ ರೆಕಾರ್ಡ್ ಮಾಡಬಹುದು.ಆರ್‌ಬಿಎಲ್ ಬ್ಯಾಂಕ್‌ನಿಂದ ನಿರ್ವಹಿಸಲ್ಪಡುವ ಎಲ್ಲಾ ದಾಖಲೆಗಳು ಕಾರ್ಡ್‌ದಾರರ ಸೂಚನೆಗಳ ಎಲೆಕ್ಟ್ರಾನಿಕ್ ಅಥವಾ ಸಾಕ್ಷ್ಯಚಿತ್ರ ರೂಪದಲ್ಲಿರುತ್ತವೆ ಮತ್ತು ನಿಬಂಧನೆಗಳಿಗೆ ಅನುಸಾರವಾಗಿ ಇತರ ವಿವರಗಳು(ಮಾಡಲಾದ ಮತ್ತು ಸ್ವೀಕರಿಸಿದ ಪಾವತಿಗಳನ್ನು ಒಳಗೊಂಡ ಆದರೆ ಸೀಮಿತವಾಗಿರದ) ಮತ್ತು ಮೇಲೆ ತಿಳಿಸಿದಂತೆ ಮಾಡಲಾದ ಎಲ್ಲಾ ಕ್ಯಾಮರಾ/ವೀಡಿಯೋ ರೆಕಾರ್ಡಿಂಗ್‌ಗಳನ್ನು ಕಾರ್ಡ್‌ದಾರರ ವಿರುದ್ಧವಾಗಿ ಅಂತಹ ಸೂಚನೆಗಳು ಮತ್ತು ಅಂತಹ ಇತರ ವಿವರಗಳಿಗೆ ನಿರ್ಣಾಯಕ ಪುರಾವೆಯಾಗಿ ಭಾವಿಸಲಾಗುತ್ತದೆ.

## ಎಟಿಎಂ ಬಳಕೆ

ಕಾರ್ಡ್ ಅನ್ನು ಎಟಿಎಂ ಸ್ಥಳಗಳಲ್ಲಿ ಗೋಪ್ಯ ಪಿನ್ ಸಹಾಯದಿಂದ ಬಳಸಬಹುದು. ಪಿನ್ ಬಳಸಿ ನಡೆಸಲಾಗುವ ಎಲ್ಲಾ ವಹಿವಾಟುಗಳು ಕಾರ್ಡ್‌ದಾರರ ಜವಾಬ್ದಾರಿಯಾಗಿರುತ್ತದೆ. ಖಾತೆಯಲ್ಲಿನ(ಗಳಲ್ಲಿನ) ಕ್ರೆಡಿಟ್ ಬ್ಯಾಲೆನ್ಸ್ ಅನ್ನು ಪರಿಗಣಿಸದೆ ಆರ್‌ಬಿಎಲ್ ಬ್ಯಾಂಕ್ ನಿರ್ಧರಿಸಿದಂತೆ ದಿನಕ್ಕೆ ಪ್ರತಿ ವಹಿವಾಟಿಗೆ ನಿರ್ದಿಷ್ಟ ಮೊತ್ತದ ಹಣವನ್ನು ಮಾತ್ರ ಹಿಂಪಡೆಯಲು ಅನುಮತಿಸಲಾಗುವುದು ಎಂಬುದನ್ನು ಕಾರ್ಡ್‌ದಾರರು ಒಪ್ಪುತ್ತಾರೆ. ಈ ಮೊತ್ತವನ್ನು ಆರ್‌ಬಿಎಲ್ ಬ್ಯಾಂಕ್ ವೆಬ್‌ಸೈಟ್‌ನಲ್ಲಿ ಕಾಲಕಾಲಕ್ಕೆ ಪ್ರಕಟಿಸಲಾಗುತ್ತದೆ.ಈ ಮಿತಿಯನ್ನು ಉಲ್ಲಂಘಿಸುವ ಯಾವುದೇ ಪ್ರಯತ್ನವು ಅವರ ಕಾರ್ಡ್ ಸೌಲಭ್ಯವನ್ನು ಹಿಂಪಡೆಯಲು ಕಾರಣವಾಗಬಹುದು.

ಕಾರ್ಡ್‌ದಾರರು ಎಟಿಎಂ ಮೂಲಕ ವಹಿವಾಟನ್ನು ಪೂರ್ಣಗೊಳಿಸಿದಾಗ, ಅವರು ಮುದ್ರಿತ ವಹಿವಾಟು ದಾಖಲೆಯನ್ನು ಅಂದರೆ ವಹಿವಾಟು ಸ್ಲಿಪ್/ಎಟಿಎಂ ರಸೀದಿ ಪಡೆಯಲು ಆಯ್ಕೆ ಮಾಡಬಹುದು. ಲಭ್ಯವಿರುವ ಹಣದ ಮೊತ್ತವನ್ನು ಈ ಕಾರ್ಡ್‌ದಾರರು ಕಾರ್ಡ್ ಬಳಸಿದಾಗ ಈ ಎಟಿಎಂ ರಸೀದಿಯಲ್ಲಿ ತೋರಿಸಲಾಗುತ್ತದೆ.ಎಟಿಎಂನಲ್ಲಿ ನಡೆಸಲಾದ ವಹಿವಾಟಿನ ದಾಖಲೆಯನ್ನು ಇರಿಸಿಕೊಳ್ಳುವಂತೆ ಕಾರ್ಡ್‌ದಾರರಿಗೆ ಸಲಹೆ ನೀಡಲಾಗುತ್ತದೆ. ಖಾತೆಯಲ್ಲಿನ ಸಾಕಷ್ಟು ಹಣವಿಲ್ಲದಿದ್ದಾಗ ಕಾರ್ಡ್ ಬಳಸಿ ಹಣ ಪಡೆಯುವ ಪ್ರಯತ್ನವನ್ನು ಮಾಡಬಾರದು ಎಂಬುದನ್ನು ಕಾರ್ಡ್‌ದಾರರು ಒಪ್ಪುತ್ತಾರೆ.ಸಾಕಷ್ಟು ಖಾತೆ ಉಳಿಕೆಯನ್ನು ಖಾತ್ರಿಪಡಿಸಿಕೊಳ್ಳುವ ಜವಾಬ್ದಾರಿ ಸಂಪೂರ್ಣವಾಗಿ ಕಾರ್ಡ್‌ದಾರರ ಮೇಲಿರುತ್ತದೆ.

ಆರ್‌ಬಿಎಲ್ ಅಲ್ಲದ ಬ್ಯಾಂಕ್ ಎಟಿಎಂ ವಹಿವಾಟಿನ ಗರಿಷ್ಠ ಸಂಖ್ಯೆಯ 50 ವಹಿವಾಟುಗಳಿಗೆ ಅನುಮತಿ ನೀಡಬಹುದು, ನಂತರ ಆರ್‌ಬಿಲ್ ಅಲ್ಲದ ಬ್ಯಾಂಕ್ ಎಟಿಎಂಗೆ ಕಾರ್ಡ್ ಅನ್ನು ನಿರ್ಬಂಧಿಸಲಾಗುತ್ತದೆ ಮತ್ತು ಈ ಸೀಮಿತ ಬಳಕೆಯನ್ನು ನಂತರದ ತಿಂಗಳಲ್ಲಿ ಮತ್ತೆ ತುಂಬಲಾಗುತ್ತದೆ. ಗ್ರಾಹಕರು ಆರ್‌ಬಿಎಲ್ ಬ್ಯಾಂಕ್ ಎಟಿಎಂ ಮತ್ತು ಆನ್‌ಲೈನ್‌ಗೆ, ಪಿಒಎಸ್ ಮತ್ತು ಸಂಪರ್ಕರಹಿತ ವಹಿವಾಟುಗಳಿಗೆ ಕಾರ್ಡ್ ಬಳಸುವುದನ್ನು ಮುಂದುವರಿಸಬಹುದು. ಹೆಚ್ಚಿನ ಸಹಾಯಕ್ಕಾಗಿ ಗ್ರಾಹಕರು ಸಮೀಪದ ಶಾಖೆಗೆ ಭೇಟಿ ನೀಡಬಹುದು ಅಥವಾ 022 61156300 ಸಂಖ್ಯೆಗೆ ಕರೆ ಮಾಡಬಹುದು.

ಆರ್‌ಬಿಎಲ್ ಬ್ಯಾಂಕ್ ತನ್ನ ಆಂತರಿಕ ನೀತಿಗಳು ಮತ್ತು ಕಾಲಕಾಲಕ್ಕೆ ನೀಡಲಾದ ನಿಯಂತ್ರಕ ಮಾರ್ಗಸೂಚಿಗಳ ಆಧಾರದ ಮೇಲೆ ಕಾಲಕಾಲಕ್ಕೆ ಆರ್‌ಬಿಎಲ್ ಬ್ಯಾಂಕ್ ಅಲ್ಲದ ಎಟಿಎಂ ವಹಿವಾಟಿನಲ್ಲಿ ಅನುಮತಿಸಲಾದ ವಹಿವಾಟುಗಳ ಸಂಖ್ಯೆಯನ್ನು ಪರಿಷ್ಕರಿಸುವ, ತಿದ್ದುಪಡಿ ಮಾಡುವ, ಮಾರ್ಪಡುವ ಮಾಡುವ ಹಕ್ಕನ್ನು ಕಾಯ್ದಿರಿಸುತ್ತದೆ.

ಒಂದುವೇಳೆ ಯಾವುದೇ ಅನುಮಾನಾಸ್ಪದ ಅಥವಾ ವಂಚನೆಯ ಚಟುವಟಿಕೆ ಪತ್ತೆಯಾದಲ್ಲಿ, ಈ ನಿಬಂಧನೆಗಳು ಮತ್ತು ಶರತ್ತುಗಳಲ್ಲಿ ಯಾವುದೇ ಒಳಗೊಂಡಿದ್ದರೂ, ಆರ್‌ಬಿಎಲ್ ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ ಬಳಕೆಯನ್ನು ಅಮಾನತುಗೊಳಿಸುತ್ತದೆ ಅಥವಾ ನಿರ್ಬಂಧಿಸುತ್ತದೆ ಅಂತಹ ವಹಿವಾಟುಗಳನ್ನು ಮತ್ತು ಅಂತಹ ಗ್ರಾಹಕರು/ಕಾರ್ಡ್‌ದಾರರ ಕಾರ್ಡ್ ಬಳಕೆಯನ್ನು ನಿರ್ಬಂಧಿಸುತ್ತದೆ.

## ವ್ಯಾಪಾರಿ ಸ್ಥಳ ಬಳಕೆ:

ವೀಸಾ/ಮಾಸ್ಟರ್‌ಕಾರ್ಡ್ ಮತ್ತು/ಅಥವಾ ಆರ್‌ಬಿಎಲ್ ಬ್ಯಾಂಕ್‌ನಿಂದ ಗುರುತಿಸಲ್ಪಟ್ಟ ಮತ್ತು ಪಿಒಎಸ್ ಟರ್ಮಿನಲ್ ಹೊಂದಿರುವ ಇತರ ಸಂಸ್ಥೆಗಳ ಲೋಗೋಗಳನ್ನು ಪ್ರದರ್ಶಿಸುವ ಕಾರ್ಡ್ ಅನ್ನು ಭಾರತದಲ್ಲಿ ದೇಶೀಯ ವಹಿವಾಟುಗಳಿಗೆ ಮತ್ತು ವಿದೇಶದಲ್ಲಿ ಅಂತಾರಾಷ್ಟ್ರೀಯ ವಹಿವಾಟುಗಳಿಗೆ(ಅಂತಾರಾಷ್ಟ್ರೀಯ ಕಾರ್ಡ್ ಆಗಿದ್ದಲ್ಲಿ) ಎಲ್ಲಾ ವ್ಯಾಪಾರ ಸಂಸ್ಥೆಗಳಲ್ಲಿ ಸ್ವೀಕಾರಾರ್ಹವಾಗಿರುತ್ತದೆ.ಕಾರ್ಡ್ ಎಲೆಕ್ಟ್ರಾನಿಕ್ ಬಳಕೆಗೆ ಪಿಒಎಸ್ ಟರ್ಮಿನಲ್‌ನಿಂದ ವಿದ್ಯುನ್ಮಾನವಾಗಿ ಮುದ್ರಿತವಾದ ಶುಲ್ಕ ಸ್ಲಿಪ್/ಮಾರಾಟ ಸ್ಲಿಪ್ ಸಂದರ್ಭದಲ್ಲಿ ಮಾತ್ರವೇ ಇರುತ್ತದೆ. ಕಾರ್ಡ್‌ದಾರರು ವ್ಯಾಪಾರಿ ಸಂಸ್ಥೆಯಲ್ಲಿ ಕಾರ್ಡ್ ಅನ್ನು ಬಳಸಿದಾಗಲೆಲ್ಲ ಮಾರಾಟ ಸ್ಲಿಪ್‌ನಲ್ಲಿ(ಪಿನ್ ಆಧಾರಿತ ವಹಿವಾಟು ಅಲ್ಲದಿದ್ದಲ್ಲಿ) ಸಹಿ ಹಾಕಬೇಕು ಮತ್ತು ಪ್ರತಿಯನ್ನು ತಮ್ಮಲ್ಲಿ ಇರಿಸಿಕೊಳ್ಳಬೇಕು. ಹೆಚ್ಚುವರಿ ಶುಲ್ಕದಲ್ಲಿ ಬ್ಯಾಂಕ್ ಮಾರಾಟ ಸ್ಲಿಪ್‌ನ ಪ್ರತಿಗಳನ್ನು ನೀಡಬಹುದು. ಮಾರಾಟ ಸ್ಲಿಪ್‌ನಲ್ಲಿ ಕಾರ್ಡ್‌ದಾರರ ವೈಯಕ್ತಿಕ ಸಹಿ ಇರದೇ ಇದ್ದಲ್ಲಿ , ಆದರೆ ಕಾರ್ಡ್‌ದಾರರಿಂದ ಅಧಿಕೃತವಾಗಿದೆ ಎಂದು ಸಾಬೀತಾದರೆ ಅದು ಅವರ ಹೊಣೆಯಾಗಿರುತ್ತದೆ. ಕಾರ್ಡ್‌ದಾರರ ಸಹಿ ಅಥವಾ ಪಿಒಎಸ್ ಟರ್ಮಿನಲ್‌ನಲ್ಲಿನ ಕಾರ್ಯನಿರ್ವಹಣೆಯನ್ನು ಅವಲಂಬಿಸಿ ವ್ಯಾಪಾರಿ ಸ್ಥಳದಲ್ಲಿ ಅಳವಡಿಸಲಾದ ಪಿಒಎಸ್ ಟರ್ಮಿನಲ್‌ಗಳಲ್ಲಿ ಪಿನ್

ಸಹಾಯದಿಂದ ಕಾರ್ಡ್ ಕಾರ್ಯನಿರ್ವಹಿಸುತ್ತದೆ. ಸರಕು ಮತ್ತು ಸೇವೆಗಳ ಪೂರೈಕೆಯನ್ನು ಒಳಗೊಂಡಂತೆ ಆದರೆ ಸೀಮಿತವಾಗಿರದೆ ವ್ಯಾಪಾರಿಗಳೊಂದಿಗೆ ಕಾರ್ಡ್‌ದಾರರು ಹೊಂದಿರುವ ಯಾವುದೇ ವ್ಯವಹಾರಗಳಿಗೆ ಬ್ಯಾಂಕ್ ಹೊಣೆಯನ್ನು ಒಪ್ಪುವುದಿಲ್ಲ. ಒಂದು ವೇಳೆ ವ್ಯಾಪಾರ ಸಂಸ್ಥೆಗೆ ಸಂಬಂಧಿಸಿದಂತೆ ಕಾರ್ಡ್‌ದಾರರಿಗೆ ಯಾವುದೇ ದೂರುಗಳು ಇದ್ದಲ್ಲಿ, ಕಾರ್ಡ್‌ದಾರರು ವ್ಯಾಪಾರಿ ಸಂಸ್ಥೆಯೊಂದಿಗೆ ಸಮಸ್ಯೆಯನ್ನು ಪರಿಹರಿಸಿಕೊಳ್ಳಬೇಕು ಮತ್ತು ಆ ರೀತಿ ಮಾಡಲು ವಿಫಲವಾದಲ್ಲಿ ಅವರನ್ನು ಆರ್‌ಬಿಎಲ್ ಬ್ಯಾಂಕ್‌ನ ಯಾವುದೇ ಬಾಧ್ಯತೆಗಳಿಂದ ಮುಕ್ತಗೊಳಿಸುವುದಿಲ್ಲ. ಆದರೂ, ಕಾರ್ಡ್‌ದಾರರು ಈ ದೂರನ್ನು ಆರ್‌ಬಿಎಲ್ ಬ್ಯಾಂಕ್‌ಗೆ ತಕ್ಷಣದಲ್ಲೇ ಸೂಚಿಸಬೇಕು. ಆರ್‌ಬಿಎಲ್ ಬ್ಯಾಂಕ್ ಯಾವುದೇ ವ್ಯಾಪಾರಿ ಸಂಸ್ಥೆಯಿಂದ ವಿಧಿಸಲಾದ ಯಾವುದೇ ಹೆಚ್ಚುವರಿ ಶುಲ್ಕಕ್ಕೆ ಯಾವುದೇ ಜವಾಬ್ದಾರಿಯನ್ನು ಸ್ವೀಕರಿಸುವುದಿಲ್ಲ ಮತ್ತು ವಹಿವಾಟಿನ ಮೊತ್ತದೊಂದಿಗೆ ಕಾರ್ಡ್‌ಗೆ ಲಿಂಕ್ ಮಾಡಲಾದ ಖಾತೆಗೆ ಡೆಬಿಟ್ ಆಗುತ್ತದೆ. ಪಾವತಿಗಾಗಿ ಆರ್‌ಬಿಎಲ್ ಬ್ಯಾಂಕ್‌ನಿಂದ ವ್ಯಾಪಾರಿ ಸಂಸ್ಥೆಯಿಂದ ಪಡೆದ ಯಾವುದೇ ಶುಲ್ಕಅಥವಾ ಇತರ ಪಾವತಿ ಮನವಿಯನ್ನು ವ್ಯಾಪಾರಿ ಸಂಸ್ಥೆಯಲ್ಲಿ ಮೊತ್ತಕ್ಕೆ ಮತ್ತು ಆ ಶುಲ್ಕವನ್ನು ಸರಿಯಾಗಿ ಭರಿಸಿದ್ದಾರೆ ಎಂಬುದಕ್ಕೆ ಸಾಕ್ಷಿಯಾಗಿರುತ್ತದೆ, ಕಾರ್ಡ್ ಕಳೆದುಹೋಗಿದ್ದರೆ, ಕದ್ದಿದ್ದರೆ ಅಥವಾ ವಂಚನೆಗೆ ದುರ್ಬಳಕೆ ಮಾಡಿರುವುದನ್ನು ಹೊರತುಪಡಿಸಿ, ಸಾಕ್ಷಿಯ ಹೊರೆಯು ಕಾರ್ಡ್‌ದಾರರ ಮೇಲಿರುತ್ತದೆ. ಒಂದು ವೇಳೆ ಕಾರ್ಡ್‌ದಾರರು ದೋಷದಿಂದಾಗಿ ಅಥವಾ ವ್ಯಾಪಾರ ವಾಪಾಸಾತಿ ಕಾರಣದಿಂದಾಗಿ ಪೂರ್ಣಗೊಂಡ ವಹಿವಾಟನ್ನು ರದ್ದುಪಡಿಸಲು ಬಯಸಿದ್ದಲ್ಲಿ, ವ್ಯಾಪಾರಿ ಈ ಹಿಂದಿನ ಮಾರಾಟ ಸ್ಲಿಪ್ ಅನ್ನು ರದ್ದುಪಡಿಸಬೇಕು ಮತ್ತು ಕಾರ್ಡ್‌ದಾರರು ರದ್ದಾದ ಮಾರಾಟ ಸ್ಲಿಪ್ ಪ್ರತಿಯನ್ನು ತನ್ನೊಂದಿಗೆ ಇರಿಸಿಕೊಳ್ಳಬೇಕು., ಅಂತಹ ವಹಿವಾಟುಗಳಿಂದಾಗಿ ಡೆಬಿಟ್‌ಗಳ ವಾಪಾಸಾತಿ/ರೀಫಂಡ್ ಉಂಟಾದ ಸಂದರ್ಭದಲ್ಲಿ ಅಗತ್ಯವಿದ್ದಲ್ಲಿ ರ್ಡ್‌ದಾರರು ಶುಲ್ಕ ಸ್ಲಿಪ್/ಮಾರಾಟ ಸ್ಲಿಪ್ ಅನ್ನು ಸಲ್ಲಿಸಬೇಕಾಗುತ್ತದೆ.

## ಅಂತಾರಾಷ್ಟ್ರೀಯ ಬಳಕೆ

a) ಕಾರ್ಡ್ ನೇಪಾಳ ಮತ್ತು ಭೂತಾನ್‌ನಲ್ಲಿ ವಿದೇಶಿ ಕರೆನ್ಸಿ ವಹಿವಾಟುಗಳಿಗೆ ಮಾನ್ಯವಾಗುವುದಿಲ್ಲ ಅಂದರೆ ಸ್ಥಳೀಯ ಕರೆನ್ಸಿ ಅಥವಾ ಭಾರತೀಯ ರೂಪಾಯಿಯಲ್ಲದ ಯಾವುದೇ ಕರೆನ್ಸಿ.

b) ಭಾರತದ ಹೊರಗೆ ಇರುವ ಉದ್ಯಮಿಗಳಿಗಾಗಿ ಆರಂಭಿಸಲಾದ ವಹಿವಾಟು ಆ ದೇಶಗಳಲ್ಲಿ ಅನುಸರಿಸಲಾದ ಮಾರ್ಗಸೂಚಿಗಳನ್ನು ಅವಲಂಬಿಸಿ ಪಿನ್ / ಹೆಚ್ಚುವರಿ ದೃಢೀಕರಣವಿಲ್ಲದೆ ಪ್ರಕ್ರಿಯೆಗೊಳಿಸಬಹುದು.

c) ಅಂತಾರಾಷ್ಟ್ರೀಯ ವಹಿವಾಟುಗಳಿಗಾಗಿ, ಕಾರ್ಡ್‌ದಾರರು ಕಟ್ಟುನಿಟ್ಟಾಗಿ ಭಾರತೀಯ ರಿಸರ್ವ್ ಬ್ಯಾಂಕ್‌ನ ವಿನಿಮಯ ನಿಯಂತ್ರಣ ನಿಯಮಾವಳಿಗೆ ಅನುಗುಣವಾಗಿ ಕಾರ್ಡ್ ಅನ್ನು ಬಳಸಬೇಕು. ಇದನ್ನು ಅನುಸರಿಸಲು ವಿಫಲವಾದಲ್ಲಿ, ಕಾರ್ಡ್‌ದಾರರು ವಿದೇಶಿ ವಿನಿಮಯ ನಿರ್ವಹಣೆ ಕಾಯಿದೆ ೧೯೯೯ರ ಅಡಿಯಲ್ಲಿ ಕ್ರಮಕ್ಕೆ ಹೊಣೆಗಾರರಾಗುತ್ತಾರೆ ಮತ್ತು ಬ್ಯಾಂಕ್ ಅಥವಾ ಆರ್‌ಬಿಐ ವಿನಂತಿಯ ಮೇರೆಗೆ ಬ್ಯಾಂಕ್‌ನಿಂದ ಕಾರ್ಡ್ ಇರಿಸಿಕೊಳ್ಳುವುದನ್ನು ನಿಷೇಧಿಸಬಹುದು. ಕಾರ್ಡ್‌ದಾರರು ಆರ್‌ಬಿಐನ ವಿನಿಮಯ ನಿರ್ವಹಣೆ ಕಾಯಿದೆಯನ್ನು ಅನುಸರಿಸದೇ ಇರುವುದರಿಂದ ಉಂಟಾಗುವ ಯಾವುದೇ/ಎಲ್ಲಾ ಪರಿಣಾಮಗಳಿಂದ ಅಥವಾ ವಿರುದ್ಧ ಬ್ಯಾಂಕ್‌ಗೆ ತೊಂದರೆಯಾಗದಂತೆ ಇರಿಸಬೇಕು ಮತ್ತು ರಕ್ಷಿಸಬೇಕು.

d) ಬ್ಯಾಂಕ್ ಯಾವುದೇ ಹೊಣೆಗಾರಿಕೆಗೆ ಒಳಪಡುವುದಿಲ್ಲ ಮತ್ತು ಕಾಲಕಾಲಕ್ಕೆ ಪ್ರಕಟಿಸಲಾದ ಆರ್‌ಬಿಐನಿಂದ ಸೂಚಿಸಲ್ಪಟ್ಟ ವಿದೇಶಿನ ವಿನಿಮಯ ಅರ್ಹತೆಗಳನ್ನು ಮೀರಿದ ಕಾರಣಕ್ಕಾಗಿ ಕಾರ್ಡ್‌ದಾರರು ನೇರವಾಗಿ ಅಥವಾ

ಪರೋಕ್ಷವಾಗಿ ಉಂಟಾದ ಶುಲ್ಕದ ಇಳಿಕೆಯಿಂದ ಉಂಟಾಗುವ ನಷ್ಟ ಅಥವಾ ಹಾನಿಗೆ ಸಂಬಂಧಿಸಿದಂತೆ ಪರಿಹಾರವನ್ನು ಪಾವತಿಸಲಾಗುತ್ತದೆ ಎಂದು ಭಾವಿಸಲಾಗುತ್ತದೆ.

e) ವಿದೇಶ ಪ್ರವಾಸ ಸಮಯದಲ್ಲಿ ಪಡೆದ ಒಟ್ಟು ವಿನಿಮಯವು ಅರ್ಹತೆಯನ್ನು ಮೀರದೇ ಇದ್ದಲ್ಲಿ, ಕಾರ್ಡ್‌ದಾರರು ವಿಶ್ವಾಸಯೋಗ್ಯ ವೈಯಕ್ತಿಕ ವೆಚ್ಚಗಳಿಗೆ ವಿದೇಶಕ್ಕೆ ಹೋಗುವ ಮೂಲಕ ಕಾಲಕಾಲಕ್ಕೆ ಆರ್‌ಬಿಐ ನಿಗದಿಪಡಿಸಿದ ವಿದೇಶಿ ವಿನಿಮಯ ಅರ್ಹತೆಗಳ ಒಳಗೆ ಕಾರ್ಡ್ ಅನ್ನು ಬಳಸಬಹುದು. ವಿದೇಶದಲ್ಲಿ ಖರೀದಿಸಿದ ಸರಕುಗಳನ್ನು ಭಾರತಕ್ಕೆ ಆಮದು ಮಾಡುವಿಕೆಯನ್ನು ಬ್ಯಾಗೇಜ್ ನಿಯಮಗಳು/ಇಎಸ್‌ಐಎಂ ನೀತಿ ಅಥವಾ ಜಾರಿಯಲ್ಲಿರುವ ಇತರ ಯಾವುದೇ ನೀತಿಗಳು ನಿರ್ವಹಿಸುತ್ತವೆ.ವಿನಿಮಯದ ಅರ್ಹತೆಯನ್ನು ಬ್ಯಾಂಕ್‌ನ ಅಧಿಕೃತ ಡೀಲರ್ ಶಾಖೆಗಳಿಂದ ಪ್ರವಾಸಕ್ಕಿಂತ ಮೊದಲು ಖಚಿತಪಡಿಸಿಕೊಳ್ಳಬೇಕು. ಅಸ್ತಿತ್ವದ ನಿಯಮಗಳ ಅಡಿಯಲ್ಲಿ ವಿನಿಮಯದ ಬಿಡುಗಡೆಯನ್ನು ಅನುಮತಿಸದ ಹಣ ರವಾನೆಗಳನ್ನು ಮಾಡಲು ಕಾರ್ಡ್ ಅನ್ನು ಬಳಸಬಾರದು.

f) ಅನಿವಾಸಿ ಭಾರತೀಯರು ಅಂತಾರಾಷ್ಟ್ರೀಯವಾಗಿ ಮಾನ್ಯವಾದ ಡೆಬಿಟ್ ಕಾರ್ಡ್ ಅನ್ನು ಹೊಂದಬಹುದು, ಭಾರತ/ವಿದೇಶದಲ್ಲಿ ಅದರ ಬಳಕೆಯಿಂದ ಉಂಟಾಗುವ ಎಲ್ಲಾ ಬಾಕಿಗಳನ್ನು ಬ್ಯಾಂಕ್‌ನಲ್ಲಿ ಹೊಂದಿರುವ ಎನ್‌ಆರ್‌ಐ ಖಾತೆಯಿಂದ ಪೂರೈಸಬೇಕು ಇಲ್ಲವಾದಲ್ಲಿ ಅವರಿಗೆ ದೇಶೀಯ ಡೆಬಿಟ್ ಕಾರ್ಡ್ ಅನ್ನು ಮಾತ್ರ ನೀಡಲಾಗುತ್ತದೆ.

g) ವಿದೇಶಿ ಕರೆನ್ಸಿಯನ್ನು ಹಿಂಪಡೆಯುವ ಪ್ರತೀ ವಹಿವಾಟು ಬ್ಯಾಂಕ್ ನಿಗದಿಪಡಿಸಿದ ಸೇವಾ ಶುಲ್ಕವನ್ನು ಒಳಗೊಂಡಿರುತ್ತದೆ ಎಂಬುದನ್ನು ಕಾರ್ಡ್‌ದಾರರು ಒಪ್ಪುತ್ತಾರೆ. ಸೇವಾ ಶುಲ್ಕವನ್ನು ಯಾವುದೇ ಸೂಚನೆಯಿಲ್ಲದೆ ಬದಲಾಯಿಸಬಹುದು.

h) ಎಲ್ಲಾ ವಿದೇಶಿ ಕರೆನ್ಸಿ ವಹಿವಾಟುಗಳಿಗೆ ಬಳಸಲಾಗುವ ವಿನಿಮಯ ದರವನ್ನು ವೀಸಾ/ಮಾಸ್ಟರ್‌ಕಾರ್ಡ್/ರೂಪೇ ನಿರ್ಧರಿಸತ್ತದೆ ಮತ್ತು ಕಾರ್ಡ್‌ದಾರರ ಮೇಲೆ ಬದ್ಧವಾಗಿರುತ್ತದೆ.

i) ಡೆಬಿಟ್ ಕಾರ್ಡ್‌ನಲ್ಲಿನ ಅಂತಾರಾಷ್ಟ್ರೀಯ ಬಳಕೆಯು ಅಂತಹ ವಹಿವಾಟುಗಳಿಗೆ ಕಾಲಕಾಲಕ್ಕೆ ನೀಡಲಾದ ಅಸ್ತಿತ್ವದಲ್ಲಿರುವ ನಿಯಮಗಳ ಅನುಸರಣೆಗೆ ಒಳಪಟ್ಟಿರುತ್ತದೆ.

j) ಜೂನ್ 19,2018 ರ ಭಾರತೀಯ ರಿಸರ್ವ್ ಬ್ಯಾಂಕ್ ("ಆರ್‌ಬಿಐ") ಮಾಸ್ಟರ್ ನಿರ್ದೇಶನಗಳು / ಸುತ್ತೋಲೆ RBI/2017-18/204 ರ ಪ್ರಕಾರ ಉದಾರೀಕೃತ ರವಾನೆ ಯೋಜನೆ (LRS) ಅಡಿಯಲ್ಲಿ ನಿವಾಸಿ ವ್ಯಕ್ತಿಗಳು ರಿಮೆಟೆನ್ಸ್ ಮಾಡಲು ಶಾಶ್ವತ ಖಾತೆ ಸಂಖ್ಯೆ ("PAN") ಅನ್ನು ಒದಗಿಸುವುದು ಕಡ್ಡಾಯವಾಗಿದೆ. ಅದರಂತೆ, ಯೋಜನೆಯಡಿಯಲ್ಲಿ ಪ್ರತಿ ರವಾನೆ ವಹಿವಾಟಿಗೆ ನಿವಾಸಿ ವ್ಯಕ್ತಿಯು (ವಹಿವಾಟು ಮಾಡುವ ಪಕ್ಷ) PAN ವಿವರಗಳು ಕಡ್ಡಾಯವಾಗಿದೆ. ನಿಯಮಗಳಿಗೆ ಅನುಗುಣವಾಗಿ, ಖಾತೆ ತೆರೆಯುವ ಸಮಯದಲ್ಲಿ ಅಥವಾ ತರುವಾಯ ಗ್ರಾಹಕರು ಅವನ/ಅವಳ ಮಾನ್ಯವಾದ ಪ್ಯಾನ್ ವಿವರಗಳನ್ನು ನೀಡಲು ವಿಫಲವಾದರೆ, ಡೆಬಿಟ್ ಕಾರ್ಡ್‌ನಲ್ಲಿ ಅಂತರರಾಷ್ಟ್ರೀಯ ವಹಿವಾಟುಗಳ ಸೌಲಭ್ಯವನ್ನು ಬ್ಯಾಂಕ್ ಒದಗಿಸುವುದಿಲ್ಲ.

k) ಲಾಟರಿ ಟಿಕೆಟ್‌ಗಳು, ನಿರ್ಬಂದಿತ ಅಥವಾ ನಿಷೇಧಿತ ನಿಯತಕಾಲಿಕೆಗಳು, ಸ್ವೀಪ್‌ಸ್ಟೇಕ್‌ಗಳಲ್ಲಿ ಭಾಗವಹಿಸುವಿಕೆ, ಕಾಲ್‌ಬ್ಯಾಕ್ ಸೇವೆಗಳಿಗೆ ಪಾವತಿ, ಮತ್ತು/ಅಥವಾ ಯಾವುದೇ ವಿದೇಶಿ ವಿನಿಮಯವನ್ನು ಅನುಮತಿಸದಂತಹ ಐಟಂಗಳು/ಚಟುವಟಿಕೆಗಳಂತಹ ನಿಷೇಧಿತ ವಸ್ತುಗಳನ್ನು ಖರೀದಿಸಲು ಅಂತರರಾಷ್ಟ್ರೀಯ ಡೆಬಿಟ್ ಕಾರ್ಡ್‌ಗಳನ್ನು ಇಂಟರ್ನೆಟ್‌ನಲ್ಲಿ ಬಳಸಲಾಗುವುದಿಲ್ಲ.

l) ಹಣಕಾಸು ವರ್ಷದಲ್ಲಿ ಭಾರತದ ಎಲ್ಲಾ ಮೂಲಗಳಿಂದ (ಡೆಬಿಟ್ ಕಾರ್ಡ್‌ನಿಂದ ಸೇರಿದಂತೆ) ಖರೀದಿಸಿದ ಅಥವಾ ರವಾನೆಯಾಗುವ ವಿದೇಶಿ ವಿನಿಮಯದ ಒಟ್ಟು ಮೊತ್ತವು ಭಾರತೀಯ ರಿಸರ್ವ್ ಬ್ಯಾಂಕ್ ರೆಸಿಡೆಂಟ್ ವ್ಯಕ್ತಿಗಳಿಗೆ

ನಿಗದಿಪಡಿಸಿದ ಎಲ್ಆರ್ಎಸ್‌ನ ಒಟ್ಟಾರೆ ಮಿತಿಯಲ್ಲಿರುತ್ತದೆ. LRS ಅಡಿಯಲ್ಲಿ ಅನುಮತಿಸುವ ಮಿತಿಯನ್ನು ಮೀರಿ ಹಣ ರವಾನೆ ಮಾಡಿದರೆ, ಅಂತರರಾಷ್ಟ್ರೀಯ ವಹಿವಾಟುಗಳಿಗಾಗಿ ಕಾರ್ಡ್ ಅನ್ನು ನಿರ್ಬಂಧಿಸುವುದು, ಹೆಚ್ಚುವರಿ ಹಣವನ್ನು ಹಿಂದಿರುಗಿಸುವುದು ಇತ್ಯಾದಿಗಳನ್ನು ಒಳಗೊಂಡಿರುವ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು RBL ಬ್ಯಾಂಕ್ ಅಧಿಕಾರವನ್ನು ಹೊಂದಿದೆ.

m) ಎಲ್ಲಾ ಡೆಬಿಟ್ ಕಾರ್ಡ್‌ಗಳಿಗೆ ಅಂತರರಾಷ್ಟ್ರೀಯ ಎಟಿಎಂ ವಹಿವಾಟಿನ ಮೇಲೆ ವಿದೇಶಿ ಕರೆನ್ಸಿ ಮಾರ್ಕ್-ಅಪ್ ಶುಲ್ಕವನ್ನು (ಸರ್ಕಾರಿ ಸುಂಕಗಳನ್ನು ಒಳಗೊಂಡು) ವಿಧಿಸಲಾಗುತ್ತದೆ. ಬಳಸಿದ ವಿನಿಮಯ ದರವು ವಹಿವಾಟಿನ ಸಮಯದಲ್ಲಿ ಚಾಲ್ತಿಯಲ್ಲಿರುವ ವೀಸಾ/ಮಾಸ್ಟರ್ ಕಾರ್ಡ್ ವಿನಿಮಯ ದರವಾಗಿರುತ್ತದೆ. ಅಂತರರಾಷ್ಟ್ರೀಯ ಎಟಿಎಂ ವಹಿವಾಟಿನ ಮೇಲೆ ಮತ್ತೊಂದು ಬ್ಯಾಂಕ್ ವಿಧಿಸುವ ಹೆಚ್ಚುವರಿ ಶುಲ್ಕಗಳನ್ನು (ಯಾವುದಾದರೂ ಇದ್ದರೆ) ಕಾರ್ಡ್ ಹೊಂದಿರುವವರು ಭರಿಸಬೇಕಾಗುತ್ತದೆ.

## ಹೊಣೆಗಾರಿಕೆಯಿಂದ ಹೊರಗಿಡುವಿಕೆ:

ಕಾರ್ಡ್‌ದಾರರಿಗೆ ಕಾರ್ಡ್ ಸೌಲಭ್ಯವನ್ನು ಒದಗಿಸುವ ಬ್ಯಾಂಕ್‌ನ ಪರಿಗಣನೆಯಲ್ಲಿ, ಕಾರ್ಡ್‌ದಾರರಿಗೆ ಈ ಕಾರ್ಡ್ ಸೌಲಭ್ಯವನ್ನು ಒದಗಿಸುವ ಕಾರಣದಿಂದ, ಆರ್‌ಬಿಎಲ್ ಬ್ಯಾಂಕ್ ಉತ್ತಮ ನಂಬಿಕೆಯಿಂದ ವರ್ತಿಸುವ ಕಾರಣ ಅಥವಾ ಕಾರ್ಡ್‌ದಾರರ ಸೂಚನೆಗಳ ಮೇಲೆ ಕ್ರಮ ತೆಗೆದುಕೊಳ್ಳಲು ನಿರಾಕರಿಸುವುದು ಅಥವಾ ಬಿಟ್ಟುಬಿಡುವ ಮತ್ತು ನಿರ್ದಿಷ್ಟವಾಗಿ ಕಾರ್ಡ್‌ದಾರರ ನಿರ್ಲ್ಯಕ್ಷ. ತಪ್ಪು ಅಥವಾ ದುರ್ನಡತೆಯಿಂದ ನೇರವಾಗಿ ಅಥವಾ ಪರೋಕ್ಷವಾಗಿ ಉಂಟಾಗುವಿಕೆ;ನಿಯಮಗಳ ಮತ್ತು ಖಾತೆಗೆ ಸಂಬಂಧಿಸಿದ ನಿಬಂಧನೆಗಳು ಮತ್ತು ಶರತ್ತುಗಳ ಉಲ್ಲಂಘನೆ ಮತ್ತು ಅನುಸರಣೆ ಮಾಡದಿರುವಿಕೆ ಮತ್ತು/ಅಥವಾ ಕಾರ್ಡ್‌ದಾರರು ಅಥವಾ ಆತನ ಉದ್ಯೋಗಿ ಅಥವಾ ಏಜೆಂಟ್‌ನಿಂದ ಯಾವುದೇ ವಹಿವಾಟಿಗೆ ಸಂಬಂಧಿಸಿದ ಅಪ್ರಾಮಾಣಿಕತೆಯಿಂದ ಆರ್‌ಬಿಎಲ್ ಬ್ಯಾಂಕ್ ಉಂಟಾಗುವ, ಪೋಷಿಸಲ್ಪಡುವ ಅಥವಾ ಅನುಭವಿಸುವ ಯಾವುದೇ ಕಾರಣ ಅಥವಾ ಪರಿಣಾಮಗಳಿಗೆ, ಯಾವುದೇ ಕ್ರಮಗಳು, ಹಕ್ಕುಕೋರಿಕೆಗಳ, ಪ್ರಕ್ರಿಯೆಗಳು, ನಷ್ಟಗಳು, ಹಾನಿಗಳು, ವೆಚ್ಚಗಳು, ಶುಲ್ಕಗಳು ಮತ್ತು ಖರ್ಚುಗಳ ವಿರುದ್ಧ ರಕ್ಷಿಸಲು ಮತ್ತು ಆರ್‌ಬಿಎಲ್ ಬ್ಯಾಂಕ್ ಮತ್ತು/ಅಥವಾ ಅದರ ಉದ್ಯೋಗಿಗಳಿಗೆ ರಕ್ಷಣೆ ನೀಡಲು ಕಾರ್ಡ್‌ದಾರರು ಈ ಮೂಲಕ ಒಪ್ಪುತ್ತಾರೆ. ಆರ್‌ಬಿಐನ ವಿನಿಮಯ ನಿಯಂತ್ರಣ ನಿಬಂಧನೆಗಳು, ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆ(ಎಫ್‌ಇಎಂಎ)ಯ ಉಲ್ಲಂಘನೆ ಮತ್ತು ಅದರ ಅಡಿಯಲ್ಲಿ ಮತ್ತು/ಅಥವಾ ಇತರ ಕಾಯಿದೆ/ಪ್ರಾಧಿಕೀರದಲ್ಲಿ ಮಾಡಲಾದ ನಿಯಮಗಳು ಮತ್ತು ನಿಬಂಧನೆಗಳನ್ನು ಕಾರ್ಡ್‌ದಾರರು ಅನುಸರಿಸದ ಕಾರಣ ಉಂಟಾಗುವಂತಹ ಯಾವುದೇ ಅಥವಾ ಎಲ್ಲಾ ಪರಿಣಾಗಳಿಂದ ಕಾರ್ಡ್‌ದಾರರು ಆರ್‌ಬಿಎಲ್ ಬ್ಯಾಂಕ್ ಅನ್ನು ರಕ್ಷಿಸಬೇಕು ಮತ್ತು ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಕಾರ್ಡ್‌ದಾರರು ಕಾರ್ಡ್/ಪಿನ್‌ನ ಕೊರಿಯರ್ ಸ್ಥಳ ತಪ್ಪಾಗುವಿಕೆ ಅಥವಾ ಸಾಗಾಣಿಕೆಯಲ್ಲಿನ ನಷ್ಟದಿಂದಾಗಿ ಉಂಟಾಗುವ ಯಾವುದೇ ನಷ್ಟದ ವಿರುದ್ಧ ಕೂಡಾ ಆರ್‌ಬಿಎಲ್ ಬ್ಯಾಂಕ್ ಅನ್ನು ರಕ್ಷಿಸಬೇಕು. ಮೇಲಿನವುಗಳಿಗೆ ಪೂರ್ವಾಗ್ರಹವಿಲ್ಲದೆ, ಆರ್‌ಬಿಎಲ್ ಬ್ಯಾಂಕ್ ಈ ಕೆಳಗಿನವುಗಳಿಂದ ನೇರವಾಗಿ ಅಥವಾ ಪರೋಕ್ಷವಾಗಿ ಉಂಟಾಗುವ ಯಾವುದೇ ನಷ್ಟ ಅಥವಾ ಹಾನಿಗೆ ಸಂಬಂಧಿಸಿದಂತೆ ಕಾರ್ಡ್‌ದಾರರಿಗೆ ಯಾವುದೇ ಹೊಣೆಗಾರಿಕೆಯನ್ನು ಹೊಂದಿರುವುದಿಲ್ಲ:

- ಪೂರೈಸಲಾದ ಯಾವುದೇ ಸರಕು ಅಥವಾ ಸೇವೆಗಳ ಗುಣಮಟ್ಟದಲ್ಲಿನ ಯಾವುದೇ ದೋಷ
- ಕಾರ್ಡ್ ಅನ್ನು ಅಂಗೀಕಾರವನ್ನು ಒಪ್ಪಲು ಯಾವುದೇ ವ್ಯಕ್ತಿಯ ನಿರಾಕರಣೆ
- ಆರ್‌ಬಿಎಲ್ ಬ್ಯಾಂಕ್‌ನ ನಿಯಂತ್ರಣದಲ್ಲಿಲ್ಲದ ಯಾವುದೇ ಕಂಪ್ಯೂಟರ್ ಟರ್ಮಿನಲ್/ಸಿಸ್ಟಂನ ಅಸಮರ್ಪಕ ಕಾರ್ಯ
- ಕಾರ್ಡ್‌ದಾರರ ಹೊರತಾಗಿ ವಹಿವಾಟು ಸೂಚನೆಗಳ ಮೇಲೆ ಪರಿಣಾಮ ಬೀರುವುದು
- ಆರ್‌ಬಿಎಲ್ ಬ್ಯಾಂಕ್ ಆವರಣದಲ್ಲಿ ಆರ್‌ಬಿಎಲ್ ಬ್ಯಾಂಕ್‌ನ ನಿಯೋಜಿತ ಉದ್ಯೋಗಿಗಳ ಹೊರತಾಗಿ ಬೇರೆ ಯಾರಿಗಾದರೂ ಕಾರ್ಡ್‌ದಾರರು ಕಾರ್ಡ್ ಅನ್ನು ಹಸ್ತಾಂತರಿಸುವುದು.
- ಆರ್‌ಬಿಎಲ್ ಬ್ಯಾಂಕ್‌ನಿಂದ ಅಂತಹ ಮನವಿ ಮತ್ತು ಸಲ್ಲಿಕೆಯನ್ನು ಮಾಡಿದ್ದರೂ ಮತ್ತು/ಅಥವಾ ಸಂಗ್ರಹಿಸಿದ್ದರೂ, ಆರ್‌ಬಿಎಲ್ ಬ್ಯಾಂಕ್ ಕಾರ್ಡ್ ಮೇಲ್ಮೈಯಲ್ಲಿ ಬಹಿರಂಗಪಡಿಸಲಾದ ಮುಕ್ತಾಯ ದಿನಾಂಕಕ್ಕಿಂತ ಮೊದಲು ಕಾರ್ಡ್ ಸಲ್ಲಿಸಲು ಮನವಿ ಮಾಡುವ ಮತ್ತು ಸಂಗ್ರಹಿಸುವ ತನ್ನ ಹಕ್ಕನ್ನು ಚಲಾಯಿಸುವಿಕೆ
- ಆರ್‌ಬಿಎಲ್ ಬ್ಯಾಂಕ್‌ನಿಂದ ಯಾವುದೇ ಕಾರ್ಡ್ ಅನ್ನು ಮುಕ್ತಾಯಗೊಳಿಸುವ ಹಕ್ಕನ್ನು ಚಲಾಯಿಸುವಿಕೆ
- ಕಾರ್ಡ್‌ನ ಮರುಸ್ವಾಧೀನದಿಂದ ಮತ್ತು/ಅಥವಾ ಅದರ ವಾಪಾಸಾತಿಗೆ ಯಾವುದೇ ಮನವಿ ಅಥವಾ ಕಾರ್ಡ್ ಅಂಗೀಕಾರವನ್ನು ಒಪ್ಪುವಲ್ಲಿ ಯಾವುದೇ ವ್ಯಾಪಾರಿ ಸಂಸ್ಥೆಯ ನಿರಾಕರಣೆಯಿಂದಾಗಿ ಕಾರ್ಡ್‌ದಾರರ ಕ್ರೆಡಿಟ್, ನಡತೆ ಮತ್ತು ಗೌರವಕ್ಕೆ ಹಾನಿಯಾಗುವಂತಹ ಯಾವುದೇ ಆರೋಪ
- ಆರ್‌ಬಿಎಲ್ ಬ್ಯಾಂಕ್ ಕಾರ್ಡ್‌ದಾರರ ಸಾಮರ್ಥ್ಯ,ಅಥವಾ ಕಾರ್ಡ್‌ದಾರರಿಂದ ಅಧಿಕೃತಗೊಳಿಸಲಾಗಿದೆ ಎಂದು ಭಾವಿಸುವ ಯಾರೊಬ್ಬರ ಸಾಮರ್ಥ್ಯವನ್ನು ಉತ್ತಮ ನಂಬಿಕೆಯಿಂದ ನಂಬುವ ಮತ್ತು ಪ್ರಶ್ನಿಸುವ ಯಾವುದೇ ಪ್ರಕ್ರಿಯೆ, ಸಮನ್ಸ್, ಆದೇಶ, ತಡೆಯಾಜ್ಞೆ, ಜಪ್ತಿ ಜಾರಿಗೊಳಿಸುವಿಕೆ,ತೆರಿಗೆ ವಸೂಲಿ ಹಕ್ಕು, ಮಾಹಿತಿ ಅಥವಾ ಸೂಚನೆಯನ್ನು ಸ್ವೀಕರಿಸಿದರೆ, ಕಾನೂನು ಪ್ರಕಾರ ಹೊರತುಪಡಿಸಿ ಆರ್‌ಬಿಎಲ್ ಬ್ಯಾಂಕ್ ಬಹಿರಂಗಪಡಿಸಿದ ಯಾವುದೇ ವಿವರಗಳಲ್ಲಿ ಯಾವುದೇ ತಪ್ಪು ಹೇಳಿಕೆ, ತಪ್ಪು ವಿವರಣೆ, ದೋಷ ಅಥವಾ ಲೋಪ ಉಂಟಾದಲ್ಲಿ, ಆರ್‌ಬಿಎಲ್ ಬ್ಯಾಂಕ್ ತನ್ನ ಆಯ್ಕೆಯ ಮೇರೆಗೆ ಮತ್ತು ಕಾರ್ಡ್‌ದಾರರು ಮತ್ತು ಅಂತಗ ಇತರ ವ್ಯಕ್ತಿಗೆ ಹೊಣೆಗಾರಿಕೆಯಿಲ್ಲದೆ, ಕಾರ್ಡ್‌ದಾರರಿಗೆ ತನ್ನ ಹಣದ ಯಾವುದೇ ಭಾಗವನ್ನು ಪಡೆಯಲು ಅನುಮತಿಸುವುದನ್ನು ನಿರಾಕರಿಸಬಹುದು ಅಥವಾ ಅಂತಹ ಹಣವನ್ನು ಸೂಕ್ತ ಪ್ರಾಧಿಕಾರಕ್ಕೆ ನೀಡಬಹುದು ಮತ್ತು ಅನ್ವಯವಾಗುವ ಕಾನೂನಿನಿಂದ ಅಗತ್ಯವಿರುವ ಯಾವುದೇ ಇತರ ಕ್ರಮಗಳನ್ನು ತೆಗೆದುಕೊಳ್ಳಬಹುದು.

ಕಾರ್ಡ್‌ದಾರರ ಕಾರ್ಡ್ ಒಳಗೊಂಡ ಕಾನೂನು ಕ್ರಮದ ಕಾರಣದಿಂದಾಗಿ ಯಾವುದೇ ಮಿತಿಯಿಲ್ಲದ ಯೋಗ್ಯ ಕಾನೂನು ಶುಲ್ಕ ಸೇರಿದಂತೆ ಯೋಗ್ಯ ಸೇವಾ ವೆಚ್ಚ ಮತ್ತು ಉಂಟಾಗುವ ಇತರ ಯಾವುದೇ ವೆಚ್ಚಗಳನ್ನು ಕಾರ್ಡ್‌ದಾರರ ಖಾತೆಯಿಂದ ಕಳೆಯುವ ಹಕ್ಕನ್ನು ಆರ್‌ಬಿಎಲ್ ಬ್ಯಾಂಕ್ ಕಾಯ್ದಿರಿಸುತ್ತದೆ. ಕಾರ್ಡ್ ಹಿಂತಿರುಗಿಸಲು ವಿನಂತಿಸುವ ಅಥವಾ ಯಾವುದೇ ವ್ಯಕ್ತಿಯಿಂದ ಮಾಡಿದ ಯಾವುದೇ ಹೇಳಿಕೆ ಅಥವಾ ಯಾವುದೇ ವ್ಯಕ್ತಿಯೊಂದಿಗೆ ಮಾಡಿದ ಯಾವುದೇ ಕ್ರಿಯೆ; ಆರ್‌ಬಿಎಲ್ ಬ್ಯಾಂಕ್ ಅಥವಾ ಆರ್‌ಬಿಎಲ್ ಬ್ಯಾಂಕ್ ಪರವಾಗಿ ಕಾರ್ಯನಿರ್ವಹಿಸುವ ಯಾವುದೇ ವ್ಯಕ್ತಿಯಿಂದ ಕಾರ್ಡ್‌ದಾರರಿಂದ ತೀರುವೆಯಾಗದ ಬಾಕಿಯ ಇತ್ಯರ್ಥಕ್ಕಾಗಿ ಬೇಡಿಕೆ ಅಥವಾ ಹಕ್ಕುಕೋರಿಕೆ ಮಾಡಿದ ಸಂದರ್ಭದಲ್ಲಿ, ಅಂತಹ ಬೇಡಿಕೆ ಅಥವಾ ಹಕ್ಕುಕೋರಿಕೆಯು ಯಾವುದೇ ರೀತಿಯಲ್ಲಿ ಮಾನನಷ್ಟದ ಕ್ರಿಯೆಗೆ ಸಮವಾಗಬಾರದು ಅಥವಾ ಪೂರ್ವಾಗ್ರಹದ ಕ್ರಿಯೆ ಅಥವಾ ಕಾರ್ಡ್‌ದಾರರ ನಡತೆಯನ್ನು ಪ್ರತಿಬಿಂಬಿಸುವ ಕ್ರಿಯೆಯಾಗಿರಬಾರದು ಎಂಬುದನ್ನು ಕಾರ್ಡ್‌ದಾರರು ಒಪ್ಪುತ್ತಾರೆ ಮತ್ತು ಅಂಗೀಕರಿಸುತ್ತಾರೆ. ಕಾರ್ಡ್‌ದಾರರು ಯಾವುದೇ ಯಂತ್ರ/ಯಾಂತ್ರಿಕ

ದೋಷ/ವೈಫಲ್ಯಕ್ಕೆ ಆರ್‌ಬಿಎಲ್ ಬ್ಯಾಂಕ್‌ಗೆ ಪರಿಹಾರ ಕೊಡಲು ಒಪ್ಪುತ್ತಾರೆ. ಆದರೂ, ಆರ್‌ಬಿಎಲ್ ಬ್ಯಾಂಕ್, ನೇರವಾಗಿ ಆರ್‌ಬಿಎಲ್ ಬ್ಯಾಂಕ್‌ನ ನಿಯಂತ್ರಣದೊಳಗಿರುವ ಯಾವುದೇ ತಾಂತ್ರಿಕ ದೋಷ/ಅಸಮರ್ಪಕ ಕಾರ್ಯದಿಂದಾಗಿ ಉಂಟಾಗುವ , ಕಾರ್ಡ್‌ದಾರರಿಂದ ಉಂಟಾಗುವ ಎಲ್ಲಾ ನೇರ ನಷ್ಟಗಳಿಗೆ ಹೊಣೆಯಾಗಿರುತ್ತದೆ. ಆದರೂ, ಸಾಧನದ ಮೇಲೆ ಪ್ರದರ್ಶಿಸಲಾದ ಸಂದೇಶ ಅಥವಾ ತಿಳಿದ/ಸಂವಹನ ಮಾಡಿರುವ ಮೂಲಕ ಕಾರ್ಡ್‌ದಾರರು ಮೊದಲೇ ಗುರುತಿಸಿದ್ದರೂ, ಪಾವತಿ ವ್ಯವಸ್ಥೆಯಿಂದ ಉಂಟಾದ ತಾಂತ್ರಿಕ ಅಡಚಣೆಯ ಕಾರಣದಿಂದ ಉಂಟಾಗುವ ಯಾವುದೇ ನಷ್ಟಕ್ಕೆ ಆರ್‌ಬಿಎಲ್ ಬ್ಯಾಂಕ್ ಹೊಣೆಯಾಗಿರುವುದಿಲ್ಲ. ಕಾರ್ಯಗತಗೊಳಿಸದಿರುವ ಅಥವಾ ದೋಷಪೂರಿತ ವಹಿವಾಟಿನ ಸಂದರ್ಭದಲ್ಲಿ, ಆರ್‌ಬಿಎಲ್ ಬ್ಯಾಂಕ್‌ನ ಹೊಣೆಗಾರಿಕೆಯು ವಹಿವಾಟಿನ ಮೂಲ ಮೌಲ್ಯಕ್ಕೆ ಸೀಮಿತವಾಗಿರುತ್ತದೆ ಮತ್ತು ಯಾವುದಾದರೂ ಇದ್ದಲ್ಲಿ, ಅನ್ವಯವಾಗುವ ಕಾನೂನು ಮತ್ತು ಆರ್‌ಬಿಎಲ್ ಬ್ಯಾಂಕ್‌ನ ನೀತಿಗಳಿಗೆ ಒಳಪಟ್ಟಿರುತ್ತದೆ.

## ಸೌಲಭ್ಯಗಳ ಸೇರ್ಪಡೆ/ಹಿಂಪಡೆಯುವಿಕೆ

ಆರ್‌ಬಿಎಲ್ ಬ್ಯಾಂಕ್ ತನ್ನ ವಿವೇಚನೆಯಿಂದ, ಕಾರ್ಡ್‌ದಾರರ ಅನುಕೂಲಕ್ಕಾಗಿ ಮತ್ತು ಬಳಕೆಗಾಗಿ ಹಂಚಿದ ನೆಟ್ವರ್ಕ್ ಮೂಲಕ ಕಾರ್ಡ್, ಎಟಿಎಂಗಳು, ಪಿಒಎಸ್ ಟರ್ಮಿನಲ್‌ಗಳು, ಇಂಟರ್ನೆಟ್ ಅಥವಾ ಅಲ್ಲದಿದ್ದರೆ ಮತ್ತು/ಅಥವಾ ಇತರ ಸಾಧನಗಳ ಮೇಲೆ ಕಾರ್ಡ್‌ದಾರರಿಗೆ ಹೆಚ್ಚು ಸೇವೆಗಳು ಲಭ್ಯವಾಗುವಂತೆ ಮಾಡಬಹುದು. ಈ ಸಾಧನಗಳ ಮೂಲಕ ಕಾರ್ಡ್‌ದಾರರು ಮಾಡಿದ ವಹಿವಾಟುಗಳಿಗೆ ಸಂಬಂಧಿಸಿದ ಎಲ್ಲಾ ಶುಲ್ಕಗಳು ಮತ್ತು ವೆಚ್ಚಗಳನ್ನು ಕಾಲಕಾಲಕ್ಕೆ ಆರ್‌ಬಿಐ ಬ್ಯಾಂಕ್ ನಿರ್ಧರಿಸಿದಂತೆ, ಕಾರ್ಡ್‌ನೊಂದಿಗೆ ಲಿಂಕ್ ಮಾಡಲಾದ ಖಾತೆಗೆ ಡೆಬಿಟ್ ಮಾಡುವ ಮೂಲಕ ಮರುಪಡೆಯಲಾಗುತ್ತದೆ. .ಹಂಚಿದ ನೆಟ್ವರ್ಕ್‌ಗಳು ವಿಭಿನ್ನ ಕಾರ್ಯಚಟುವಟಿಕೆಗಳು ಮತ್ತು ವಿಭಿನ್ನ ಸೇವೆಗಳನ್ನು ಕೊಡಬಹುದು ಮತ್ತು ವಿವಿಧ ಸೇವೆಗಳಿಗೆ ವಿವಿಧ ವೆಚ್ಚಗಳಿರುತ್ತವೆ ಎಂಬುದನ್ನು ಕಾರ್ಡ್‌ದಾರರು ಅರ್ಥೈಸುತ್ತಾರೆ ಮತ್ತು ಒಪ್ಪುತ್ತಾರೆ. ಆರ್‌ಬಿಎಲ್ ಬ್ಯಾಂಕ್ ತನ್ನ ಸ್ವಂತ ವಿವೇಚನೆಯಲ್ಲಿ, ಯಾವುದೇ ಸಮಯದಲ್ಲಿ, ಕಾರ್ಡ್‌ದಾರರಿಗೆ ಯಾವುದೇ ಸೂಚನೆಯನ್ನು ನೀಡದೆ, ಭಾರತದೊಳಗೆ/ಹೊರಭಾಗದಲ್ಲಿ ಎಟಿಎಂಗಳು/ಪಿಒಎಸ್ ಟರ್ಮಿನಲ್/ಇಂಟರ್ನೆಟ್/ಇತರ ಸಾಧನಗಳಲ್ಲಿ ಕಾರ್ಡ್ ಬಳಕೆ ಮತ್ತು/ಅಥವಾ ಅದಕ್ಕೆ ಸಂಬಂಧಿಸಿದ ಸೇವೆಗಳ ಸೌಲಭ್ಯವನ್ನು ಹಿಂಪಡೆಯುವ, ನಿಲ್ಲಿಸುವ, ರದ್ದುಪಡಿಸುವ, ಅಮಾನತುಗೊಳಿಸುವ/ಅಥವಾ ಮುಕ್ತಾಯಗೊಳಿಸುವ ಅರ್ಹತೆಯನ್ನು ಹೊಂದಿದೆ ಮತ್ತು ಅಂತಹ ಅಮಾನತು ಅಥವಾ ಮುಕ್ತಾಯದಿಂದ ಯಾವುದೇ ರೀತಿಯಲ್ಲಿ ಉಂಟಾಗುವ ಯಾವುದೇ ನಷ್ಟ ಅಥವಾ ಹಾನಿಗೆ ಕಾರ್ಡ್‌ದಾರರಿಗೆ ಹೊಣೆಯಾಗಿರುವುದಿಲ್ಲ.

## ಕಾರ್ಯನಿರ್ವಹಣೆಯ ಜವಾಬ್ದಾರಿಗಳು:

1. ಒಂದು ವೇಳೆ ವೈಯಕ್ತಿಕವಲ್ಲದ ಕಾರ್ಡ್‌ದಾರರು ತಮ್ಮ ಕಾರ್ಯನಿರ್ವಹಣೆ ವಿಧಾನವನ್ನು ಜಂಟಿಯಾಗಿ ಬದಲಾಯಿಸಲು ಬಯಸಿದರೆ, ಖಾತೆ ರಚನೆಯಲ್ಲಿ ಬದಲಾವಣೆಗಳಿಗೆ ಮನವಿ ಮಾಡುವುದರ ಜೊತೆಗೆ, ಕಾರ್ಡ್ ಮುಕ್ತಾಯಕ್ಕೆ ಪ್ರತ್ಯೇಕ ಮನವಿಯನ್ನು ಕಾರ್ಡ್‌ದಾರರು ನೀಡಬೇಕಾಗುತ್ತದೆ. ಒಂದು ವೇಳೆ ಕಾರ್ಡ್‌ದಾರರು ಖಾತೆಯ ಅಧಿಕೃತ ಸಹಿಗಾರ ಆಗಿದ್ದು ಮತ್ತು ನಿರ್ಗಮಿಸಲು ಬಯಸಿದಲ್ಲಿ, ಖಾತೆ ರಚನೆಯಲ್ಲಿನ ಬದಲಾವಣೆಗಳ ಮನವಿಯ ಜೊತೆಗೆ,ಖಾತೆದಾರರು ಕಾರ್ಡ್ ಮುಕ್ತಾಯಕ್ಕೆ ಪ್ರತ್ಯೇಕ ಮನವಿಯನ್ನು ನೀಡಬೇಕಾಗುತ್ತದೆ.

2. ಕಾರ್ಡ್‌ದಾರರು ಈ ಮೂಲಕ ತನ್ನ ಖಾತೆಗಳನ್ನು ನಿರ್ವಹಿಸಲು ಆರ್‌ಬಿಎಲ್ ಬ್ಯಾಂಕ್ ಅಧಿಕೃತ ವ್ಯಕ್ತಿಯಿಂದ ಕಾಲಕಾಲಕ್ಕೆ ಪಡೆಯಬಹುದಾದ ಎಲ್ಲಾ ಅಂತಹ ಸೂಚನೆಗಳನ್ನು ಅಂಗೀಕರಿಸಲು ಮತ್ತು ಅದರ ಪ್ರಕಾರ ಕಾರ್ಯನಿರ್ವಹಿಸಲು ಆರ್‌ಬಿಎಲ್ ಬ್ಯಾಂಕ್‌ಗೆ ಬೇಷರತ್ತಾಗಿ ಮತ್ತು ಶಾಶ್ವತವಾಗಿ ಈ ಮೂಲಕ ಅಧಿಕಾರ ನೀಡುತ್ತಾರೆ.
3. ಕಂಪನಿಯು ಮೇಲೆ ಸೂಚಿಸಲಾದ ಕಂಪನಿಯ ವಿಳಾಸದಲ್ಲಿ , ತಿಳಿಸಲಾದ ಅಧಿಕೃತ ವ್ಯಕ್ತಿಗಳ ಗಮನಕ್ಕೆ ಕಾರ್ಡ್ ಮತ್ತು ಪಿನ್ ಅನ್ನು ಕೊರಿಯರ್ ಮಾಡಲು ಆರ್‌ಬಿಎಲ್ ಬ್ಯಾಂಕ್‌ಗೆ ಬೇಷರತ್ತಾಗಿ ಮತ್ತು ಶಾಶ್ವತವಾಗಿ ಈ ಮೂಲಕ ಅಧಿಕಾರ ನೀಡುತ್ತಾರೆ.
4. ಕಾರ್ಡ್ ಸೌಲಭ್ಯವನ್ನು ಪಡೆಯಲು ಉದ್ದೇಶಿಸದೇ ಇದ್ದಲ್ಲಿ, ಕಾರ್ಡ್‌ದಾರರು/ಅಧಿಕೃತ ವ್ಯಕ್ತಿಗಳು ಅಂತಹ ಉದ್ದೇಶವನ್ನು ಆರ್‌ಬಿಎಲ್ ಬ್ಯಾಂಕ್‌ಗೆ ಲಿಖಿತವಾಗಿ ತಿಳಿಸುತ್ತಾರೆ ಎಂದು ಈ ಮೂಲಕ ಒಪ್ಪಿಕೊಳ್ಳುತ್ತಾರೆ.
5. ಕಾರ್ಡ್‌ದಾರರು ಆತನಿಂದ/ಆಕೆಯಿಂದ ನೀಡಲಾದ ಆತನ/ಆಕೆಯ ವೈಯಕ್ತಿಕ ವಿವರಗಳ ನಿಖರತೆಗೆ ಜವಾಬ್ದಾರರಾಗಿರುತ್ತಾರೆ. ಆತನ/ಆಕೆಯ ವಿವರಗಳಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಕಾರ್ಡ್‌ದಾರರು ತಕ್ಷಣದಲ್ಲೇ ಬ್ಯಾಂಕ್‌ಗೆ ತಿಳಿಸಬೇಕು.
6. ಕಾರ್ಡ್ ಮತ್ತು ಪಿನ್ ಅನ್ನು ಗೋಪ್ಯವಾಗಿ ಮತ್ತು ಕಾರ್ಡ್‌ದಾರರಿಗೆ /ಅದರ ಅಧಿಕೃತ ವ್ಯಕ್ತಿಗಳಿಗೆ ಸೀಮಿತವಾಗಿ ಇಟ್ಟುಕೊಳ್ಳುವ ಜವಾಬ್ದಾರಿಯು ಸಂಪೂರ್ಣವಾಗಿ ಕಾರ್ಡ್‌ದಾರರ ಅಪಾಯವಾಗಿದೆ ಮತ್ತು ಕಾರ್ಡ್ ರೀತಿಯಲ್ಲಿ/ಮೂಲಕ ನಡೆಯುವ ಎಲ್ಲಾ ವಹಿವಾಟುಗಳು ಖಾತೆಗಳಿಗೆ ಸಂಬಂಧಿಸಿದ ಮಾಹಿತಿಯ ಬಳಕೆಗೆ, ಕಾರ್ಡ್‌ದಾರರ ಸಂಪೂರ್ಣ ಮತ್ತು ನಿಖರ ಅಪಾಯ, ಜವಾಬ್ದಾರಿ ಮತ್ತು ಹೊಣೆಗಾರಿಕೆಯಾಗಿರುತ್ತದೆ ಮತ್ತು ಕಾರ್ಡ್ ಮೂಲಕ ಖಾತೆಗೆ ಸಂಬಂಧಿಸಿದ ಯಾವುದೇ ಸೂಚನೆಯನ್ನು ಅಧಿಕೃತವಾಗಿ ನೀಡಲಾಗಿದೆಯೇ ಎಂಬುದನ್ನು ಪರೀಕ್ಷಿಸಲು ಅಥವಾ ದಾಖಲಿಸಲು ಆರ್‌ಬಿಎಲ್ ಬ್ಯಾಂಕ್‌ಗೆ ಸಾಧ್ಯವಾಗುವುದಿಲ್ಲ ಮತ್ತು ಅದೇ ಅಥವಾ ಅಲ್ಲದಿರುವ ಅಧಿಕೃತ ವ್ಯಕ್ತಿಗಳು ಮತ್ತು ಕಾರ್ಡ್‌ದಾರರು ಖಾತೆಗೆ ಸಂಬಂಧಿಸಿದ ಮಾಹಿತಿ ಮತ್ತು ಕಾರ್ಡ್ ಮೂಲಕ ಅದನ್ನೇ ವರ್ಗಾವಣೆ/ಹಿಂಪಡೆಯುವಿಕೆ ಸೇರಿದಂತೆ ಯಾವುದೇ ವಹಿವಾಟುಗಳಿಗೆ ಜವಾಬ್ದಾರನಾಗುವುದಿಲ್ಲ ಅಥವಾ ಬ್ಯಾಂಕ್ ಅನ್ನು ಹೊಣೆಯಾಗಿಸುವುದಿಲ್ಲ ಎಂಬುದನ್ನು ಕಾರ್ಡ್‌ದಾರರು ಈ ಮೂಲಕ ಅಂಗೀಕರಿಸುತ್ತಾರೆ , ಒಪ್ಪುತ್ತಾರೆ, ದೃಢಪಡಿಸುತ್ತಾರೆ ಮತ್ತು ಭಾವಿಸುತ್ತಾರೆ.
7. ಕಾರ್ಡ್‌ದಾರರು ಈ ಮೂಲಕ ಆರ್‌ಬಿಎಲ್ ಬ್ಯಾಂಕ್‌ಗೆ ಕಾಲಕಾಲಕ್ಕೆ ಮತ್ತು ನಂತರದ ಎಲ್ಲಾ ಸಮಯದಲ್ಲಿ ಕಾರ್ಡ್ ದುರ್ಬಳಕೆಯಿಂದ ಅಥವಾ ಅದಕ್ಕೆ ಸಂಬಂಧಿಸಿ ಎಲ್ಲಾ ನಷ್ಟಗಳು, ಹಕ್ಕುಕೋರಿಕೆಗಳು, ಹಾನಿಗಳು, ಕ್ರಮಗಳು, ದಾವೆಗಳು, ವೆಚ್ಚಗಳು, ಶುಲ್ಕಗಳು ಮತ್ತು ಖರ್ಚುಗಳು ಯಾವುದೇ ಇದ್ದಲ್ಲಿ ಕಾರ್ಡ್‌ದಾರರು ಯಾವತ್ತಿಗೂ ಪರಿಹಾರ ನೀಡಲು ಮತ್ತು ಆರ್‌ಬಿಎಲ್ ಬ್ಯಾಂಕ್ ಅನ್ನು ರಕ್ಷಿಸಲು ಒಪ್ಪುತ್ತಾರೆ, ಮತ್ತು ಅಧಿಕೃತ ವ್ಯಕ್ತಿಯಿಂದ ಮತ್ತು/ಅಥವಾ ಅದಕ್ಕೆ ಸೂಂಧಿಸಿದ ಅದರೊಂದಿಗಿರುವ ಯಾವುದೇ ವಿಷಯಗಳಿಂದ ಆರ್‌ಬಿಎಲ್ ಬ್ಯಾಂಕ್‌ನಿಂದ ಪಡೆಯಲಾದ ಸೂಚನೆಗಳ ಅನುಸಾರ ಅಂತಹ ಎಲ್ಲಾ ಕ್ರಮಗಳನ್ನು ಆರ್‌ಬಿಎಲ್ ಬ್ಯಾಂಕ್‌ನಿಂದ ತೆಗೆದುಕೊಳ್ಳಬಹುದು.
8. ಹೆಚ್ಚುವರಿಯಾಗಿ, ಆರ್‌ಬಿಎಲ್ ಬ್ಯಾಂಕ್‌ನಿಂದ ಅಂತಹ ಬೇಡಿಕೆಯನ್ನು ಸ್ವೀಕರಿಸಿದ ಮೂರು ದಿನಗಳೊಳಗೆ ಯಾವುದೇ ಹಣಕಾಸು ನಷ್ಟ, ಹಾನಿ ಅಥವಾ ಗಾಯದ ಅನುಸರವಾಗಿ ಯಾವುದೇ ಮೊತ್ತವನ್ನು ಆರ್‌ಬಿಎಲ್ ಬ್ಯಾಂಕ್‌ಗೆ ಪಾವತಿಸಲು ಕಾರ್ಡ್‌ದಾರರು ಒಪ್ಪುತ್ತಾರೆ

# ಬಹಿರಂಗಪಡಿಸುವಿಕೆಗಳು:

ಕಾರ್ಡ್‌ದಾರರು ಕಾರ್ಡ್‌ಗೆ ಪಾವತಿಸಬೇಕಾದ ಯಾವುದೇ ಪಾವತಿ ಅಥವಾ ಮರುಪಾವತಿಯ ಬೇಪಾವತಿ ಮಾಡಿದಲ್ಲಿ ಆರ್‌ಬಿಎಲ್ ಬ್ಯಾಂಕ್ ಮತ್ತು/ಅಥವಾ ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ) ಕಾರ್ಡ್‌ದಾರರ ಹೆಸರು ಮತ್ತು/ಅಥವಾ ಅದರ ನಿರ್ದೇಶಕರ/ಪಾಲುದಾರ/ಸಹ-ಅರ್ಜಿದಾರರ ಹೆಸರು ಸೇರಿದಂತೆ ಅನ್ವಯವಾಗುವಂತೆ, ಅಂತಹ ರೀತಿಯಲ್ಲಿ ಡೀಫಾಲ್ಟರ್ ಸೇರಿದಂತೆ ಬೇಪಾವತಿಯ ವಿವರಗಳನ್ನು ಆರ್‌ಬಿಎಲ್ ಬ್ಯಾಂಕ್ ಅಥವಾ ಆರ್‌ಬಿಐ ಬ್ಯಾಂಕ್ ಅವರ ಸಂಪೂರ್ಣ ವಿವೇಚನೆಯಿಂದ ಸೂಕ್ತವೆಂದು ಭಾವಿಸುವಂತಹ ಮಾಧ್ಯಮದ ಮೂಲಕ ಬಹಿರಂಗಪಡಿಸುವ ಅಥವಾ ಪ್ರಕಟಿಸುವ ಸಂಪೂರ್ಣ ಹಕ್ಕನ್ನು ಹೊಂದಿರುತ್ತದೆ. ಕಾರ್ಡ್‌ದಾರರ ವಿವರಗಳು ಮತ್ತು ಮರುಪಾವತಿ ಇತಿಹಾಸ ಮಾಹಿತಿ ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿ ಮತ್ತು ನಿಯಮಗಳಿಗೆ ಸಂಬಂಧಿಸಿದ ಮತ್ತು ಒಳಗೊಂಡಿರುವ ಅಥವಾ ಅದರ ಅಂಗಸಂಸ್ಥೆಗಳು/ಬ್ಯಾಂಕ್‌ಗಳು/ಸಾಲ ಸಂಸ್ಥೆಗಳು/ಕ್ರೆಡಿಟ್ ರೇಟಿಂಗ್ ಸಂಸ್ಥೆಗಳು/ಶಾಸನಬದ್ಧ ಸಂಸ್ಥೆಗಳಲ್ಲಿ ವ್ಯಕ್ತಪಡಿಸಿದಂತೆ ಅಗತ್ಯವಿರುವಂತೆ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳಲು, ಹಂಚಿಕೊಳ್ಳಲು ಅಥವಾ ಭಾಗಿಯಾಗಲು ಕಾರ್ಡ್‌ದಾರರು ಆರ್‌ಬಿಎಲ್ ಬ್ಯಾಂಕ್‌ಗೆ ಈ ಮೂಲಕ ಅಧಿಕಾರ ನೀಡುತ್ತಾರೆ ಮತ್ತು ಆರ್‌ಬಿಎಲ್ ಬ್ಯಾಂಕ್/ಅದರ ಅಂಗಸಂಸ್ಥೆಗಳು ಅವರ ಏಜೆಂಟ್‌ಗಳು ಮೇಲಿನ ಮಾಹಿತಿಯ ಬಳಕೆಗೆ ಹೊಣೆಗಾರರನ್ನಾಗಿ ಮಾಡದಿರಲು ಒಪ್ಪುತ್ತಾರೆ.

ಶುಲ್ಕಗಳು ಮತ್ತು ವೆಚ್ಚಗಳು:

ಕಾರ್ಡ್‌ನ ವಾರ್ಷಿಕ ಶುಲ್ಕವನ್ನು ಕಾರ್ಡ್‌ದಾರರ ಬ್ಯಾಂಕ್‌ನ ಚಾಲ್ತಿಯಲ್ಲಿರುವ ದರದಲ್ಲಿ ಅರ್ಜಿ/ನವೀಕರಣದ ಕಾರ್ಡ್‌ನೊಂದಿಗೆ ಲಿಂಕ್ ಆಗಿರುವ ಪ್ರಾಥಮಿಕ ಖಾತೆಗೆ ಡೆಬಿಟ್ ಮಾಡಲಾಗುತ್ತದೆ.ಶುಲ್ಕವನ್ನು ಮರುಪಾವತಿಸಲಾಗುವುದಿಲ್ಲ. ಆರ್‌ಬಿಎಲ್ ಬ್ಯಾಂಕ್ ಕಾಲಕಾಲಕ್ಕೆ ನಿಗದಿಪಡಿಸಬಹುದಾದಂತಹ ಕನಿಷ್ಠ ಬ್ಯಾಲೆನ್ಸ್ ಅನ್ನು ಕಾರ್ಡ್‌ದಾರರು ಯಾವಾಗಲೂ ಖಾತೆಯಲ್ಲಿ ಇರಿಸಿಕೊಳ್ಳಬೇಕು. ಕಾರ್ಡ್‌ನ ವಿತರಣ ಅಥವಾ ಮರುವಿತರಣೆಗಾಗಿ ಮತ್ತು/ಅಥವಾ ಕಾರ್ಡ್‌ನಲ್ಲಿ ಕಾರ್ಡ್‌ದಾರರು ನಡೆಸಿದ ಯಾವುದೇ ವಹಿವಾಟುಗಳ ಶುಲ್ಕ/ವೆಚ್ಚಗಳಿಗೆ ಕಾರ್ಡ್‌ದಾರರಿಗೆ ಶುಲ್ಕ ವಿಧಿಸುವ ಹಕ್ಕನ್ನು ಆರ್‌ಬಿಎಲ್ ಬ್ಯಾಂಕ್ ಯಾವುದೇ ಸಮಯದಲ್ಲಿ ಕಾಯ್ದಿರಿಸುತ್ತದೆ. ಕಾರ್ಡ್‌ನ ಬಳಕೆಯ ಪರಿಣಾಮವಾಗಿ ಪಾವತಿಸಬೇಕಾದ ಯಾವುದೇ ಸರಕಾರಿ ವೆಚ್ಚಗಳು, ಸುಂಕ ಅಥವಾ ಡೆಬಿಟ್‌ಗಳು ಅಥವಾ ತೆರಿಗೆ ಕಾರ್ಡ್‌ದಾರರ ಜವಾಬ್ದಾರಿಯಾಗಿರುತ್ತದೆ ಮತ್ತು ಆರ್‌ಬಿಎಲ್ ಬ್ಯಾಂಕ್ ಮೇಲೆ ವಿಧಿಸಿದರೆ(ನೇರವಾಗಿ ಅಥವಾ ಪರೋಕ್ಷವಾಗಿ), ಆರ್‌ಬಿಎಲ್ ಬ್ಯಾಂಕ್‌ಅಂತಹ ಶುಲ್ಕಗಳು, ಸುಂಕ ಅಥವಾ ತೆರಿಗೆಯನ್ನು ಖಾತೆ ವಿರುದ್ಧ ಡೆಬಿಟ್ ಮಾಡುತ್ತದೆ. ಹೆಚ್ಚುವರಿಯಾಗಿ, ಹಂಚಿದ ನೆಟ್ವರ್ಕ್‌ಗಳ ನಿರ್ವಾಹಕರು ಅವರ ಎಟಿಎಂ/ಪಿಒಎಸ್ ಟರ್ಮಿನಲ್/ಇತರ ಸಾಧನಗಳ ಪ್ರತೀ ಬಳಕೆಗೆ ಹೆಚ್ಚುವರಿ ಶುಲ್ಕವನ್ನು ವಿಧಿಸಬಹುದು, ಮತ್ತು ಇತರ ಅನ್ವಯವಾಗುವ ಶುಲ್ಕಗಳು/ವೆಚ್ಚಗಳೊಂದಿಗೆ ಅಂತಹ ಯಾವುದೇ ವೆಚ್ಚವನ್ನು ಕಾರ್ಡ್‌ದಾರರ ಖಾತೆಯಿಂದ ಕಳೆಯಲಾಗುತ್ತದೆ. ಬ್ಯಾಂಕ್‌ನಿಂದ ಕಾಲಕಾಲಕ್ಕೆ ಘೋಷಿಸಿದಂತೆ ಅಂತಹ ಸೌಲಭ್ಯಗಳಿಗೆ ಪ್ರತ್ಯೇಕ ಸೇವಾ ವೆಚ್ಚಗಳನ್ನು ವಿಧಿಸಲಾಗುವುದು ಮತ್ತು ಕಾರ್ಡ್‌ದಾರರ ಖಾತೆಯಿಂದ ಕಳೆಯಲಾಗುವುದು. ಒಂದು ವೇಳೆ ಅಂತಹ ಶುಲ್ಕವನ್ನು ಕಳೆಯಲು ಖಾತೆಯು ಬೇಕಾದಷ್ಟು ಹಣವನ್ನು ಹೊಂದಿಲ್ಲದ ಪರಿಸ್ಥಿತಿಯಲ್ಲಿ, ಬ್ಯಾಂಕ್ ಮುಂದಿನ ಯಾವುದೇ ವಹಿವಾಟುಗಳನ್ನು ನಿರಾಕರಿಸುವ ಹಕ್ಕನ್ನು ಹೊಂದಿರುತ್ತದೆ. ಒಂದು ವೇಳೆ ಖಾತೆಗಳು ಹೆಚ್ಚಾಗಿ ಹಣತೆಗೆದ ಖಾತೆಗಳೆಂದು ವರ್ಗೀಕರಣವಾದಲ್ಲಿ, ಕಾರ್ಡ್‌ದಾರರು ಖಾತೆಯ ಬ್ಯಾಲೆನ್ಸ್ ಸ್ಥಿತಿಯನ್ನು ತಕ್ಷಣವೇ ಸರಿಪಡಿಸಬೇಕಾಗುತ್ತದೆ. ಖಾತೆಯಲ್ಲಿ ಹೆಚ್ಚು ಹಣ

ಪಡೆಯುವಂತಹ ಪ್ರತೀ ಸ್ಥಿತಿಯಲ್ಲಿ, ಖಾತೆಯಲ್ಲಿನ ಡೆಬಿಟ್ ಬ್ಯಾಲೆನ್ಸ್ ಮೇಲೆ ವಿಧಿಸಲಾಗುವ ಬಡ್ಡಿಯೊಂದಿಗೆ ನೇರ ಶುಲ್ಕವನ್ನು ವಿಧಿಸಲಾಗುತ್ತದೆ. ಈ ಶುಲ್ಕವನ್ನು ಬ್ಯಾಂಕ್ ನಿರ್ಧರಿಸುತ್ತದೆ ಮತ್ತು ಕಾಲಕಾಲಕ್ಕೆ ಘೋಷಿಸಲಾಗುತ್ತದೆ. ಕಾರ್ಡ್ ವಹಿವಾಟಿನಿಂದಾಗಿ ಖಾತೆಯಿಂದ ಹೆಚ್ಚು ಹಣ ಹೋದ ಸಂದರ್ಭದಲ್ಲಿ, ಯಾವುದೇ ಸೂಚನೆ ನೀಡದೆ ಜಂಟಿಯಾಗಿ ಅಥವಾ ಒಬ್ಬರೇ ಹೊಂದಿರುವ ಕಾರ್ಡ್‌ದಾರರ ಇತರ ಯಾವುದೇ ಖಾತೆಗಳಿಂದ ಉಂಟಾಗುವ ಯಾವುದೇ ಕ್ರೆಡಿಟ್‌ಗೆ ಈ ಮೊತ್ತವನ್ನು ಹೊಂದಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ. ನಿಯಮಗಳಲ್ಲಿ ಯಾವುದೂ ಬ್ಯಾಂಕ್‌ನ ಸೆಟ್‌ಆಫ್, ವರ್ಗಾವಣೆ ಮತ್ತು ಕಾನೂನಿನಲ್ಲಿ ಹಣವನ್ನು ಅನ್ವಯಿಸುವ ಹಕ್ಕಿನ ಮೇಲೆ ಪರಿಣಾಮ ಬೀರುವುದಿಲ್ಲ. ಅಥವಾ ಬ್ಯಾಂಕ್ ಮತ್ತು ಕಾರ್ಡ್‌ದಾರರ ನಡುವೆ ಕಾಲಕಾಲಕ್ಕೆ ಉಳಿದಿರುವ ಯಾವುದೇ ಒಪ್ಪಂದದ ಪ್ರಕಾರ, ಕಾರ್ಡ್‌ದಾರರು ತನ್ನ ಖಾತೆಯಿಂದ ಕಳೆಯಲು ಆರ್‌ಬಿಎಲ್ ಬ್ಯಾಂಕ್‌ಗೆ ಅಧಿಕಾರ ನೀಡುತ್ತಾರೆ ಮತ್ತು ಕಾರ್ಡ್‌ಗೆ ಸಂಬಂಧಿಸಿದಂತೆ ಕಾರ್ಡ್‌ದಾರರಿಂದ ಪಾವತಿಸಬೇಕಾದ ಹಣವನ್ನು ಸಂಗ್ರಹಿಸುವ ಯಾವುದೇ ವೆಚ್ಚಗಳ ವಿರುದ್ಧ ಆರ್‌ಬಿಎಲ್ ಬ್ಯಾಂಕ್ ಪರಿಹಾರವನ್ನು ನೀಡುತ್ತದೆ(ಮಿತಿಯಿಲ್ಲದೆ ಯೋಗ್ಯ ಕಾನೂನು ಶುಲ್ಕ ಸೇರಿದಂತೆ). ಆರ್‌ಬಿಎಲ್ ಬ್ಯಾಂಕ್ ತನ್ನ ವಿವೇಚನೆಯಿಂದ ಕನಿಷ್ಟ ಬ್ಯಾಲೆನ್ಸ್ ಅನ್ನು ನಿರ್ವಹಿಸದೇ ಇರುವುದಕ್ಕಾಗಿ ಹೆಚ್ಚುವರಿ/ದಂಡ ಶುಲ್ಕವನ್ನು ವಿಧಿಸಬಹುದು. ಕನಿಷ್ಟ ಉಳಿಕೆ ಶರತ್ತಿನ ಜೊತೆಗೆ ಕಾರ್ಡ್ ಬಳಕೆಗಾಗಿ ಆರ್‌ಬಿಎಲ್ ಬ್ಯಾಂಕ್ ಸೇವಾ ಮತ್ತು ಇತರ ವೆಚ್ಚಗಳನ್ನು ವಿಧಿಸಬಹುದು, ಇದನ್ನು ಕಾರ್ಡ್‌ದಾರರಿಗೆ ಕಾಲಕಾಲಕ್ಕೆ ಸೂಚಿಸಲಾಗುತ್ತದೆ. ಒಂದು ವೇಳೆ ಕಾರ್ಡ್‌ದಾರರು ತನ್ನ ಅಂತಾರಾಷ್ಟ್ರೀಯವಾಗಿ ಮಾನ್ಯವಾದ ಡೆಬಿಟ್ ಕಾರ್ಡ್ ಮೂಲಕ ವಹಿವಾಟು ನಡೆಸಿದ್ದಲ್ಲಿ, ವೀಸಾ/ಮಾಸ್ಟರ್‌ಕಾರ್ಡ್/ಎನ್‌ಪಿಸಿಐ ನಿಬಂಧನೆಗಳ ಪ್ರಕಾರ ಪ್ರಕ್ರಿಯಗೊಳಿಸುವಿಕೆ ವೆಚ್ಚ, ಪರಿವರ್ತನೆ ವೆಚ್ಚ, ಇತರ ಯಾವುದೇ ಶುಲ್ಕಗಳೊಂದಿಗೆ, ಕಾರ್ಡ್‌ದಾರರ ಖಾತೆಯಲ್ಲಿ ನಡೆಸಲಾದ ವೆಚ್ಚವು ಕರೆನ್ಸಿಗೆ ಸಮಾನವಾಗಿರುತ್ತದೆ, ಅಂತಹ ವಹಿವಾಟುಗಳಿಗೆ ಯಾವಲುದೇ ಇತರ ಸೇವಾ ವೆಚ್ಚಗಳನ್ನು ಭಾರತದ ಆರ್‌ಬಿಎಲ್ ಬ್ಯಾಂಕ್‌ನಲ್ಲಿರುವ ಕಾರ್ಡ್‌ನೊಂದಿಗೆ ಲಿಂಕ್ ಆದ ಖಾತೆಯಿಂದ ಡೆಬಿಟ್ ಮಾಡಲಾಗುತ್ತದೆ.ಕಾರ್ಡ್‌ನೊಂದಿಗೆ ಲಿಂಕ್ ಮಾಡಲಾದ ಖಾತೆಯಿಂದ ಡೆಬಿಟ್ ಮಾಡುವ ಮೂಲಕ ಕಾಲಕಾಲಕ್ಕೆ ಆರ್‌ಬಿಎಲ್ ಬ್ಯಾಂಕ್ ನಿರ್ಧರಿಸಿದಂತೆ ಕಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಶುಲ್ಕಗಳನ್ನು ಪಡೆಯಲು ಕಾರ್ಡ್‌ದಾರರು ಆರ್‌ಬಿಎಲ್ ಬ್ಯಾಂಕ್‌ಗೆ ಅಧಿಕಾರವನ್ನು ನೀಡುತ್ತಾರೆ. ಆರ್‌ಬಿಎಲ್ ಬ್ಯಾಂಕ್ ನಿಗದಿಪಡಿಸಿದಂತೆ ಅನ್ವಯವಾಗುವ ಶುಲ್ಕಗಳ ವಿವರಗಳನ್ನು ಆರ್‌ಬಿಎಲ್ ಬ್ಯಾಂಕ್‌ನ ವೆಬ್‌ಸೈಟ್ ಮತ್ತು/ಅಥವಾ ಆರ್‌ಬಿಎಲ್ ಬ್ಯಾಂಕ್‌ನ ಶಾಖೆಗಳನ್ನು ಪ್ರದರ್ಶಿಸಲಾಗುತ್ತದೆ. ದಿನಾಂದದಂದು ಅನ್ವಯವಾಗುವ ಸುಂಕದ ವಿವರಗಳಿಗಾಗಿ ದಯವಿಟ್ಟು ಶುಲ್ಕಗಳ ಪಟ್ಟಿಯನ್ನು ನೋಡಿ(https://www.rblbank.com/pdf-pages/service-charges).

## ಸರಕುಗಳು ಮತ್ತು ಸೇವೆಗಳ ಗುಣಮಟ್ಟ:

ವಿತರಣೆಯಲ್ಲಿ ವಿಳಂಬ, ವಿತರಣೆ ಮಾಡದಿರುವಿಕೆ, ಸರಕು ಸಿಗದೇ ಇರುವಿಕೆ ಅಥವಾ ದೋಷವುಳ್ಳ ಸರಕಿನ ಸ್ವೀಕೃತಿ ಸೇರಿದಂತೆ ವ್ಯಾಪಾರಿ ಸಂಸ್ಥೆಗಳಿಂದ ಕಾರ್ಡ್‌ದಾರರು ಖರೀದಿಸಿದ ಅಥವಾ ಪಡೆದ ಸರಕುಗಳು, ಸರಕುಗಳ ಖಾತರಿ ಅಥವಾ ಸೇವೆಗಳಿಗೆ ಆರ್‌ಬಿಎಲ್ ಯಾವುದೇ ರೀತಿಯಲ್ಲಿ ಜವಾಬ್ದಾರನಾಗಿರುವುದಿಲ್ಲ. ಕಾರ್ಡ್, ಕಾರ್ಡ್‌ದಾರರಿಗೆ ಸರಕುಗಳನ್ನು ಖರೀದಿಸಲು ಮತ್ತು/ಅಥವಾ ಸೇವೆಗಳನ್ನು ಪಡೆಯಲು ಇರುವ ಸೌಲಭ್ಯ ಮಾತ್ರ ಆಗಿದೆ ಮತ್ತು ಸರಕಿನ ಗುಣಮಟ್ಟ, ವಿತರಣೆ ಅಥವಾ ಸರಕಿನ ಬಗ್ಗೆ ಯಾವುದೇ ಖಾತರಿ ಅಥವಾ ಪ್ರಾತಿನಿಧ್ಯವನ್ನು ಆರ್‌ಬಿಎಲ್ ಬ್ಯಾಂಕ್ ಹೊಂದುವುದಿಲ್ಲ ಎಂಬುದನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು. ವ್ಯಾಪಾರಿ ಸಂಸ್ಥೆ ಹೊಂದಿರುವ ಕಾರ್ಡ್ ಸದಸ್ಯರೇ ವ್ಯಾಪಾರದ ಕುರಿತ ಯಾವುದೇ ಕಲಹ ಅಥವಾ ಹಕ್ಕುಕೋರಿಕೆಗಳನ್ನು ಪರಿಹರಿಸಿಕೊಳ್ಳಬೇಕು. ಹಕ್ಕುಕೋರಿಕೆ ಅಥವಾ

ಕಲಹದ ಇರುವಿಕೆಯು ಆರ್‌ಬಿಎಲ್ ಬ್ಯಾಂಕ್‌ಗೆ ಪಾವತಿಸಬೇಕಾದ ಎಲ್ಲಾ ಶುಲ್ಕಗಳನ್ನು ಪಾವತಿಸುವ ಬಾಧ್ಯತೆಗಳಿಂದ ಕಾರ್ಡ್ ಸದಸ್ಯರನ್ನು ಮುಕ್ತಗೊಳಿಸುವುದಿಲ್ಲ ಮತ್ತು ಕಾರ್ಡ್ ಸದಸ್ಯರು ಅಂತಹ ಶುಲ್ಕಗಳನ್ನು ಸಕಾಲದಲ್ಲಿ ಪಾವತಿಸಲು ಒಪ್ಪುತ್ತಾರೆ.

## ಕಲಹಗಳು:

ಕಾರ್ಡ್‌ನ್ನು ಸ್ವೀಕರಿಸಲು ಮತ್ತು/ಅಥವಾ ಒಪ್ಪಲು ಯಾವುದೇ ವ್ಯಾಪಾರಿ ಸಂಸ್ಥೆಯ ನಿರಾಕರಣೆಯ ಜವಾಬ್ದಾರಿಯನ್ನು ಆರ್‌ಬಿಎಲ್ ಬ್ಯಾಂಕ್ ಒಪ್ಪುವುದಿಲ್ಲ. ಒಂದು ವೇಳೆ ವ್ಯಾಪಾರಿ ಸಂಸ್ಥೆಯೊಂದಿಗಿನ ವಹಿವಾಟಿಗೆ ಸಂಬಂಧಿಸಿದ ಕಲಹದ ಸಂದರ್ಭದಲ್ಲಿ, ಕಾರ್ಡ್‌ದಾರರ ಸಹಿ ಮತ್ತು ಅದರ ಮೇಲೆ ನಮೂದಿಸಲಾದ ಕಾರ್ಡ್ ಸಂಖ್ಯೆಯೊಂದಿಗೆ ಶುಲ್ಕ/ಮಾರಾಟ ಸ್ಲಿಪ್ ಕಾರ್ಡ್‌ದಾರರಿಂದ ಉಂಟಾಗುವ ಹೊಣೆಗಾರಿಕೆಯ ಮಟ್ಟಿಗೆ ಆರ್‌ಬಿಎಲ್ ಬ್ಯಾಂಕ್ ಮತ್ತು ಕಾರ್ಡ್‌ದಾರರ ನಡುವಿನ ನಿರ್ಣಾಯಕ ಸಾಕ್ಷ್ಯವಾಗಿರಬೇಕು.ಕಾರ್ಡ್‌ದಾರರ ತೃಪ್ತಿಗಾಗಿ ಕಾರ್ಡ್‌ದಾರರು ಖರೀದಿಸಿದ ಸರಕುಗಳನ್ನು/ಖರೀದಿಸಬೇಕಾದ ಸರಕುಗಳನ್ನು ಸರಿಯಾಗಿ ಪಡಿದ್ದಾರೆ ಅಥವಾ ಲಭ್ಯವಾದ/ಲಭ್ಯವಾಗಬೇಕಾದ ಸೇವೆಯನ್ನು ಸರಿಯಾಗಿ ಪಡೆದಿದ್ದಾರೆ ಎಂಬುದನ್ನು ಆರ್‌ಬಿಎಲ್ ಖಚಿತಪಡಿಸುವ ಅಗತ್ಯವಿಲ್ಲ.ಒಂದು ವೇಳೆ ಖಾತೆ ವಿವರಣೆಯಲ್ಲಿ ಸೂಚಿಸಲಾದ ಯಾವುದೇ ವೆಚ್ಚಗಳ ಕುರಿತಂತೆ ಕಾರ್ಡ್‌ದಾರರಿಗೆ ಯಾವುದೇ ವಿವಾದವಿದ್ದಲ್ಲಿ, ಖಾತೆ ವಿವರಣೆ ದಿನಾಂಕದ 15 ದಿನಗಳೊಳಗೆ ಕಾರ್ಡ್‌ದಾರರು ವಿವರಗಳನ್ನು ಆರ್‌ಬಿಎಲ್ ಬ್ಯಾಂಕ್‌ಗೆ ಸೂಚಿಸಬೇಕು, ಅದು ವಿಫಲವಾದಲ್ಲಿ ಅದುಎಲ್ಲಾ ವೆಚ್ಚಗಳು ಸ್ವೀಕಾರಾರ್ಹ ಮತ್ತು ಕ್ರಮಬದ್ಧವಾಗಿದೆ ಎಂದು ಅರ್ಥೈಸಲಾಗುತ್ತದೆ. ಆರ್‌ಬಿಎಲ್ ತನ್ನ ಸ್ವಂತ ವಿವೇಚನೆಯಿಂದ 15 ದಿನಗಳಷ್ಟು ಹಳೆಯದಾದ ಶುಲ್ಕಳ ಮೇಲೆ ಯಾವುದೇ ಕಲಹವನ್ನು ಅಂಗೀಕರಿಸುವುದಿಲ್ಲ. ಅಸಮ್ಮತಿಯ ಸೂಚನೆಯನ್ನು ಸ್ವೀಕರಿಸಿದ ಎರಡು ತಿಂಗಳುಗಳೊಳಗೆ ಖಾತೆ ವಿವರಣೆಯಲ್ಲಿ ಸೂಚಿಸಲಾದ ಅನ್ವಯವಾಗುವ ವೆಚ್ಚಗಳೊಂದಿಗಿನ ಬಾಧಿತ ಕಾರ್ಡ್‌ದಾರರ ಅಸಮ್ಮತಿಯನ್ನು ಪರಿಹರಿಸಲು ಆರ್‌ಬಿಎಲ್ ಬ್ಯಾಂಕ್ ಪ್ರಾಮಾಣಿಕ ಮತ್ತು ಸೂಕ್ತ ಪ್ರಯತ್ನಗಳನ್ನು ಮಾಡುತ್ತದೆ. ಆ ಪ್ರಯತ್ನಗಳ ನಂತರ ಸೂಚಿಸಲ್ಪಟ್ಟ ವೆಚ್ಚವು ಸರಿಯಾಗಿದೆ ಎಂದು ಆರ್‌ಬಿಎಲ್ ಬ್ಯಾಂಕ್ ನಿರ್ಧರಿಸಿದಲ್ಲಿ, ಆಗ ಅದರ ಕುರಿತಂತೆ ಮಾರಾಟ ಸ್ಲಿಪ್ ಅಥವಾ ಪಾವತಿ ಮನವಿಯ ಪ್ರತಿಯನ್ನು ಸೇರಿ ವಿವರಗಳೊಂದಿಗೆ ಕಾರ್ಡ್‌ದಾರರಿಗೆ ತಿಳಿಸುತ್ತದೆ. ಹಂಚಿದ ನೆಟ್ವರ್ಕ್ ಕುರಿತಾದ ಯಾವುದೇ ಕಲಹವನ್ನು ವೀಸಾ/ಮಾಸ್ಟರ್‌ಕಾರ್ಡ್/ಎನ್‌ಪಿಸಿಐ ನಿಬಂಧನೆಗಳ ಅನುಸಾರ ಪರಿಹರಿಸಲಾಗುತ್ತದೆ. ಹಂಚಿದ ನೆಟ್ವರ್ಕ್‌ಗಳೊಂದಿಗೆ ಕಾರ್ಡ್‌ದಾರರು ಹೊಂದಿರುವ ಯಾವುದೇ ವ್ಯವಹಾರಗಳ ಜವಾಬ್ದಾರಿಯನ್ನು ಆರ್‌ಬಿಎಲ್ ಬ್ಯಾಂಕ್ ಒಪ್ಪುವುದಿಲ್ಲ. ಯಾವುದೇ ಹಂಚಿದ ನೆಟ್ವರ್ಕ್ ಎಟಿಎಂಗೆ ಸಂಬಂಧಿಸಿದ ಕಾರ್ಡ್‌ದಾರರಿಗೆ ಯಾವುದೇ ದೂರುಗಳಿದ್ದಲ್ಲಿ, ಕಾರ್ಡ್‌ದಾರರು ಹಂಚಿದ ನೆಟ್ವರ್ಕ್‌ನೊಂದಿಗೆ ಸಮಸ್ಯೆಯನ್ನು ಪರಿಹರಿಸಿಕೊಳ್ಳಬೇಕು, ಮತ್ತು ಅದನ್ನು ಮಾಡಲು ವಿಫಲವಾದಲ್ಲಿ,ಅವರನ್ನು ಆರ್‌ಬಿಎಲ್ ಬ್ಯಾಂಕ್‌ಗೆ ಬಾಧ್ಯತೆಗಳಿಂದ ಮುಕ್ತಗೊಳಿಸಲಾಗುವುದಿಲ್ಲ .ಆದರೂ ಕಾರ್ಡ್‌ದಾರರು ದೂರಿನ ಬಗ್ಗೆ ಆರ್‌ಬಿಎಲ್ ಬ್ಯಾಂಕ್‌ಗೆ ತಕ್ಷಣವೇ ತಿಳಿಸಬೇಕು. ಪರಿಹಾರ ಮತ್ತು ರಕ್ಷಣೆ ನೀತಿಯ ಬಗ್ಗೆ ತಿಳಿಯಲು, ದಯವಿಟ್ಟು https://rb.gy/2m0ir ಕ್ಲಿಕ್ ಮಾಡಿ.

## ಆಡಳಿತ ಕಾನೂನು ಮತ್ತು ನ್ಯಾಯವ್ಯಾಪ್ತಿ:

ಆರ್‌ಬಿಎಲ್ ಬ್ಯಾಂಕ್ ಮತ್ತು ಕಾರ್ಡ್‌ದಾರರು ನಿಬಂಧನೆಗಳಿಂದ ಉಂಟಾಗುವ ಯಾವುದೇ ಕಾನೂನು ಕ್ರಮ ಅಥವಾ ಮೊಕದ್ದಮೆಯನ್ನು ಭಾರತದಲ್ಲಿ ಮುಂಬೈನಲ್ಲಿರುವ ನ್ಯಾಯಾಲಯಗಳು ಅಥವಾ ನ್ಯಾಯಮಂಡಳಿಗಳಿಗೆ ತರಲಾಗುವುದು

ಮತ್ತು ಆ ನ್ಯಾಯಾಲಯ ಅಥವಾ ನ್ಯಾಯಮಂಡಳಿಯ ನ್ಯಾಯವ್ಯಾಪ್ತಿಗೆ ತಮ್ಮನ್ನು ಬದಲಾಯಿಸದಂತೆ ಸಲ್ಲಿಸಬೇಕು ಎಂಬುದನ್ನು ಒಪ್ಪುತ್ತಾರೆ. ಆದರೂ, ಆರ್‌ಬಿಎಲ್ ಬ್ಯಾಂಕ್ ತನ್ನ ಸ್ವಂತ ವಿವೇಚನೆಯೊಂದಿಗೆ ಈ ನಿಬಂಧನೆಗಳು ಮತ್ತು ಶರತ್ತುಗಳಿಂದ ಉಂಟಾಗುವ ಯಾವುದೇ ಕೂನಾನು ಅಥವಾ ಮೊಕದ್ದಮೆಗಳನ್ನು ಯಾವುದೇ ಇತರ ನ್ಯಾಯಾಲಯ , ನ್ಯಾಯಮಂಡಳಿ ಅಥವಾ ಇತರ ಸೂಕ್ತ ವೇದಿಕೆಯಲ್ಲಿ ಪ್ರಾರಂಭಿಸಬಹುದು ಮತ್ತು ಈ ಮೂಲಕ ಕಾರ್ಡ್‌ದಾರರು ನ್ಯಾಯವ್ಯಾಪ್ತಿಗೆ ಸಮ್ಮತಿಸುತ್ತಾರೆ. ಈ ನಿಯಮಗಳನ್ನು ಭಾರತೀಯ ಕಾನೂನುಗಳಿಗೆ ಅನುಸಾರವಾಗಿ ನಿಯಂತ್ರಿಸಲಾಗುತ್ತದೆ ಮತ್ತು ಅರ್ಥೈಸಲಾಗುತ್ತದೆ.

## ಬದಲಾವಣೆಗಳ ಅಧಿಸೂಚನೆ:

ಯಾವುದೇ ಸಮಯದಲ್ಲಿ ಬಡ್ಡಿ ಶುಲ್ಕಗಳು ಅಥವಾ ದರಗಳು ಮತ್ತು ಲೆಕ್ಕಾಚಾರದ ವಿಧಾನಗಳ ಮೇಲೆ ಪರಿಣಾಮ ಬೀರುವ ಬದಲಾವಣೆಗಳನ್ನು ಒಳಗೊಂಡಂತೆ ಯಾವುದೇ ಮಿತಿಯಿಲ್ಲದೆ, ಕಾರ್ಡ್‌ಗೆ ನೀಡಲಾದ ಯಾವುದೇ ನಿಯಮಗಳು, ಲಕ್ಷಣಗಳು ಮತ್ತು ಪ್ರಯೋಜನಗಳನ್ನು ತಿದ್ದುಪಡಿ ಮಾಡಲು ಅಥವಾ ಸೇರಿಸಲು ಆರ್‌ಬಿಎಲ್ ಬ್ಯಾಂಕ್ ಸಂಪೂರ್ಣ ವಿವೇಚನೆಯನ್ನು ಹೊಂದಿರುತ್ತದೆ. ಕಾರ್ಡ್‌ನ ಮೊತ್ತವನ್ನು ಪೂರ್ತಿಯಾಗಿ ಮರುಪಾವತಿ ಮಾಡುವವರೆಗೆ ಈ ಪರಿಷ್ಕೃತ ನಿಯಮಗಳ ಅಡಿಯಲ್ಲಿ ಉಂಟಾಗುವ ಎಲ್ಲಾ ಶುಲ್ಕಗಳು ಮತ್ತು ಇತರ ಎಲ್ಲಾ ಬಾಧ್ಯತೆಗಳಿಗೆ ಕಾರ್ಡ್‌ದಾರರು ಜವಾಬ್ದಾರಾಗಿರುತ್ತಾರೆ. ಆರ್‌ಬಿಎಲ್ ಬ್ಯಾಂಕ್ ಕಾಲಕಾಲಕ್ಕೆ ನಿರ್ಧರಿಸಿದಂತೆ ಆರ್‌ಬಿಎಲ್ ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ಅಥವಾ ಯಾವುದೇ ರೀತಿಯಲ್ಲಿ ಪ್ರಸ್ತುತಪಡಿಸುವ ಮೂಲಕ ತಿದ್ದುಪಡಿ ಮಾಡಲಾದ ನಿಯಮಗಳನ್ನು ತಿಳಿಸಬಹುದು.

ಆರ್‌ಬಿಎಲ್ ಬ್ಯಾಂಕ್ ವೆಬ್‌ಸೈಟ್‌ನಲ್ಲಿ ಹಾಕಬಹುದಾದ ತಿದ್ದುಪಡಿಗಳನ್ನು ಒಳಗೊಂಡಂತೆ ಈ ನಿಬಂಧನೆಗಳು ಮತ್ತು ಶರತ್ತುಗಳನ್ನು ನಿಯಮಿತವಾಗಿ ಪರಿಶೀಲಿಸಲಿಸುವ ಜವಾಬ್ದಾರಿಯನ್ನು ಗ್ರಾಹಕರು ಹೊಂದಿರುತ್ತಾರೆ. ನಿಬಂಧನೆಗಳಲ್ಲಿನ ಬದಲಾವಣೆಗಳ ಪರಿಣಾಮದಿಂದಾಗಿ ಕಾರ್ಜ್‌ದಾರರು ಕಾರ್ಡ್ ಅನ್ನು ಮುಕ್ತಾಯಗೊಳಿಸಲು ಅಪೇಕ್ಷಿಸಿದ ಸಂದರ್ಭದಲ್ಲಿ, ಆರ್‌ಬಿಎಲ್ ಬ್ಯಾಂಕ್‌ನ ಸೂಚಿಸಲ್ಪಟ್ಟ/ತಿದ್ದುಪಡಿ ಮಾಡಲ್ಪಟ್ಟ ನಿಯಮಗಳನ್ನು ಅಪ್‌ಲೋಡ್ ಮಾಡಿದ ದಿನಾಂಕದಿಂದ ಎರಡು ತಿಂಗಳುಗಳ ಅವಧಿಯೊಳಗೆ ಅದನ್ನು ಮಾಡಬಹುದು. ಆದರೂ, ಅಂತಹ ತಿದ್ದುಪಡಿ ಮಾಡಲಾದ ಅಧಿಸೂಚನೆಗಳ ಬಳಿಕ ಕಾರ್ಡ್ ಬಳಸುವುದನ್ನು ಮುಂದುವರಿಸುವ ಮೂಲಕ ತಿದ್ದುಪಡಿಯಾದ ನಿಯಮಗಳನ್ನು ಒಪ್ಪಿಕೊಂಡಿದ್ದಾರೆ ಎಂದು ಭಾವಿಸಲಾಗುತ್ತದೆ. ನಿಬಂಧನೆಗಳು ಮತ್ತು ಶರತ್ತುಗಳಲ್ಲಿನ ಯಾವುದೇ ಬದಲಾವಣೆಯನ್ನು ಅವುಗಳ ಅನುಷ್ಠಾನದ ದಿನಾಂಕಕ್ಕೆ ಒಂದು ತಿಂಗಳ ಮೊದಲು ಮೇಲೆ ತಿಳಿಸಲಾದ ರೀತಿಯಲ್ಲಿ ಕಾರ್ಡ್ ಸದಸ್ಯರಿಗೆ ತಿಳಿಸಲಾಗುತ್ತದೆ.

## ಇಂಟರ್ನೆಟ್ ವೆಬ್‌ಸೈಟ್ ಬಳಕೆ:

ಕಾರ್ಡ್ ದೇಶೀಯ ಬಳಕೆಯ ಕಾರ್ಡ್ ಅಲ್ಲದ ಹೊರತಾಗಿ ಕಾರ್ಡ್‌ದಾರರು(ಆರ್‌ಬಿಎಲ್ ಬ್ಯಾಂಕ್ ಮೂಲಕ ತಿಳಿಸದ ಹೊರತಾಗಿ) ಕಾರ್ಡ್ ಅನ್ನು ಭಾರತದಲ್ಲಿ ಮತ್ತು ವಿದೇಶದಲ್ಲಿ ಎಲ್ಲಾ ಇಂಟರ್ನೆಟ್ ವೆಬ್‌ಸೈಟ್‌ನಲ್ಲಿ ಬಳಸಬಹುದು. ವಹಿವಾಟಿನ ಮೊತ್ತವನ್ನು ಕಾರ್ಡ್‌ಗೆ ಲಿಂಕ್ ಮಾಡಲಾದ ಖಾತೆಯಿಂದ ತಕ್ಷಣವೇ ಡೆಬಿಟ್ ಮಾಡಲಾಗುತ್ತದೆ. ಕಾರ್ಡ್ , ಕಾರ್ಡ್ ಸಂಖ್ಯೆ, ಮುಕ್ತಾಯ ದಿನಾಂಕ, ಕಾರ್ಡ್ ಗುರುತು ಸಂಖ್ಯೆ(ಸಿವಿವಿ), ಭದ್ರತಾ ಅಂಕಿಗಳು ಮತ್ತು ಒಂದು ಬಾರಿಯ ಪಾಸ್‌ವರ್ಡ್(ಒಟಿಪಿ) ಸಹಾಯದಿಂದ ಕಾರ್ಡ್ ಕಾರ್ಯನಿರ್ವಹಿಸುತ್ತದೆ. ಸರಕು ಮತ್ತು ಸೇವೆಗಳ ಪೂರೈಕೆ ಸೇರಿದಂತೆ ಮತ್ತು ಸೀಮಿತವಾಗಿರದೆ ಇಂಟರ್ನೆಟ್ ವೆಬ್‌ಸೈಟ್ ಮೂಲಕ ಕಾಡ್‌ದಾರರು ಮಾಡಿರುವ ಯಾವುದೇ ವ್ಯವಹಾರಗಳ ಜವಾಬ್ದಾರಿಯನ್ನು ಬ್ಯಾಂಕ್ ಒಪ್ಪುವುದಿಲ್ಲ. ಇಂಟರ್ನೆಟ್ ವೆಬ್‌ಸೈಟ್ ಮೂಲಕ ಮಾಡಲಾದ ಯಾವುದೇ ವಹಿವಾಟಿನ

ಕುರಿತು ಕಾರ್ಡ್‌ದಾರರಿಗೆ ಯಾವುದೇ ದೂರುಗಳಿದ್ದಲ್ಲಿ, ಈ ವಿಚಾರವನ್ನು ಕಾರ್ಡ್‌ದಾರರು ವ್ಯಾಪಾರಿಯೊಂದಿಗೆ ಪರಿಹರಿಸಿಕೊಳ್ಳಬೇಕು ಮತ್ತು ಅದನ್ನು ಮಾಡಲು ವಿಫಲವಾದಲ್ಲಿ, ಬ್ಯಾಂಕ್‌ನ ಯಾವುದೇ ಬಾಧ್ಯತೆಗಳಿಂದ ಅವರನ್ನು ಮುಕ್ತಗೊಳಿಸಲಾಗುವುದಿಲ್ಲ. ಆದರೂ, ಕಾರ್ಡ್‌ದಾರರು ಈ ದೂರನ್ನು ಬ್ಯಾಂಕ್‌ಗೆ ತಕ್ಷಣವೇ ತಿಳಿಸಬೇಕು. ಯಾವುದೇ ಇಂಟರ್ನೆಟ್ ವೆಬ್‌ಸೈಟ್‌ನಿಂದ ವಿಧಿಸಲಾದ ಯಾವುದೇ ಹೆಚ್ಚುವರಿ ಶುಲ್ಕಕ್ಕೆ ಬ್ಯಾಂಕ್ ಯಾವುದೇ ಜವಾಬ್ದಾರಿಯನ್ನು ಸ್ವೀಕರಿಸುವುದಿಲ್ಲ ಮತ್ತು ಅದನ್ನು ವಹಿವಾಟಿನ ಮೊತ್ತದೊಂದಿಗೆ ಕಾರ್ಡ್‌ದಾರರ ಖಾತೆಗೆ ಡೆಬಿಟ್ ಮಾಡಲಾಗುತ್ತದೆ. ಇಂಟರ್ನೆಟ್ ವೆಬ್‌ಸೈಟ್‌ನಿಂದ ಪಾವತಿಗಾಗಿ ಬ್ಯಾಂಕ್ ಸ್ವೀಕರಿಸಿದ ಯಾವುದೇ ಶುಲ್ಕ ಅಥವಾ ಇತರ ಪಾವತಿಯ ವಿನಂತಿಯು ಅಂತಹ ಮನವಿಯ ಮೇಲೆ ದಾಖಲಿಸಲಾದ ಶುಲ್ಕವನ್ನು ಕಾರ್ಡ್‌ದಾರರಿಂದ ಇಂಟರ್ನೆಟ್ ವೆಬ್‌ಸೈಟ್‌ನಲ್ಲಿ ಸರಿಯಾಗಿ ಪಾವತಿಸಲಾಗಿದೆ ಎಂಬುದಕ್ಕೆ ನಿರ್ಣಾಯಕ ಸಾಕ್ಷಿಯಾಗಿದೆ,ಕಾರ್ಡ್ ಕಳೆದುಹೋದ, ಕಳುವಾದ ಅಥವಾ ಮೋಸದಿಂದ ಬಳಸಲ್ಪಟ್ಟ ಹೊರತಾಗಿ, ಸಾಕ್ಷಿಯ ಹೊರೆಯು ಕಾರ್ಡ್‌ದಾರರ ಮೇಲೆ ಇರುತ್ತದೆ. ಒಂದು ವೇಳೆ ಕಾರ್ಡ್‌ದಾರರು ದೋಷದ ಕಾರಣದಿಂದ ಅಥವಾ ವ್ಯಾಪಾರ ವಾಪಾಸಾತಿಯ ಕಾರಣದಿಂದ ಪೂರ್ಣಗೊಂಡ ವಹಿವಾಟನ್ನು ರದ್ದು ಮಾಡಲು ಬಯಸಿದಲ್ಲಿ, ಈ ಹಿಂದಿನ ವಹಿವಾಟನ್ನು ಇಂಟರ್ನೆಟ್ ವೆಬ್‌ಸೈಟ್‌ನಲ್ಲಿ ರದ್ದುಗೊಳಿಸಬೇಕು ಮತ್ತು ರದ್ದಾದ ರಶೀದಿಯ ಎಲೆಕ್ಟ್ರಾನಿಕ್ ಪ್ರತಿಯನ್ನು ಕಾರ್ಡ್‌ದಾರರ ಸ್ವಾಧೀನದಲ್ಲಿ ಇರಿಸಿಕೊಳ್ಳಬೇಕು. ಅಂತಹ ವಹಿವಾಟುಗಳ ಹಿಂಪಡೆತ/ಮರುಪಾವತಿಯನ್ನು ಕೈಯಿಂದನೇ ಪ್ರಕ್ರಿಯೆಗೊಳಿಸಲಾಗುತ್ತದೆ ಮತ್ತು ಒಂದುವೇಳೆ ಸೂಚಿಸಿದಲ್ಲಿ ರದ್ದಾದ ರಶೀದಿಯ ಎಲೆಕ್ಟ್ರಾನಿಕ್ ಪ್ರತಿಯನ್ನು ಕಾರ್ಡ್‌ದಾರರು ಸಲ್ಲಿಸಬೇಕಾಗುತ್ತದೆ

## ವಿಮಾ ಪ್ರಯೋಜನಗಳು

ಕಾರ್ಡ್‌ದಾರರು, ಕಾರ್ಡ್‌ನ ಅಡಿಯಲ್ಲಿ, ವಿಮಾ ಕಂಪನಿಯೊಂದಿಗಿನ ಸಹಭಾಗಿತ್ವದ ಮೂಲಕ ಆರ್‌ಬಿಎಲ್ ಬ್ಯಾಂಕ್ ಕಾಲಕಾಲಕ್ಕೆ ವಿವಿಧ ವಿಮಾ ಪ್ರಯೋಜನಗಳನ್ನು ನೀಡಬಹುದು.

ಹಕ್ಕುಕೋರಿಕೆ ಇತ್ಯರ್ಥಕ್ಕೆ ವಿಮಾ ಕಂಪನಿಯು ಸಂಪೂರ್ಣ ಹೊಣೆಗಾರಿಕೆಯನ್ನು ಹೊಂದಿರುತ್ತದೆ. ಅಲ್ಲದೆ, ಆರ್‌ಬಿಎಲ್ ಬ್ಯಾಂಕ್ ಅಂತಹ ವಿಮಾ ರಕ್ಷಣೆಯ ಪ್ರಯೋಜನವನ್ನು ಯಾವುದೇ ಸಮಯದಲ್ಲಿ (ತನ್ನ ಸ್ವಂತ ವಿವೇಚನೆಯಿಂದ ಅಥವಾ ಕಾರ್ಡ್‌ದಾರರಿಗೆ ಯಾವುದೇ ಸೂಚನೆಯನ್ನು ನೀಡದೆ ಅಥವಾ ಯಾವುದೇ ಕಾರಣವನ್ನು ನೀಡದೆ)ಅಮಾನತುಗೊಳಿಸಬಹುದು, ಹಿಂಪಡೆಯಬಹುದು ಅಥವಾ ರದ್ದು ಮಾಡಬಹುದು, ಮತ್ತು ಪ್ರಯೋಜನವನ್ನು ಮುಂದುವರಿಸಲು ಬ್ಯಾಂಕ್‌ನ ಮೇಲೆ ಯಾವುದೇ ಬಾಧ್ಯತೆ ಇರುವುದಿಲ್ಲ ಎಂಬುದನ್ನು ಕೂಡಾ ಕಾರ್ಡ್‌ದಾರರು ಒಪ್ಪುತ್ತಾರೆ.ನಿಮ್ಮ ಕಾರ್ಡ್ ಮೇಲಿನ ವಿಮಾ ರಕ್ಷಣೆಯ ಬಗ್ಗೆ ಇನ್ನಷ್ಟು ತಿಳಿಯಲು ದಯವಿಟ್ಟು ಈ ಯುಆರ್‌ಎಲ್ ಕ್ಲಿಕ್ ಮಾಡಿ: https://bit.ly/3ngE9p0

## ಜವಾಬ್ದಾರಿಗಳು:

- ಗ್ರಾಹಕರಿಂದ ಮತ್ತು/ಅಥವಾ ಗ್ರಾಹಕರು ಭದ್ರತೆ ಮತ್ತು ಗೋಪ್ಯತೆ ಅಗತ್ಯತೆಗಳನ್ನು ಗಮನಿಸಲು ವಿಫಲವಾದುದರಿಂದ ,ಡೆಬಿಟ್ ಕಾರ್ಡ್ ಸಂಖ್ಯೆ, ಕ್ರೆಡಿಟ್ ಕಾರ್ಡ್ ಸಂಖ್ಯೆ, ನೆಟ್ ಬ್ಯಾಂಕಿಂಗ್ ಐಡಿ & ಪಾಸ್‌ವರ್ಡ್, ಸಿವಿವಿ ಸಂಖ್ಯೆ, ಮೊಬೈಲ್ ಬ್ಯಾಂಕಿಂಗ್ ಆಪ್(ಮೊಬ್ಯಾಂಕ್) ಇತ್ಯಾದಿ ನಿರ್ಣಾಯಕ ಮಾಹಿತಿಯ ರಾಜಿಯಿಂದಾಗಿ ಖಾತೆಯ ದುರುಪಯೋಗ/ಅನಧಿಕೃತ ಬಳಕೆಯ ಪರಿಣಾಮದಿಂದಾಗಿ ಗ್ರಾಹಕರಿಗೆ ನಷ್ಟ ಉಂಟಾದಲ್ಲಿ, ಯಾವುದೇ ರೀತಿಯಲ್ಲಿ

ಬ್ಯಾಂಕ್ ಜವಾಬ್ಧಾರನಾಗಿರುವುದಿಲ್ಲ/ಹೊಣೆಯಾಗಿರುವುದಿಲ್ಲ ಎಂಬುದನ್ನು ಗ್ರಾಹಕರು ಅಂಗೀಕರಿಸಬೇಕು ಮತ್ತು ಭೇಷರತ್ತಾಗಿ ಒಪ್ಪಬೇಕು.

- ಗ್ರಾಹಕರು ಇದಕ್ಕೆ ಚಂದಾದಾರಾರಾಗುವಾಗ ಕಂಪ್ಯೂಟರ್/ಎಲೆಕ್ಟ್ರಾನಿಕ್ಸ್/ಡಿಜಿಟಲ್ ಮೆಶಿನರಿ ಮತ್ತು ಚಾನೆಲ್‌ಳು ಇತ್ಯಾದಿಗಳ ಸಂಪೂರ್ಣ ಕೆಲಸದ ಜ್ಞಾನವನ್ನು ಹೊಂದಿರುವುದನ್ನು ಪ್ರತಿನಿಧಿಸುತ್ತಾರೆ ಮತ್ತು ಖಾತ್ರಿಪಡಿಸುತ್ತಾರೆ.
- ಗ್ರಾಹಕರು ಮೇಲೆ ಪಟ್ಟಿ ಮಾಡಲಾದ ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ಚಾನೆಲ್‌ಗಳನ್ನು ಬಳಸುವಲ್ಲಿ ಇರುವ ಅಪಾಯಗಳು, ಜವಾಬ್ಧಾರಿಗಳು ಮತ್ತು ಹೊಣೆಗಾರಿಕೆಗಳ ಬಗ್ಗೆ ತಿಳಿದುಕೊಂಡಿರಬೇಕು ಮತ್ತು ಸರಿಯಾದ ಪರಿಗಣನೆಯ ನಂತರ ಬ್ಯಾಂಕ್‌ನಿಂದ ಅದೇ ಸೌಲಭ್ಯವನ್ನು ಪಡೆದುಕೊಂಡಿರಬೇಕು.
- ಗ್ರಾಹಕರು ಎಲೆಕ್ಟ್ರಾನಿಕ್ ಸಾಧನಗಳು ಅಂದರೆ ಸೆಲ್ ಫೋನ್‌ಗಳು ಅಥವಾ ಎಲೆಕ್ಟ್ರಾನಿಕ್ ಸಾಧನಗಳು/ಹಾರ್ಡ್‌ವೇರ್/ಅಪ್ಲಿಕೇಶನ್‌ಗಳು, ಲ್ಯಾಪ್‌ಟ್ಯಾಪ್‌ಳು, ಟ್ಯಾಬ್ಲೆಟ್‌ಗಳು ಇತ್ಯಾದಿಗಳ ಸುರಕ್ಷತೆ & ಭದ್ರತೆಯನ್ನು ಖಚಿತಪಡಿಸಲು ಜವಾಬ್ಧಾರರಾಗಿರುತ್ತಾರೆ ಮತ್ತು ಅಂತಹ ಸಾಧನಗಳ ದುರ್ಬಳಕೆ ಅಥವಾ ಅನಧಿಕೃತ ಬಳಕೆಯ ಸಂದರ್ಭದಲ್ಲಿ ಸಂಪೂರ್ಣ ಜವಾಬ್ಧಾರಿಯನ್ನು/ಹೊಣೆಗಾರಿಕೆಯನ್ನು ತೆಗೆದುಕೊಳ್ಳಬೇಕು.
- ಗ್ರಾಹಕರು ಅವರಿಗೆ ಉದ್ದೇಶಿತವಲ್ಲದ ಸಾರ್ವಜನಿಕ ಡೊಮೇನ್‌ನಿಂದ ಎಸ್‌ಎಂಎಸ್, ಇಮೇಲ್, ಪತ್ರಗಳು, ಫೋನ್ ಕರೆಗಳು, ಎಚ್ಚರಿಕೆಗಳು ಇತ್ಯಾದಿಗಳ ಮೂಲಕ ಯಾವುದೇ ಡಾಟಾ ಅಥವಾ ಮಾಹಿತಿಯನ್ನು ಸ್ವೀಕರಿಸಿದ ತಕ್ಷಣ ಬ್ಯಾಂಕ್‌ಗೆ ಸೂಚಿಸಬೇಕು ಮತ್ತು ಅಂತಹ ಡಾಟಾವನ್ನು ದುರುಪಯೋಗಪಡಿಸಬಾರದು.
- ಐಡಿ, ಪಾಸ್‌ವರ್ಡ್, ಪಿನ್, ಎಂಪಿಐಎನ್, ಕಾರ್ಡ್ ವಿವರಗಳು ಇತ್ಯಾದಿಗಳನ್ನು ಒಳಗೊಂಡು ಖಾತೆಯ ರುಜುವಾತುಗಳ ಸುರಕ್ಷತೆಯನ್ನು ಖಚಿತಪಡಿಸಲು ಗ್ರಾಹಕರು ಎಲ್ಲಾ ಸಂಭಾವ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು ಮತ್ತು ಯಾವುದೇ ಸಮಯದಲ್ಲೂ ಯಾರೊಂದಿಗೂ ಹಂಚಿಕೊಳ್ಳಬಾರದು ಮತ್ತು ರಾಜಿಮಾಡಿಕೊಳ್ಳಬಾರದು.
- ಕಾರ್ಡ್ ವಿವರಗಳು, ಸಿವಿವಿ, ಪಿನ್‌ಗಳು ಮತ್ತು ಒಟಿಪಿ ಕೇಳಲು ಆರ್‌ಬಿಎಲ್ ಗ್ರಾಹಕರಿಗೆ ಎಂದೂ ಕರೆ ಮಾಡುವುದಿಲ್ಲ. ಅದನ್ನೇ ಯಾರೊಂದಿಗೂ ಹಂಚಿಕೊಳ್ಳದಂತೆ ನಿಮಗೆ ಮನವಿ ಮಾಡಲಾಗುತ್ತದೆ.
- ಡೆಬಿಟ್ ಕಾರ್ಡ್‌ನ ಯಾವುದೇ ದುರ್ಬಳಕೆಯ/ಅನಧಿಕೃತ ಬಳಕೆಯ ಶಂಕೆ ಉಂಟಾದಲ್ಲಿ, ಗ್ರಾಹಕರು ತಕ್ಷಣವೇ ಆರ್‌ಬಿಎಲ್ ಬ್ಯಾಂಕ್ ಗ್ರಾಹಕ ಕಾಳಜಿ ಕೇಂದ್ರಕ್ಕೆ 18001238040 ಈ ಸಂಖ್ಯೆಗೆ ಕರೆ ಮಾಡುವ ಮೂಲಕ ತಕ್ಷಣವೇ ಡೆಬಿಟ್ ಕಾರ್ಡ್ ಅನ್ನು ನಿರ್ಬಂಧಿಸುತ್ತಾರೆ.
- ಒಂದು ವೇಳೆ ಗ್ರಾಹಕರು ವಂಚಕರೊಂದಿಗೆ ಯಾವುದೇ ಮಾಹಿತಿಯನ್ನು ಹಂಚಿಕೊಂಡರೆ ಬ್ಯಾಂಕ್ ಅದಕ್ಕೆ ಜವಾಬ್ಧಾರರಾಗುವುದಿಲ್ಲ.
- ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಆರ್‌ಬಿಎಲ್ ಬ್ಯಾಂಕ್‌ನ ವೆಬ್ಸೈಟ್‌ನಲ್ಲಿ ವಿಸ್ತೃತ ಡೆಬಿಟ್ ಕಾರ್ಡ್ ನಿಬಂಧನೆಗಳು&ಶರತ್ತುಗಳನ್ನು ನೋಡಿ.
- ಗ್ರಾಹಕರು ಕಾರ್ಡ್‌ನ ದುರ್ಬಳಕೆ/ಕಳವು/ನಷ್ಟದ ಸಂದರ್ಭದಲ್ಲಿ ನಿಗದಿಪಡಿಸಿದ ಕಾರ್ಯವಿಧಾನದ ಮೂಲಕ ಎಲೆಕ್ಟ್ರಾನಿಕ್ ಚಾನೆಲ್‌ನಿಂದ ನೋಂದಣಿ ರದ್ದುಗೊಳಿಸಲು ತಕ್ಷಣದ ಕ್ರಮವನ್ನು ತೆಗೆದುಕೊಳ್ಳಬೇಕು.
- ಖಾತೆಯ ಯಾವುದೇ ಶಂಕಿತ ದುರ್ಬಳಕೆ/ಅನಧಿಕೃತ ಬಳಕೆಯ ಸಂದರ್ಭದಲ್ಲಿ ಗ್ರಾಹಕರು ನೀಡಲಾದ ಯಾವುದೇ ವಿಧಾನವನ್ನು ಬಳಸಿಕೊಂಡು ಬ್ಯಾಂಕ್‌ಗೆ ತಕ್ಷಣವೇ ತಿಳಿಸಬೇಕು.
- ಬಳಕೆದಾರರ ಐಡಿ, ಮೊಬೈಲ್ ಆಪ್ ಮತ್ತು/ಅಥವಾ ನೋಂದಾಯಿತ ಮೊಬೈಲ್ ಸಂಖ್ಯೆ/ಇಮೇಲ್ ಐಡಿಯಿಂದ ಪ್ರಾರಂಭಗೊಂಡ ಮತ್ತು ಎಂಪಿಐಎನ್/ಒಟಿಪಿ/ಪಾಸ್‌ವರ್ಡ್/ಸಿವಿವಿ ಬಳಕೆಯಿಂದ ದೃಢೀಕರಿಸಲ್ಪಟ್ಟ ಯಾವುದೇ

ಮಾನ್ಯವಾದ ವಹಿವಾಟು ಗ್ರಾಹಕರಿಂದ ಸರಿಯಾಗಿ ಪ್ರಾರಂಭಿಸಲ್ಪಟ್ಟಿದೆ ಮತ್ತು ಕಾರ್ಯಗತಗೊಳಿಸಲ್ಪಟ್ಟಿದೆ ಎಂದು ಗ್ರಾಹಕರು ಒಪ್ಪುತ್ತಾರೆ.

## ಗ್ರಾಹಕ ಕುಂದುಕೊರತೆ ಪರಿಹಾರ

ನಿಮ್ಮ ದೂರುಗಳು ನಮ್ಮ ತಪ್ಪುಗಳಿಂದ ನಮಗೆ ಕಲಿಯಲು ಒಂದು ಅವಕಾಶ ಎಂದು ನಾವು ಅರ್ಥೈಸಿಕೊಂಡಿದ್ದೇವೆ. ನಾವು ಎಲ್ಲಾ ದೂರುಗಳನ್ನು ನ್ಯಾಯಯುತವಾಗಿ, ಸಮಗ್ರತೆಯೊಂದಿಗೆ, ಮತ್ತು ಕಠಿಣ ಮಾನದಂಡಗಳು ಮತ್ತು ಸಮಯಶ್ರೇಣಿಗಳೊಂದಿಗೆ ನಿರ್ವಹಿಸುತ್ತೇವೆ. ಪ್ರಸ್ತುತವಿರುವಂತಹ ಸ್ಪರ್ಧಾತ್ಮಕ ಬ್ಯಾಂಕಿಂಗ್ ಸನ್ನಿವೇಶದಲ್ಲಿ, ಗ್ರಾಹಕ ಸೇವೆಯಲ್ಲಿನ ಶ್ರೇಷ್ಠತೆಯು ನಿರಂತರ ವ್ಯಾಪಾರ ಬೆಳವಣಿಗೆಗೆ ಅತೀ ಮುಖ್ಯ ಸಾಧನವಾಗಿದೆ. ಗ್ರಾಹಕ ದೂರುಗಳು ಯಾವುದೇ ಕಾರ್ಪೋರೇಟ್ ಸಂಸ್ಥೆಯಲ್ಲಿ ವ್ಯವಹಾರ ಜೀವನದ ಭಾಗವಾಗಿದೆ. ಸೇವಾ ಸಂಸ್ಥೆಯಾಗಿ, ಗ್ರಾಹಕ ಸೇವೆ ಮತ್ತು ಗ್ರಾಹಕ ತೃಪ್ತಿಯು ನಮ್ಮ ಮುಖ್ಯ ಗುರಿಯಾಗಿರುತ್ತದೆ. ಸಕಾಲದ ಮತ್ತು ದಕ್ಷ ಸೇವೆಯನ್ನು ಒದಗಿಸುವುದು ಹೊಸ ಗ್ರಾಹಕರನ್ನು ಆಕರ್ಷಿಸುವುದು ಮಾತ್ರವಲ್ಲದೆ, ಈಗಿರುವ ಗ್ರಾಹಕರನ್ನು ಉಳಿಸಿಕೊಳ್ಳಲು ಕೂಡಾ ಅತೀ ಮುಖ್ಯವಾಗಿದೆ ಎಂಬುದನ್ನು ನಾವು ನಂಬುತ್ತೇವೆ. ನಮ್ಮ ಬ್ಯಾಂಕ್ "ಔಟ್ ಸರ್ವ್" ಗ್ರಾಹಕರ ದೃಷ್ಟಿಕೋನದಿಂದ ಉತ್ತಮ ಗ್ರಾಹಕ ಸೇವೆ ಮತ್ತು ಉತ್ತಮ ದೂರು ಪರಿಹಾರ ಕಾರ್ಯವಿಧಾನವನ್ನು ಒದಗಿಸಲು ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡಿದೆ. ಹೆಚ್ಚಿನ ವಿವರಗಳಿಗಾಗಿ ನೀವು ಈ ಕೆಳಗಿನ ಲಿಂಕ್ ಕ್ಲಿಕ್ ಮಾಡುವ ಮೂಲಕ ಗ್ರಾಹಕ ಕುಂದುಕೊರತೆ ಪರಿಹಾರ ನೀತಿಯನ್ನು ನೋಡಬಹುದು.

ಗ್ರಾಹಕ ಕುಂದುಕೊರತೆ ಪರಿಹಾರ ನೀತಿ

ನಿಮ್ಮ ಕುಂದುಕೊರತೆಯ ಪರಿಹಾರಕ್ಕಾಗಿ ಬ್ಯಾಂಕ್ ಆಂತರಿಕ ಮ್ಯಾಟ್ರಿಕ್ ವರ್ಧನೆಯನ್ನು ಪ್ರಾರಂಭಿಸಿದ್ದು , ಈ ಕೆಳಗಿನ ಲಿಂಕ್ ಕ್ಲಿಕ್ ಮಾಡುವ ಮೂಲಕ ಅವುಗಳನ್ನು ಪಡೆಯಬಹುದು http://bitly.ws/suvN

ಇತರ ವಿವರಗಳು

ಮೀಸಲಾದ ಸಹಾಯವಾಣಿ:- 1800120616161

ಗ್ರಾಹಕ ಕಾಳಜಿ: 022 6115 6300

ಮೀಸಲಾದ ಇಮೇಲ್ ಐಡಿ :- Customercare@rblbank.com

ಡೆಬಿಟ್ ಕಾರ್ಡ್‌ನ ನಷ್ಟ, ಕಳವು ಅಥವಾ ಅನಧಿಕೃತ ಬಳಕೆಯನ್ನು ವರದಿ ಮಾಡಲು, ದಯವಿಟ್ಟು +91 22 61156300 ಅಥವಾ 1800120616161 ಈ ಸಂಖ್ಯೆಗಳಿಗೆ ಕರೆ ಮಾಡಿ ಅಥವಾ ಮೊಬ್ಯಾಂಕ್‌ಗೆ ಲಾಗಿನ್ ಆಗಿ ಮತ್ತು "ನಿಮ್ಮ ಕಾರ್ಡ್ ನಿರ್ವಹಿಸಿ" ಇಲ್ಲಿಗೆ ಹೋಗಿ ಅಥವಾ ನೆಟ್ ಬ್ಯಾಂಕಿಂಗ್‌ನಲ್ಲಿ ಮನವಿಗಳು ಇಲ್ಲಿಗೆಹೋಗಿ ಮತ್ತು ನಿಮ್ಮ ಕಾರ್ಡ್ ನಿರ್ಬಂಧಿಸಿ. ಹೆಚ್ಚಿನ ವಿವರಗಳಿಗಾಗಿ ಈ ಯುಆರ್‌ಎಲ್ ಕ್ಲಿಕ್ ಮಾಡಿ: http://bitly.ws/suwH

## ಹಕ್ಕು ನಿರಾಕರಣೆ

ಆರ್‌ಬಿಎಲ್ ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ, ಬಾಹ್ಯ ಸೇವಾ ಪೂರೈಕೆದಾರ/ರು ಅಥವಾ ಏಜೆಂಟ್/ಗಳ ಸೇವೆಗಳನ್ನು ಮತ್ತು ಅದರ ಉತ್ಪನ್ನಗಳು/ಸೇವೆಗಳಿಗೆ ಸಂಬಂಧಿಸಿದಂತೆ ಬೇಕಾಗುವ ಅಥವಾ ಅಗತ್ಯವಿರುವಂತಹ ನಿಯಮಗಳನ್ನು ಬಳಸಿಕೊಳ್ಳಬಹುದು.

ಕಾರ್ಡ್‌ನ ಸ್ವೀಕಾರ: ಯಾವುದೇ ಕಾರಣಕ್ಕಾಗಿ ಕಾರ್ಡ್ ಅನ್ನು ಅಪೇಕ್ಷಿತ ರೀತಿಯಲ್ಲಿ ಸ್ವೀಕರಿಸದಿದ್ದಲ್ಲಿ ಅಥವಾ ಎಟಿಎಂ ಹಾಳಾಗಿದ್ದಲ್ಲಿ ಅಥವಾ ವಿದ್ಯುತ್ ಕಡಿತದಿಂದ ಕಾರ್ಯನಿರ್ವಹಿಸದೇ ಇದ್ದಲ್ಲಿ, ಎಟಿಎಂನಲ್ಲಿ ತಾತ್ಕಾಲಿಕ ನಗದು ಕೊರತೆ ಅಥವಾ ಇನ್ಯಾವುದೇ ಕಾರಣಗಳಿಂದ ಬ್ಯಾಂಕ್ ಯಾವುದೇ ಸಂದರ್ಭದಲ್ಲಿ ಕಾರ್ಡ್‌ದಾರರಿಗೆ ಜವಾಬ್ದಾರರಾಗುವುದಿಲ್ಲ.ಇದರಿಂದ ಉಂಟಾಗುವ ಯಾವುದೇ ಪರಿಣಾಮ ಅಥವಾ ಪರೋಕ್ಷ ನಷ್ಟ ಅಥವಾ ಹಾನಿಗೆ ಬ್ಯಾಂಕ್ ಜವಾಬ್ದಾರನಾಗುವುದಿಲ್ಲ.

ಹೊಣೆಗಾರಿಕೆಯ ಮಿತಿ: ಯಾವುದೇ ಮಿತಿ ಇಲ್ಲದೆ ನೇರ ಅಥವಾ ಪರೋಕ್ಷ, ವಿಶೇಷ , ಸಂಬಂಧಿತ ಅಥವಾ ಪರಿಣಾಮಾತ್ಮಕ ಹಾನಿಗಳು, ಅಥವಾ ಅದರ ಬಳಕೆ ಅಥವಾ ಯಾವುದೇ ಗ್ರಾಹಕರಿಂದ ಬಳಕೆಯ ಅಸಮರ್ಥತೆ, ಕಾರ್ಯನಿರ್ವಹಣೆ ಅಥವಾ ಪ್ರಸರಣದಲ್ಲಿನ ವಿಳಂಬ, ಕಂಪ್ಯೂಟರ್ ವೈರಸ್ ಅಥವಾ ಸಿಸ್ಟಂ ವಿಫಲತೆ, ಯಾವುದೇ ನಿರ್ವಹಣೆಯಲ್ಲಿನ ವಿಫಲತೆ, ತಪ್ಪುಗಳು, ಲೋಪ, ತಡೆ, ದೋಷಕ್ಕೆ ಸಂಬಂಧಿಸಿ ಉಂಟಾಗುವ ಆರ್‌ಬಿಎಲ್ ಬ್ಯಾಂಕ್ ವೆಬ್‌ಸೈಟ್‌ಗೆ ಸಂಬಂಧಿಸಿ ನಷ್ಟಗಳು, ವೆಚ್ಚಗಳಿಗೆ ಆರ್‌ಬಿಎಲ್ ಬ್ಯಾಂಕ್ ಜವಾಬ್ದಾರನಾಗಿರುವುದಿಲ್ಲ.

- ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ಸೌಲಭ್ಯವನ್ನು ಪಡೆದಿರುವ ಮೊಬೈಲ್ ಸಂಪರ್ಕ/ಸಿಮ್ ಕಾರ್ಡ್/ಮೊಬೈಲ್ ಫೋನ್‌ಗೆ ಸಂಬಂಧಿಸಿದಂತೆ ಎಲ್ಲಾ ವಾಣಿಜ್ಯ ನಿಬಂಧನೆಗಳು ಮತ್ತು ಶರತ್ತುಗಳ ಎಲ್ಲಾ ಕಾನೂನು, ಅನುಸರಣೆ ಮತ್ತು ಬದ್ಧತೆಗೆ ಗ್ರಾಹಕರು ಜವಾಬ್ದಾರರಾಗಿರುತ್ತಾರೆ ಮತ್ತು ಹೊಣೆಯಾಗಿರುತ್ತಾರೆ ಮತ್ತು ಬ್ಯಾಂಕ್ ಇದಕ್ಕೆ ಸಂಬಂಧಿಸಿದ ಯಾವುದೇ ಜವಾಬ್ದಾರಿಯನ್ನು ಒಪ್ಪುವುದಿಲ್ಲ/ಅಂಗೀಕರಿಸುವುದಿಲ್ಲ.
- ಮೊಬೈಲ್ ಸಂಖ್ಯೆ, ಇಮೇಲ್ ಐಡಿ, ವಿಳಾಸ ಇತ್ಯಾದಿ ಸೇರಿದಂತೆ ಸಂಪರ್ಕ ವಿವರಗಳಲ್ಲಿನ ಯಾವುದೇ ಬದಲಾವಣೆಯ ಕುರಿತು ಆರ್‌ಬಿಎಲ್ ಬ್ಯಾಂಕ್‌ಗೆ ಸೂಚಿಸುವುದು ಮತ್ತು ಬ್ಯಾಂಕ್ ನಿಗದಿಪಡಿಸಿದ ಪ್ರಕ್ರಿಯೆಯ ಪ್ರಕಾರ ಬ್ಯಾಂಕ್‌ನ ದಾಖಲೆಗಳಲ್ಲಿ ಅಂತಹ ಮಾಹಿತಿಯನ್ನು ನವೀಕರಿಸುವುದು ಗ್ರಾಹಕರ ಜವಾಬ್ದಾರಿಯಾಗಿದೆ. ಗ್ರಾಹಕರು ಬ್ಯಾಂಕ್‌ನ ಆಡಳಿತ ನಿಬಂಧನೆಗಳು ಮತ್ತು ಶರತ್ತುಗಳಿಗೆ ಬದ್ಧರಾಗಿರಬೇಕು.
- ಬ್ಯಾಂಕ್ ನಿಗದಿಪಡಿಸಿದ ಯಾವುದೇ ನಿಬಂಧನೆಗಳು ಮತ್ತು ಶರತ್ತುಗಳನ್ನು ಉಲ್ಲಂಘಿಸುವುದು ಕಂಡುಬಂದಲ್ಲಿ, ಬ್ಯಾಂಕ್ ಡೆಬಿಟ್ ಕಾರ್ಡ್ ಅನ್ನು ನಿರ್ಬಂಧಿಸುವ/ಹಿಂಪಡೆಯುವ ಅಧಿಕಾರವನ್ನು ಹೊಂದಿದೆ.